ಸಂಪುಟ : 13 Volume ಸಂಚಿಕೆ : 191 Issue ಪುಟಗಳು : 08 Pages ಗುರುವಾರ 11 ಸೆಪ್ಟೆಂಬರ್ 2025 ₹2 RNINO:KARKAN/2011/48371 BDR/054/2026-20274 mallammanudi@gmail.com www.mallammanudi.in 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

ಬೆಳಗು
'ನಿನ್ನೆಯ ನೆನಪಲ್ಲಿ ಇಂದು ಜೀವಿಸಿದರೂ ನಾಳಿನ ಭರವಸೆಗಾಗಿ ಪ್ರಶ್ನೆ ಕೇಳುವುದನ್ನು ನಿಲ್ಲಿಸಬಾರದು'
–ಐನ್‌ಸ್ಟೀನ್

ಸಂಪಾದಕರು: ರಮೇಶ ರೆಡ್ಡಿ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಡಿ.ಕೆ.ಸಿದ್ರಾಮ ನೇತೃತ್ವದಲ್ಲಿ ಹೋರಾಟ 2
ಜ್ಞಾನದ ಸಂಪತ್ತು ಅವಶ್ಯಕ 4
ವಾರದಲ್ಲಿ ಬಾಕಿ ಬೆಳೆ ವಿಮೆ 8

## ಶಿರೂರಿನ ಬಿಎಸ್‌ಎಫ್ ಯೋಧ ರಮೇಶ ಸಾವು



ಮಲ್ಲಮ್ಮ ನುಡಿ ವಾರ್ತೆ
ಬಾಗಲಕೋಟೆ,ಸೆ.10:ಭಾರತೀಯ ಸೇನಾ ಪಡೆಯ ಗಡಿ ಭದ್ರತಾ ಪಡೆಯಲ್ಲಿ(ಬಿಎಸ್ ಎಫ್) ಕಳೆದ 18 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದ ಬಾಗಲಕೋಟೆ ತಾಲೂಕಿನ ಶಿರೂರ ಪಟ್ಟಣದ ಯೋಧ ರಮೇಶ ನಾಗಪ್ಪ ಬದಾಮಿ (42) ಕಳೆದ ಕೆಲ ದಿನಗಳ ತೀವ್ರ ಅಸ್ವಸ್ಥತೆಯಿಂದಾಗಿ ಸೋಮವಾರ ಮೃತಪಟ್ಟಿದ್ದಾರೆ.

ಜಮ್ಮು ಕಾಶ್ಮೀರ ಶ್ರೀನಗರದ 80ನೆಯ ಬಿ.ಎಸ್.ಎಫ್ ಬಟಾಲಿಯನ್ ದಲ್ಲಿ ಕೆಲಸ ನಿರ್ವಹಿಸುತ್ತಿದ್ದ ರಮೇಶ ಬದಾಮಿ ಕಳೆದ ಮೂರು ತಿಂಗಳ ಹಿಂದೆ ಬ್ರೇನ್ ಟ್ಯೂಮರ್ ಗೆ ಒಳಗಾಗಿ ಶ್ರೀನಗರದಲ್ಲಿಯೇ ಮಿಲಿಟರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಕೋಮಾ ಸ್ಥಿತಿಯಲ್ಲೇ ಇದ್ದ ರಮೇಶ ಬದಾಮಿ ಸೋಮವಾರ ಕೊನೆಯುಸಿರೆಳೆದರು ಎಂದು ಅವರ ಆರೈಕೆಗೆ ತೆರಳಿದ್ದ ಅವರ ಸಹೋದರ ಗ್ಯಾನಪ್ಪ ತಿಳಿಸಿದರು, ಮೃತ ರಮೇಶ ಅವರಿಗೆ ತಂದೆ, ತಾಯಿ, ಪತ್ನಿ, ಪುತ್ರ, ಸಹೋದರ, ಸಹೋದರಿಯರು ಇದ್ದಾರೆ. ಶ್ರೀನಗರದಿಂದ ಮೃತ ದೇಹವನ್ನು ವಿಶೇಷ ವಿಮಾನದಲ್ಲಿ ಬಿಎಸ್ ಎಫ್ ಅಧಿಕಾರಿ ರೇಣುಕರಾಜ್ ಬುಧವಾರ ಬೆಳಿಗ್ಗೆ ಬೆಂಗಳೂರಿಗೆ ತಂದ ನಂತರ ಅಲ್ಲಿನ ಬಿಎಸ್ ಎಫ್ ಸೆಂಟರನಿಂದ ಮಿಲಿಟರಿ ವಾಹನದಲ್ಲಿ ಬೆಂಗಳೂರಿನ ಬಿಎಸ್ ಎಫ್ ಇನ್ಸ ಪೆಕ್ಟರ್ ಲಾಲಸಾಬ ನದಾಫ ನೇತೃತ್ವದ 10 ಜನ ಯೋಧರ ತಂಡ ಸಂಜೆ 8 ಗಂಟೆಗೆ ಬಾಗಲಕೋಟೆಗೆ ತಂದು ಕುಮಾರೇಶ್ವರ ಆಸ್ಪತ್ರೆಯ ಶವಾಗಾರದಲ್ಲಿ ಇರಿಸಲಾಯಿತು.

ಗುರುವಾರ ಬೆಳಿಗ್ಗೆ ಶಿರೂರ ಪಟ್ಟಣದ ಸಿದ್ದೇಶ್ವರ ಪ್ರೌಢಶಾಲೆಯ ಮೈದಾನದಲ್ಲಿ ರಮೇಶ ಬದಾಮಿ ಕಳೆಬರವನ್ನು ಸಾರ್ವಜನಿಕರ ದರ್ಶನಕ್ಕೆ ಇಡಲಾಗುವುದು. ನಂತರ ಮಧ್ಯಾಹ್ನ 12 ಗಂಟೆಗೆ ಸಕಲ ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ ನೆರವೇರಲಿದೆ.

## ಸಾಲಭಾದೆ ರೈತ ಆತ್ಮಹತ್ಯೆ



ಮಲ್ಲಮ್ಮ ನುಡಿವಾರ್ತೆಭಾಲ್ಕಿ:ಸೆ.10: ತಾಲೂಕಿನ ನಾವದಗಿ ಗ್ರಾಮದ ರೈತ ಲೋಕೇಶ ಕಲ್ಲಪ್ಪ ಮೊಳಕೇರೆ (42) ಮಂಗಳವಾರ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತ ರೈತ ಪಿಕೆಪಿಎಸ್ ನಾವದಗಿಯಲ್ಲಿ 1.5 ಲಕ್ಷ ರೂ. ಸೇರಿದಂತೆ ಖಾಸಗಿಯಾಗಿ ಸಾಕಷ್ಟು ಸಾಲ ಮಾಡಿಕೊಂಡಿದ್ದರು. ಅತಿವೃಷ್ಟಿಯಿಂದತಮ್ಮ 2.21 ಎಕರೆ ಹೊಲದಲ್ಲಿಬೆಳೆದಬೆಳೆಯೆಲ್ಲಾಹಾಳಾಗಿಸಾಲತೀರಿಸುವುದುಕಷ್ಟವಾಗಿದೆ ಎಂದುಮಂಗಳವಾರರಾತ್ರಿವಿಷಸೇವಿಸಿಆತ್ಮಹತ್ಯೆಮಾಡಿಕೊಂಡಿದ್ದಾರೆ. ಮೃತರು ಪತ್ನಿ ಹಾಗು ಇಬ್ಬರು ಹೆಣ್ಣು ಮಕ್ಕಳು, ಒಬ್ಬ ಗಂಡು ಮಗು ಸೇರಿದಂತೆ ಅಪಾರ ಬಂಧುಬಳಗವನ್ನಗಲಿದ್ದಾರೆ. ಮೃತ ರೈತನ ಹೆಂಡತಿ ಲಕ್ಷ್ಮೀಬಾಯಿನೀಡಿರುವದೂರಿನಮೇರೆಗೆಖಟಕಚಿಂಚೋಳಿಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಜಿಲ್ಲಾಧಿಕಾರಿಗಳಿಂದ ನಗರದ ಚರಂಡಿ ವ್ಯವಸ್ಥೆ ವೀಕ್ಷಣೆ

ಮಲ್ಲಮ್ಮ ನುಡಿವಾರ್ತೆಬೀದರ,ಸೆ.10:ಜಿಲ್ಲಾಧಿಕಾರಿಶಿಲ್ಪಾಶರ್ಮಾ ಅವರಿಂದುನಗರದಅಭಿವೃದ್ಧಿದೃಷ್ಟಿಯಿಂದಬ್ರಿಮ್ಸ್ ಸರ್ಕಲ್,ರೋಟರಿ ರೋಟರಿಸರ್ಕಲ್‌ನಾಯಕಮಾನ್,ಭಗತ್‌ಸಿಂಗ್‌ಸರ್ಕಲ್,ಮಹಾವೀರ್ ಸರ್ಕಲಗಳಲ್ಲಿಸಂಚರಿಸಿನಗರದಲ್ಲಿರುವಒಳಚರಂಡಿಗಳಸ್ಥಿತಿಗತಿಯಬಗ್ಗೆ ವೀಕ್ಷಣೆಮಾಡಿಹಾಗೂನಗರದಲ್ಲಿರುವಒಳಚರಂಡಿಗಳನಕ್ಷೆಪರಿಶೀಲನೆ



ಮಾಡಿದರು.ಈಸಂದರ್ಭದಲ್ಲಿ ಬೀದರಸಹಾಯಕಆಯುಕ್ತ ಮಹಮ್ಮದ ಶಕೀಲ್, ಬೀದರ ನಗರಸಭೆಯ ಪೌರಾಯುಕ್ತ ಶಿವರಾಜರಾಥೋಡಸೇರಿದಂತೆ ಇತರರು ಉಪಸ್ಥಿತರಿದ್ದರು.

## ಮಾಜಿ ಶಾಸಕ ಗುಂಡಪ್ಪ ವಕೀಲ್‌ಗೆ 30.99 ಲಕ್ಷ ಡಿಜಿಟಲ್ ವಂಚನೆ



ಮಲ್ಲಮ್ಮ ನುಡಿ ವಾರ್ತೆ ಬೀದರ. ಸೆ. 10 : ಔರಾದ್ ಕ್ಷೇತ್ರದ ಮಾಜಿ ಶಾಸಕ ಗುಂಡಪ್ಪ ವಕೀಲ್ ಅವರ ಬ್ಯಾಂಕ್ ಖಾತೆಯಿಂದ 30.99ಲಕ್ಷ ವಂಚಿಸಿರುವಪ್ರಕರಣಬೆಳಕಿಗೆಬಂದಿದೆ. ಈ ಸಂಬಂಧ ಗುಂಡಪ್ಪ ವಕೀಲರು ಮಂಗಳವಾರಬೆಂಗಳೂರಿನ ಸೈಬರ್ ಪೊಲೀಸ್‌ಠಾಣೆಗೆದೂರುನೀಡಿದ್ದಾರೆ. ಆಗಸ್ಟ್ 12ರಂದು ತಮ್ಮ ಬ್ಯಾಂಕ್ ಖಾತೆಯಿಂದ 30.99 ಲಕ್ಷ ಅಕ್ರಮವಾಗಿ ದೋಚಲಾಗಿದೆ.ಇದರಲ್ಲಿ ಮುಂಬೈ ಮೂಲದ ಸಂದೀಪಕುಮಾರ ಹಾಗೂ ನೀರಜ್ ಕುಮಾರ ಅವರಕೈವಾಡವಿದ್ದು, ಅವರ ವಿರುದ್ಧ ತನಿಖೆ ನಡೆಸುವಂತೆ ತಿಳಿಸಿದ್ದಾರೆ.

# ರಾಜ್ಯದ ಜನರಿಗೆ ಬಿಗ್ ಶಾಕ್

## 3.65 ಲಕ್ಷ ಅನರ್ಹ ಬಿಪಿಎಲ್ ಕಾರ್ಡ್ ರದ್ದು: ಸಿಎಂ

ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು:ಸೆ.10: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ರಾಜ್ಯದ ಜನತೆಗೆ ಬಿಗ್ ಶಾಕ್ ನೀಡಿದ್ದು, 3.65 ಲಕ್ಷ ಅನರ್ಹಬಿಪಿಎಲ್‌ಕಾರ್ಡ್‌ಗಳನ್ನುರದ್ದುಗೊಳಿಸಲಾಗಿದ್ದು, ಇನ್ನೂ ಸಾಕಷ್ಟು ಜನ ಅನರ್ಹರು ಬಿಪಿಎಲ್ ಕಾರ್ಡ್ ಹೊಂದಿದ್ದು, ಅವುಗಳನ್ನು ರದ್ದುಪಡಿಸುವಂತೆ ಖಡಕ್ ಸೂಚನೆ ನೀಡಿದ್ದಾರೆ.ಇಂದು ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಆಹಾರ, ನಾಗರಿಕ ಸರಬರಾಜು ಮತ್ತುಗ್ರಾಹಕರವ್ಯವಹಾರಗಳಇಲಾಖೆಯಪ್ರಗತಿ ಪರಿಶೀಲನಾಸಭೆಯಲ್ಲಿಸಿಎಂಸಿದ್ದರಾಮಯ್ಯಅವರು ಈಸೂಚನೆನೀಡಿದ್ದಾರೆ.ಅನರ್ಹಬಿಪಿಎಲ್‌ಕಾರ್ಡ್ ಗಳನ್ನುರದ್ದುಪಡಿಸಲುಕಟ್ಟುನಿಟ್ಟಿನಕ್ರಮಕೈಗೊಳ್ಳಬೇಕು. ಆದರೆಅರ್ಹಬಿಪಿಎಲ್‌ಕಾರ್ಡುದಾರರಿಗೆಯಾವುದೇ ತೊಂದರೆಯಾಗದಂತೆನೋಡಿಕೊಳ್ಳಬೇಕು.ಅರ್ಹರು ಯಾರಾದರೂಬಿಟ್ಟುಹೋಗಿದ್ದರೆಅವರಿಗೆಬಿಪಿಎಲ್ ಕಾರ್ಡ್‌ನೀಡಲುಕ್ರಮಕೈಗೊಳ್ಳಬೇಕುಎಂದುಸಿಎಂ ಸೂಚಿಸಿದರು.ಈಗಾಗಲೇಗುರುತಿಸಲಾಗಿರುವಅನರ್ಹ



ಬಿಪಿಎಲ್ ಪಡಿತರ ಚೀಟಿದಾರರ ಪೈಕಿ 3,65,614 ಪಡಿತರ ಚೀಟಿಗಳನ್ನು ರದ್ದು ಮಾಡಲಾಗಿದೆ. ಅನ್ನಭಾಗ್ಯ ಯೋಜನೆಯಡಿ ಅಕ್ಕಿಯ ಜೊತೆಗೆ ಪೌಷ್ಟಿಕ ಧಾನ್ಯ, ಅಗತ್ಯ ಆಹಾರ ಸಾಮಾಗ್ರಿಗಳನ್ನು ಒಳಗೊಂಡ ಕಿಟ್ ಒದಗಿಸುವ ಕುರಿತು ಪರಿಶೀಲನೆ ನಡೆಸಲಾಗುವುದು.ಈಕುರಿತುಅಧಿಕಾರಿಗಳುಪ್ರಸ್ತಾವನೆ ಸಲ್ಲಿಸಲಿ ಎಂದರು.ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯದವರಿಗೆ ಹೊಸ ನ್ಯಾಯ ಬೆಲೆ ಅಂಗಡಿಗಳನ್ನು ಆದ್ಯತೆ ಮೇಲೆ ನೀಡಲು ಕ್ರಮ ಕೈಗೊಳ್ಳಬೇಕು. ಆಹಾರ ಧಾನ್ಯಗಳನ್ನು ಸರಬರಾಜು ಮಾಡುತ್ತಿರುವ ವಾಹನಗಳಿಗೆ ಜಿಪಿಎಸ್ ಟ್ರಾಕರ್ ಗಳನ್ನು ಅಳವಡಿಸಬೇಕು. ರಾಜ್ಯದಲ್ಲಿರುವ ಎಲ್ಲಾ ಗೋದಾಮುಗಳಲ್ಲಿ ಸಿಸಿಟಿವಿ ಅಳವಡಿಸಲು ಕ್ರಮ ಕೈಗೊಳ್ಳಬೇಕುಎಂದುಅಧಿಕಾರಿಗಳಿಗೆಸೂಚಿಸಿದರು. ಕನಿಷ್ಠಬೆಂಬಲಯೋಜನೆಯಡಿಪ್ರಾಥಮಿಕಕೃಷಿಪತ್ತಿನ ಸಹಕಾರ ಸಂಘಗಳು ಹಾಗೂ ಸ್ವಸಹಾಯ ಸಂಘಗಳ ಸಹಯೋಗದೊಂದಿಗೆಆಹಾರಧಾನ್ಯಗಳಖರೀದಿಪ್ರಕ್ರಿಯೆ ನಡೆಸಬೇಕು.ಇದೇಪ್ರಥಮಬಾರಿಗೆ0.29ಲಕ್ಷಮೆಟ್ರಿಕ್ ಟನ್ ಕಿರು ಸಿರಿಧಾನ್ಯಗಳನ್ನು ಖರೀದಿಸಲಾಗುತ್ತಿದೆ. ಆಹಾರ ಮತ್ತು ನಾಗರಿಕ ಸರಬರಾಜು ನಿಗಮದಲ್ಲಿ ಖಾಲಿಯಿರುವ ಅಗತ್ಯ ಸಿಬ್ಬಂದಿಗಳ ನೇಮಕಾತಿಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಸಿಎಂ ಹೇಳಿದ್ದಾರೆ.

## 371(ಜೆ) ಅಡಿ ಖಾಲಿ ಹುದ್ದೆಗಳ ಭರ್ತಿಗೆ ಆಗ್ರಹ



ಮಲ್ಲಮ್ಮ ನುಡಿ ವಾರ್ತೆ ಕಲಬುರ್ಗಿ, ಸೆ.10: ಕಲ್ಯಾಣ ಕರ್ನಾಟಕ ಹೋರಾಟ ಸಮಿತಿಯ ಪ್ರಮುಖರು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಬುಧವಾರ ರಾಜ್ಯದ ಗ್ರಾಮೀಣ ಅಭಿವೃದ್ಧಿ ಪಂಚಾಯಿತಿ ರಾಜ್ ಐಟಿಬಿಟಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ 371ನೇ ಜೇ ಕಲಂಅನುಷ್ಠಾನಸಮಿತಿಯಅಧ್ಯಕ್ಷಪ್ರಿಯಾಂಕ್‌ಖರ್ಗೆಯವರಿಗೆಭೇಟಿ ಮಾಡಿಕಲ್ಯಾಣಕರ್ನಾಟಕಪ್ರದೇಶದಲ್ಲಿಖಾಲಿಇರುವಹುದ್ದೆಗಳಭರ್ತಿ ಅದರಲ್ಲೂಶಿಕ್ಷಕರನೇಮಕಾತಿಮತ್ತುಗುಲಬರ್ಗಾ ವಿಶ್ವವಿದ್ಯಾಲಯದ ಸರ್ವಾಂಗೀಣ ಅಭಿವೃದ್ಧಿ ಸೇರಿದಂತೆ ಕಲ್ಯಾಣ ಕರ್ನಾಟಕದ ಅಭಿವೃದ್ಧಿ ವಿಷಯಗಳಬಗ್ಗೆಚರ್ಚಿಸಿಮನವಿಪತ್ರಸಲ್ಲಿಸಿದರು.ಎಲ್ಲಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ, ವಿಶೇಷವಾಗಿ ಕಲ್ಯಾಣದ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಲು ತುರ್ತಾಗಿ ಶಿಕ್ಷಕರ ನೇಮಕಾತಿ, ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿಖಾಯಂಕುಲಪತಿಗಳನೇಮಕಾತಿಗೆಪೂರಕವಾಗಿ ವಿಶ್ವವಿದ್ಯಾಲಯದಲ್ಲಿಖಾಲಿಹುದ್ದೆಗಳಭರ್ತಿಸೇರಿದಂತೆಗುಲಬರ್ಗಾ ವಿಶ್ವವಿದ್ಯಾಲಯದಸರ್ವಾಂಗೀಣಅಭಿವೃದ್ಧಿಗೆವಿಶೇಷಆದ್ಯತೆನೀಡಲು, ಎಲ್‌ಆಂಡ್‌ಟಿನಾಗರಿಕರಮೇಲೆನೀರುಸರಬರಾಜಿಗೆಸಂಬಂಧಿಸಿದಂತೆ ಹಿಂದಿನಬಾಕಿಹೆಸರಿನಲ್ಲಿದುಬಾರಿಹಣವಸೂಲಿಮಾಡುತ್ತಿದ್ದರೂಏಕ ಪಕ್ಷೀಯಧೋರಣೆಯಬಗ್ಗೆತಕ್ಷಣಗಮನಹರಿಸಲುಅವರುಕೋರಿದರು.

## ಅಕ್ರಮ ಗಣಿಗಾರಿಕೆ ತಡೆ, ಆಸ್ತಿ ಜಪ್ತಿ ಕಾನೂನಿಗೆ ಅಧಿಕೃತ ಮುದ್ರೆ

ಬೆಂಗಳೂರು:ಸೆ.10:ಅಕ್ರಮಗಣಿಗಾರಿಕೆವಿರುದ್ಧದಕ್ರಮಗಳನ್ನುಬಲಪಡಿಸುವ ಮತ್ತುಕಾನೂನುಬಾಹಿರವಿಧಾನಗಳಮೂಲಕಸಂಗ್ರಹಿಸಲಾದಆಸ್ತಿಗಳನ್ನು ವಶಪಡಿಸಿಕೊಳ್ಳಲು ರಾಜ್ಯ ಸರ್ಕಾರ ಹೊಸ ಕಾನೂನು ಜಾರಿಗೊಳಿಸಿದೆ. ಸೆಪ್ಟೆಂಬರ್ 9 ರಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಕರ್ನಾಟಕ ಅಕ್ರಮ ಗಣಿಗಾರಿಕೆ ಮತ್ತು ಕಾನೂನುಬಾಹಿರ ಸ್ವತ್ತನ್ನು ವಶಪಡಿಸಿಕೊಳ್ಳುವುದಕ್ಕಾಗಿ ಮತ್ತು ಜಪ್ತಿಗಾಗಿ ವಸೂಲಾತಿ ಆಯುಕ್ತರ ನೇಮಕಾತಿ ಅಧಿನಿಯಮ, 2025 ಕ್ಕೆಸಹಿ ಹಾಕಿದ್ದು, ಬುಧವಾರಅದನ್ನು ರಾಜ್ಯಗೆಜೆಟ್‌ನಲ್ಲಿಪ್ರಕಟಿಸಲಾಗಿದೆ.ರಾಜ್ಯದಾದ್ಯಂತಜಪ್ತಿಮತ್ತುಮುಟ್ಟುಗೋಲುಪ್ರಕ್ರಿಯೆಗಳನ್ನುಮೇಲ್ವಿಚಾರಣೆಮಾಡಲುಹೆಚ್ಚುವರಿಮುಖ್ಯ ಕಾರ್ಯದರ್ಶಿ ಹುದ್ದೆಗಿಂತ ಕಡಿಮೆಯಿಲ್ಲದ ಹಿರಿಯ ಅಧಿಕಾರಿಯನ್ನು ವಸೂಲಾತಿ ಆಯುಕ್ತರಾಗಿ ನೇಮಕ ಮಾಡುವುದಕ್ಕೆ ಈ ಕಾಯ್ದೆ ಅವಕಾಶ ನೀಡುತ್ತದೆ.ಕಾಯ್ದೆಯಡಿಯಲ್ಲಿ, ವಸೂಲಾತಿ ಆಯುಕ್ತರು ಅಕ್ರಮ ಗಣಿಗಾರಿಕೆಯಿಂದ ಸಂಪಾದಿಸಿದ ಚರ ಮತ್ತು ಸ್ಥಿರ ಆಸ್ತಿಗಳನ್ನು ವಶಪಡಿಸಿಕೊಳ್ಳುವ, ಅಧೀನಅಧಿಕಾರಿಗಳನ್ನುಮೇಲ್ವಿಚಾರಣೆಮಾಡುವ ಮತ್ತುಸಿವಿಲ್‌ನ್ಯಾಯಾಲಯಕ್ಕೆಸಮಾನವಾದಅಧಿಕಾರವನ್ನುಚಲಾಯಿಸುವ ಅಧಿಕಾರ ಹೊಂದಿರುತ್ತಾರೆ.

## ಬಾಕಿ ಶುಲ್ಕ ಪಾವತಿಗಾಗಿ ಮಾಂಗಲ್ಯ ಸರ, ಬುಗುಡಿ, ಓಲೆ ಬಿಚ್ಚಿಸಿಕೊಂಡ ಆರೋಪ

ಮಲ್ಲಮ್ಮ ನುಡಿವಾರ್ತೆ ಕೊಪ್ಪಳ :ಸೆ.10: ಗಂಗಾವತಿ ಸ್ಥಳೀಯ ನರ್ಸಿಂಗ್ ಕಾಲೇಜ್‌ನಲ್ಲಿ ವಿದ್ಯಾರ್ಥಿನಿಯ ಬಾಕಿ ಶುಲ್ಕ ಪಾವತಿಗಾಗಿ ವಿದ್ಯಾರ್ಥಿನಿ ತಾಯಿಯ ಮಾಂಗಲ್ಯ ಸರ, ಬುಗುಡಿ, ಓಲೆ ಸೇರಿ ಇತರೆ ಚಿನ್ನವನ್ನು ಬಿಚ್ಚಿಸಿಕೊಂಡು ಅಮಾನವೀಯ ಘಟನೆ ಜರುಗಿದೆ.ಬಿಬಿಸಿ ಕಾಲೇಜಿನಲ್ಲಿ ಮ್ಯಾನೇಜ್ಮೆಂಟ್ ಕೋಟಾದಡಿ ಬಿಎಸ್ಸಿ ನರ್ಸಿಂಗ್ ಕೋರ್ಸಿಗೆ - ಪ್ರವೇಶ ಪಡೆದಿದ್ದ ಮುಸಲಾಪೂರ ಗ್ರಾಮದ ಕಾವೇರಿ ಎನ್ನುವ ವಿದ್ಯಾರ್ಥಿನಿ ಆರಂಭದಲ್ಲಿ 10 ಸಾವಿರ ಶುಲ್ಕ ಪಾವತಿಸಿ ಉಳಿದ ಹಣವನ್ನು ಸ್ಕಾಲರ್‌ಶಿಪ್ ಬಂದ ನಂತರ ಪಾವತಿ ಮಾಡುವುದಾಗಿ ಹೇಳಿ ಕಾಲೇಜಿನ ತರಗತಿಗೆ ಹಾಜರಾಗಿದ್ದರು. ನಂತರ ನರ್ಸಿಂಗ್ ಕೋರ್ಸಿನ ವಿಷಯಗಳು ಅರ್ಥವಾಗುತ್ತಿಲ್ಲ ಎಂದು ಸತತ ಗೈರಾಗಿದ್ದಳು. ನಂತರ ಸರಕಾರಿ ಕೋಟಾದಡಿಯಲ್ಲಿ ಗದಗನಲ್ಲಿ ನರ್ಸಿಂಗ್ ಸೀಟು ಪಡೆಯಲು ಅರ್ಜಿಸಲ್ಲಿಸಿಟಿಸಿಹಾಗೂದಾಖಲಾತಿಯನ್ನುಪಡೆಯಲು10 ದಿನಗಳಿಂದ ನಿತ್ಯವೂಆಗಮಿಸಿಬೇಡಿಕೊಂಡರೂನಾಲ್ಕುವರ್ಷದಶುಲ್ಕ4 ಲಕ್ಷರೂ. ಪಾವತಿಸುವವರೆಗೆದಾಖಲಾತಿಕೊಡುವುದಿಲ್ಲ.ಇದರಿಂದನಮ್ಮ ಸಂಸ್ಥೆಗೆ ನಷ್ಟವಾಗುತ್ತದೆ.ಇಲ್ಲದಿದ್ದರೆನಾವೇಶುಲ್ಕಭರಿಸುತ್ತೇವೆಕೋರ್ಸ್‌ಮುಗಿದ ನಂತರ10 ವರ್ಷನಮ್ಮಲ್ಲಿವೇತನವಿಲ್ಲದೇಕೆಲಸಮಾಡುವುದಾಗಿಬಾಂಡ್ ಮೇಲೆಬರೆದುಕೊಡುವಂತೆಸಂಸ್ಥೆಯಅಧ್ಯಕ್ಷರುತಾಕೀತುಮಾಡಿದ್ದಾರೆ. ಸೋಮವಾರಗ್ರಾಮೀಣಪೊಲೀಸ್‌ಠಾಣೆಗೆತೆರಳಿಸಿಪಿಐಮೂಲಕಸಂಸ್ಥೆಯ ಅಧ್ಯಕ್ಷರಿಗೆ ಮೊಬೈಲ್ ಕರೆ ಮಾಡಿದರೂ ಕರೆ ಸ್ವೀಕರಿಸದೇ ನರ್ಸ್‌ಗಳಿಗೆ ಮೊಬೈಲ್ ಕೊಟ್ಟು ಇಲ್ಲ ಎಂದು ಹೇಳಿಸಿದ್ದಾರೆ.ಪುನಹ ಮಂಗಳವಾರ ಕಾಲೇಜಿಗೆ ಪಾಲಕರೊಂದಿಗೆ ವಿದ್ಯಾರ್ಥಿನಿ ಕಾವೇರಿ ಆಗಮಿಸಿ ದಾಖಲೆ ಕೇಳಿದಾಗ ಅಧ್ಯಕ್ಷರು ಕೋಪಗೊಂಡು ಕೋಟ್ಯಾಂತರ ಹಾಕಿ ಕಾಲೇಜು ಮಾಡಿದ್ದುದಾಖಲಾತಿಗಳುಬೇಕಾದರೆಮಾಂಗಲ್ಯಸರ,ಓಲೆ,ಬುಗುಡಿ, ಜುಮ್ಮಿಸೇರಿಮೈಮೇಲಿರುವಎಲ್ಲಾಬಂಗಾರವನ್ನುಕೊಡುವಂತೆತಾಕೀತು ಮಾಡಿದ್ದರಿಂದ ವಿದ್ಯಾರ್ಥಿನಿಯ ತಾಯಿ ರೇಣುಕಮ್ಮ ಮೈಮೇಲಿದ್ದ ತಾಳಿ,ಸೇರಿಸುಮಾರು5 ತೊಲೆಯಷ್ಟುಬಂಗಾರವನ್ನುಬಿಚ್ಚಿಅಧ್ಯಕ್ಷರಿಗೆ ಕೊಟ್ಟುಮಗಳದಾಖಲಾತಿಕೊಡುವಂತೆಮನವಿಮಾಡಿದರೂಸಂಸ್ಥೆಯ ಅಧ್ಯಕ್ಷನಿರ್ಲಕ್ಷ್ಯವಾಗಿಮಾತನಾಡಿದ್ದಾರೆಂದುವಿದ್ಯಾರ್ಥಿನಿಯಪಾಲಕರು ಆಕ್ರೋಶವ್ಯಕ್ತಪಡಿಸಿದ್ದಾರೆ.ಮ್ಯಾನೇಜ್ಮೆಂಟ್‌ಕೋಟಾದಡಿಸೀಟುಪಡೆದು 10 ಸಾವಿರ ರೂ.ಪಾವತಿಸಿ ಉಳಿದ ಬಾಕಿ ಶುಲ್ಕವನ್ನು ಕಂತುಗಳಲ್ಲಿ ಪಾವತಿಸುವ ಭರವಸೆಯೊಂದಿಗೆ ಬಿಎಸ್ಸಿ ನರ್ಸಿಂಗ್ ಪ್ರವೇಶ ಪಡೆದು ಒಂದು ತಿಂಗಳು ಕಾಲೇಜಿಗೆ ಬಂದು ನಂತರ ಗೈರಾಗಿದ್ದಾಳೆ. ಇದೀಗ ಟಿಸಿ ಹಾಗೂ ಇತರೆ ಶೈಕ್ಷಣಿಕ ದಾಖಲೆ ಕೊಡುವಂತೆ ಕೇಳಿದ್ದು ಉಳಿದ ನಾಲ್ಕು ವರ್ಷದ ಶುಲ್ಕ ಪಾವತಿಸಿದರೆ ಕೊಡುವುದಾಗಿ ಹೇಳಲಾಗಿತ್ತು. ಆದರೆ ಅವರ ತಾಯಿ ಮತ್ತು ತಂದೆ ಬಂದು ತಾಳಿ ಹಾಗೂ ಇತರೆ ಚಿನ್ನವನ್ನು ನಮಗೆ ಕೊಟ್ಟು ಈ ಚಿನ್ನವನ್ನು ಒತ್ತೆ ಇಟ್ಟು ಶುಲ್ಕ ಪಾವತಿಸಿಕೊಳ್ಳುವಂತೆ ತಾಳಿ, ಬುಗುಡಿ ಇತರೆ ಚಿನ್ನವನ್ನು ಕೊಟ್ಟಿದ್ದಾರೆ. ನಾವು ಕೇಳಿ ಪಡೆದಿಲ್ಲ.

-ಡಾ.ಸಿ.ಬಿ.ಚಿನಿವಾಲರ್
ಅಧ್ಯಕ್ಷರು ಬಿಬಿಸಿ ನರ್ಸಿಂಗ್ ಕಾಲೇಜು ಗಂಗಾವತಿ.

ನಮ್ಮ ಮಗಳುತಾನೇಸ್ವತಃಬಂದುಬಿಬಿಸಿನರ್ಸಿಂಗ್‌ಕಾಲೇಜಿಗೆಪ್ರವೇಶ ಪಡೆದು10ಸಾವಿರಶುಲ್ಕಮಾತ್ರಪಾವತಿಸಿದ್ದಾಳೆ.ನಂತರಕಾಲೇಜಿಗೆಗೈರಾಗಿದ್ದು ಮುಂದಿನವಿದ್ಯಾಭ್ಯಾಸಮಾಡಲುಟಿಸಿಮತ್ತುಇತರೆದಾಖಲಾತಿಗಳನ್ನು ಕೇಳಲು ಬಂದರೆ ಕಾಲೇಜಿನ ಅಧ್ಯಕ್ಷ ಡಾ.ಸಿ.ಬಿ.ಚಿನಿವಾಲರ್ ಯಾರಿಗೆ ಹೇಳಿದರೂ ನಾಲ್ಕು ಲಕ್ಷ ರೂ.ಗಳನ್ನು ನಷ್ಟ ಮಾಡಿಕೊಂಡು ದಾಖಲೆ ಕೊಡುವುದಿಲ್ಲ. ಉಳಿದ ಶುಲ್ಕ ಪಾವತಿಸಿ ಇಲ್ಲದಿದ್ದರೆ ಕತ್ತಿನಲ್ಲಿರುವ ಮಾಂಗಲ್ಯ ಸೇರಿ ಇತರೆ ಚಿನ್ನದ ಸಾಮಾನು ಇಟ್ಟು ಟಿಸಿ ತೆಗೆದುಕೊಂಡು ಹೋಗುವಂತೆ ತಾಕೀತು ಮಾಡಿದ್ದಲ್ಲದೇ ನಮ್ಮನ್ನು ನಿಂದಿಸಿದ್ದರಿಂದ ತಾಳಿ, ಬುಗುಡಿ, ಓಲೆ ಸೇರಿ 5 ತೊಲೆಯಷ್ಟು ಚಿನ್ನವನ್ನು ಅಧ್ಯಕ್ಷರಿಗೆ ಕೊಟ್ಟಿದ್ದೇವೆ.ಮಾನವೀಯತೆಇಲ್ಲದಂತೆಬಿಬಿಸಿನರ್ಸಿಂಗ್‌ಕಾಲೇಜಿನವರು ವರ್ತಿಸಿದ್ದುನೋವಾಗಿದೆ.ಮಕ್ಕಳವಿದ್ಯಾಭ್ಯಾಸಕ್ಕಿಂತಚಿನ್ನಸೇರಿಯಾವುದು ದೊಡ್ಡದಲ್ಲ ಎಂದು ತಾಳಿ ಸೇರಿ ಎಲ್ಲಾ ಚಿನ್ನವನ್ನು ಕೊಟ್ಟಿದ್ದೇವೆ.

ರೇಣುಕಮ್ಮ ಹಾಗೂ ಹನುಮಂತಪ್ಪ ವಾಲೇಕಾರ ಪಾಲಕರು,



## ಜಾತಿಗಣತಿ ಪಾರದರ್ಶಕವಾಗಿ ನಡೆಯಲಿ

ಮಲ್ಲಮ್ಮ ನುಡಿವಾರ್ತೆಯಾದಗಿರಿ:ಸೆ.10: ರಾಜ್ಯ ಸರ್ಕಾರ ಪ್ರಸ್ತುತ ನಡೆಸುತ್ತಿರುವಜಾತಿಗಣತಿಯನ್ನುಪಾರದರ್ಶಕವಾಗಿಮತ್ತುಇನ್ನೊಂದು ಸಮುದಾಯಕ್ಕೆಅನ್ಯಾಯವಾಗಂತೆಅಗತ್ಯಕ್ರಮಕೈಗೊಳ್ಳುವಂತೆಕಲ್ಯಾಣ ಕರ್ನಾಟಕ ವೀರಶೈವ ಲಿಂಗಾಯತ ಮಠಾಧೀಶರ ವೇದಿಕೆ ಒಕ್ಕೊರಲಿನಿಂದ ಆಗ್ರಹಿಸಿದೆ.ಈ ಕುರಿತು ವೇದಿಕೆ ತನ್ನ ಪತ್ರಿಕಾ ಪ್ರಕಟಣೆಯಲ್ಲಿ ಹೇಳಿದ್ದಿಷ್ಟು.ಮುಖ್ಯಮಂತ್ರಿ ಸಿದ್ದರಾಮಯ್ಯನವರನೇತೃತ್ವದಕಾಂಗ್ರೆಸ್ ಸರ್ಕಾರದ ಜಾತಿಗಣತಿ ಸಮೀಕ್ಷೆ ಯಲ್ಲಿ ಹಿಂದೂ ಹಾಗೂ ವೀರಶೈವ ಲಿಂಗಾಯತಜಾತಿಗಳನ್ನುಕ್ರಿಶ್ಚಿಯನ್‌ಎಂದುಕೋಡ್‌ಮೂಲಕಗುರುತಿಸಿ ನಡೆಸುತ್ತಿರುವ ಸಮೀಕ್ಷೆ ಕೂಡಲೇ ಸರ್ಕಾರ ಕೈಬಿಡಬೇಕು ಎಂದಿದೆ.

ಸಿಎಂ ಸಿದ್ದರಾಮಯ್ಯನವರ ಸರ್ಕಾರ ಈ ಹಿಂದೆ 2013ರಲ್ಲಿ ಹಾಗೂ ಇದೀಗ 2023ರನಂತರ ಧರ್ಮ, ಜಾತಿಗಳ ನಡುವೆ ಒಡಕುಂಟು ಮಾಡುವ ಕೆಲಸಕ್ಕೆ ಕೈ ಹಾಕಿದ್ದು, ಜಾತಿ ಸಮೀಕ್ಷೆಯ ಮೂಲಕ ಹಿಂದೂ ಹಾಗೂ ವೀರಶೈವ ಲಿಂಗಾಯತ ಜಾತಿಗಳ ನಡುವೆ ಕೈಸ್ತರನ್ನು ನುಗ್ಗಿಸುವ ಮೂಲಕಮೀಸಲಾತಿ ಲಾಭಮಾಡಿಕೊಡಲು ಹುನ್ನಾರನಡೆಸಿದೆ ಎಂದು ಆರೋಪಿಸಿದೆ.

## ನೇಪಾಳ ಬಿಕ್ಕಟ್ಟು: ಭಾರತದಲ್ಲಿ ಕಟ್ಟೆಚ್ಚರ

ಮಲ್ಲಮ್ಮ ನುಡಿವಾರ್ತೆ ಕಠ್ಮಂಡು:ಸೆ.10:ನೇಪಾಳದಲ್ಲಿವಿದ್ಯಾರ್ಥಿಗಳು ಮತ್ತು ಯುವಕರ ನೇತೃತ್ವದ ಮಾರಣಾಂತಿಕ ಸರ್ಕಾರಿ ವಿರೋಧಿ ಪ್ರತಿಭಟನೆಗಳಬೆನ್ನಲ್ಲೇ, ಭಾರತಗಡಿಗಳಲ್ಲಿಜಾಗರೂಕತೆಯನ್ನುಹೆಚ್ಚಿಸಿದೆ. ತಮ್ಮ ನಿವಾಸಿಗಳಿಗೆಸಹಾಯಮಾಡಲುಹಲವಾರುರಾಜ್ಯಗಳುವಿಶೇಷಸೆಲ್ ಗಳನ್ನುಪ್ರಾರಂಭಿಸಿವೆ.ನೇಪಾಳದಲ್ಲಿಸರ್ಕಾರದಭ್ರಷ್ಟಾಚಾರದವಿರುದ್ಧಜೆನ್-ಝುಡ್ ಯುವಕರುನಡೆಸಿದಪ್ರತಿಭಟನೆಯಸಂದರ್ಭದಲ್ಲಿಕನಿಷ್ಠ19 ಜನರುಸಾವನ್ನಪ್ಪಿದ್ದಾರೆ. ಈ ಮಧ್ಯೆ ಸಾಮಾಜಿಕ ಮಾಧ್ಯಮದ ಮೇಲಿನ ಸರ್ಕಾರದ ನಿಷೇಧವನ್ನು ಸೋಮವಾರ ರಾತ್ರಿ ತೆಗೆದುಹಾಕಲಾದ ಹಿನ್ನೆಲೆಯಲ್ಲಿ ನೂರಾರು ಚಳವಳಿಗಾರರು ಓಲಿ ಅವರ ರಾಜೀನಾಮೆಗೆ ಒತ್ತಾಯಿಸಿ ಅವರಕಚೇರಿಗೆಪ್ರವೇಶಿಸಿದನಂತರಅಶಾಂತಿಭುಗಿಲೆದ್ದಿದೆ. ಪ್ರತಿಭಟನಾಕಾರರು ಸಂಸತ್ತು, ಅಧ್ಯಕ್ಷರ ಕಚೇರಿ,ಪ್ರಧಾನ ಮಂತ್ರಿಗಳ ನಿವಾಸ,ಸರ್ಕಾರಿಕಟ್ಟಡಗಳುಮತ್ತುರಾಜಕೀಯನಾಯಕರಕಚೇರಿಗಳನ್ನು ಸಹ ಸುಟ್ಟುಹಾಕಿದ್ದಾರೆ.

ಡಿ ಗುಕೇಶ್:ವಿಶ್ವ ಚೆಸ್ ಚಾಂಪಿಯನ್ ಶಿಪ್ ಗೆದ್ದು ಇತಿಹಾಸ ನಿರ್ಮಿಸಿದ 18 ಹರೆಯದ ಯುವ ತಾರೆ

# ಡಿ.ಕೆ.ಸಿದ್ರಾಮ ನೇತೃತ್ವದಲ್ಲಿ ನವಚೈತನ್ಯ ಸೇವಾ ಸಮಿತಿ ವತಿಯಿಂದ ಹೋರಾಟ



ಮಲ್ಲಮ್ಮನುಡಿವಾರ್ತೆಭಾಲ್ಕಿ:ಸೆ.10: ಅತಿವೃಷ್ಟಿಯಿಂದ ಹಾನಿಗೊಳಗಾದ ಬೆಳೆಗೆ ಸೂಕ್ತ ಪರಿಹಾರ ಒದಗಿಸಬೇಕು ಎಂದು ಆಗ್ರಹಿಸಿ, ಎನ್ ಎಸ್ ಎಸ್ ಕೆ ಅಧ್ಯಕ್ಷ ಡಿ.ಕೆ.ಸಿದ್ರಾಮ ನೇತೃತ್ವದಲ್ಲಿ ಬುಧವಾರ ನವಚೈತನ್ಯ ಸೇವಾ ಸಮಿತಿ ವತಿಯಿಂದ ಉಗ್ರ ಹೋರಾಟ ನಡೆಸಿ, ಜಿಲ್ಲಾಧಿಕಾರಿಗಳಿಗೆ ಬರೆದ ಮನವಿ ಪತ್ರವನ್ನು ತಹಸೀಲ್ದಾರ ಮೂಲಕ ಸಲ್ಲಿಸಲಾಯಿತು.ಪ್ರಾರಂಭದಲ್ಲಿ ಪಟ್ಟಣದ ವಿವಿಧ ಬೀದಿಗಳಲ್ಲಿ ರೈತರೊಂದಿಗೆ ಪ್ರತಿಭಟನಾ ಮೆರವಣಿಗೆ ನಡೆಸಿ, ತಹಸೀಲ ಕಚೇರಿಯಲ್ಲಿ ಸಮಾವೇಶಗೊಳಿಸಲಾಯಿತು.ನಂತರ ಮಾತನಾಡಿದ ಎನ್.ಎಸ್.ಎಸ್.ಕೆ ಅಧ್ಯಕ್ಷ ಡಿ.ಕೆ.ಸಿದ್ರಾಮ, ಅಗಷ್ಟತಿಂಗಳ ಕೊನೆಯಲ್ಲಿ ಸುರಿದ ಭಾರಿ ಮಳೆಯ ಪರಿಣಾಮವಾಗಿ ತಾಲೂಕಿನ ಸುಮಾರು35 ಸಾವಿರ ಎಕರೆ ಜಮೀನಿನಲ್ಲಿ ಬೆಳೆದ ಉದ್ದು,ಹೆಸರು,ಸೋಯಾ,ತೊಗರಿ, ಕಬ್ಬುಬೆಳೆಗಳು ಹಾನಿಗೊಳಗಾಗಿರುತ್ತವೆ.ಈ ಸಂಬಂಧ ತಾಲೂಕಿನ ಕೃಷಿ ನಿರ್ದೇಶಕರು ತಾಲೂಕಿನಲ್ಲಿ 33 ಸಾವಿರ ಎಕರೆ ಜಮೀನಿನಲ್ಲಿ ಬೆಳೆದ ಬೆಳೆ ಹಾನಿಯಾಗಿರುವುದಾಗಿ ವರದಿ ನೀಡಿರುತ್ತಾರೆ. ಕಾರಣ ತಕ್ಷಣವೇ ರೈತರ ಬೆಳೆ ಹಾನಿಗೆ ಪ್ರತಿ ಎಕ-ರೆಗೆ 25ಸಾವಿರ ರೂ. ಪರಿಹಾರ ನೀಡಬೇಕು.ಬೆಳೆವಿಮೆಕಂಪನಿಗಳ ಜೊತೆಸಭೆ ನಡೆಸಿ, ಕೂಡಲೇ ರೈತರಿಗೆ ಹೆಚ್ಚಿನ ಬೆಳೆ ವಿಮೆ ಸಿಗುವಂತೆ ಮಾಡಬೇಕು.ಬೆಳೆವಿಮೆಕಂಪನಿಯವರು ರೈತರಿಂದ ಹಣವಸೂಲಿ ಮಾಡುತ್ತ,ದಲ್ಲಾಳಿ ಕೆಸಲ ಮಾಡುತ್ತಿರುವುದು ತಪ್ಪಿಸಬೇಕು. ಕಾರಂಜಾ ನದಿಯಿಂದ ನೀರು ಬಿಟ್ಟಾಗ ಸಾಕಷ್ಟು ಸಮಸ್ಯೆಯಾಗುತ್ತಿರುವ ದಾಡಗಿ,ನಿಡೇಬಾನ ಆನಂದವಾಡಿ,ಇಂಚೂರ ಸೇತುವೆಗಳ ಎತ್ತರ ಹೆಚ್ಚಿಸಬೇಕು. ತಾಂತ್ರಿಕ ಕಾರಣಗಳಿಂದ ಸಮಸ್ಯೆ ಎದುರಿಸುತ್ತಿರುವ ಕೊಂಗಳಿ ಸೇತುವೆ ಬಳಿ ತಡೆಗೋಡೆ ನಿರ್ಮಿಸಬೇಕು ಜಿಲ್ಲಾ ಉಸ್ತುವಾರಿ ಸಚಿವರು ಮುಖ್ಯಮಂತ್ರಿಗಳ ಹತ್ತಿರ ಕೇಳಿರುವ 500 ಕೋಟಿ ರೂ. ಅನುದಾನ ಜಿಲ್ಲೆಯ ರೈತರಿಗೆ ತಲುಪುವಂತೆ ಮಾಡಬೇಕು. ಸರ್ಕಾರದಿಂದ 100 ಕೋಟಿ ವಿಶೇಷ ಪ್ಯಾಕೇಜ್ ಘೋಷಿಸಿ, ಬಿಎಸ್ ಎಸ್ ಕೆ ಕಾರ್ಖಾನೆ ಕೂಡಲೆ ಆರಂಭಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ನವಚೈತನ್ಯ ಸೇವಾಸಮಿತಿಯ ಜಿಲ್ಲಾಧ್ಯಕ್ಷ ಶರದ ದುರ್ಗಾಳೆ,ಉಪಾಧ್ಯಕ್ಷ ಕೈಲಾಸಪಾಟೀಲ,ಕಾರ್ಯದರ್ಶಿ ಜೈರಾಜಕೊಳ್ಳಾ,ಕಿಶನರಾವ ಪಾಟೀಲ ಇಂಚೂರಕರ, ಕೆ.ಡಿ.ಗಣೇಶ, ಸಂಗಮೇಶ ಟಂಕಸಾಲೆ,ಮನೋಹರ ಪಾಟೀಲ, ಬಾಲಾಜಿ ರೋಡೆ, ಮಾದಪ್ಪದೇಶಮುಖ, ಶರದ ಪಾಟೀಲ, ರವಿಶಂಕರಶೇರಿಕಾರ ಡೋಣಗಾಪೂರ ಸೇರಿದಂತೆ ಹಲವರು ಇದ್ದರು.

# ಕೆರೆ ಅಭಿವೃದ್ಧಿ ಕಾಮಗಾರಿಯಲ್ಲಿ ಅವ್ಯವಹಾರ ತನಿಖೆಗೆ ಒತ್ತಾಯ



ಮಲ್ಲಮ್ಮ ನುಡಿ ವಾರ್ತೆ ಬೀದರ. ಸೆ. 10 : ತಾಲ್ಲೂಕಿನ ಮನ್ನಳ್ಳಿ ಕೆರೆ ದುರಸ್ತಿ ಹಾಗೂ ಅಭಿವೃದ್ಧಿ ಕಾಮಗಾರಿಯಲ್ಲಿ ಅವ್ಯವಹಾರ ನಡೆದಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ ಆರೋಪಿಸಿದೆ.

ವೇದಿಕೆಯ ಬೀದರ್ ತಾಲ್ಲೂಕು ಘಟಕದ ಪದಾಧಿಕಾರಿಗಳು ಬೀದರನಲ್ಲಿ ಮಂಗಳವಾರ ನಿಯೋಗದಲ್ಲಿ ಜಿಲ್ಲಾಧಿಕಾರಿಗೆ ಬರೆದ ಮನವಿ ಪತ್ರವನ್ನು ಹೆಚ್ಚುವರಿ ಜಿಲ್ಲಾಧಿಕಾರಿಗೆ ಸಲ್ಲಿಸಿದರು.

ಕೆರೆ ಜನ ಹಾಗೂ ಜಾನುವಾರಿಗೆ ಕುಡಿಯುವ ನೀರಿಗೆ ಆಸರೆಯಾಗಿದೆ. ಸಣ್ಣನೀರಾವರಿ ಇಲಾಖೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಲಕ್ಷಾಂತರ ರೂಪಾಯಿಯ ಅಭಿವೃದ್ಧಿ ಕಾಮಗಾರಿಯನ್ನು ಕಳಪೆ ಗುಣಮಟ್ಟದಿಂದ ಕೈಗೊಂಡಿ-ದ್ದಾರೆ. ಸರ್ಕಾರದ ಅನುದಾನ ದುರುಪಯೋಗಪಡೆಸಿಕೊಂಡಿದ್ದಾರೆ ಎಂದು ನಿಯೋಗದ ನೇತೃತ್ವವಹಿಸಿದ್ದ ವೇದಿಕೆಯ ಬೀದರ್ ತಾಲ್ಲೂಕು ಘಟಕದ ಅಧ್ಯಕ್ಷ ವೀರಶೆಟ್ಟಿ ಗೌಸಪುರೆ ಆರೋಪಿಸಿದರು.

ಕಾಮಗಾರಿ ಕಳಪೆಯಾದರೂ ಗುತ್ತಿಗೆದಾರರಿಗೆ ಹಣ ಸಂದಾಯ ಮಾಡಲಾಗಿದೆ ಎಂದು ಆಪಾದಿಸಿದರು.

ಕೂಡಲೇ ಕಾಮಗಾರಿಯ ತನಿಖೆ ನಡೆಸಬೇಕು. ಅವ್ಯವಹಾರ ಎಸಗಿದ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

15 ದಿನಗಳ ಒಳಗೆ ಸಂಬಂಧಪಟ್ಟವರ ವಿರುದ್ಧ ಕ್ರಮ ಜರುಗಿಸದಿದ್ದರೆ ಕೆರೆ ಬಳಿ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ನಡೆಸಲಾಗುವುದು ಎಂದು ಎಚ್ಚರಿಸಿದರು.

ತಾಲ್ಲೂಕು ಘಟಕದ ಉಪಾಧ್ಯಕ್ಷ ತುಕಾರಾಮ, ಅಶೋಕ್, ರಮೇಶ ಕೋಲಿ, ಜಗನ್ನಾಥ ಇದ್ದರು.

# ಬೀದರ್ ಸಮಗ್ರ ವಿಕಾಸವೇ ಗುರಿ:ಸಚಿವ ಖಂಡ್ರೆ



ಬೀದರ. ಸೆ. 10 : ಜಿಲ್ಲೆಯ ಸಮಗ್ರವಿಕಾಸವೇ ತಮ್ಮ ಗುರಿಯಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದರು.

ತಾಲ್ಲೂಕಿನ ಯದಲಾಪುರ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಹಾಗೂ ಗ್ರಾಮಸ್ಥರ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಜಿಲ್ಲೆಯನ್ನು ಎಲ್ಲ ರಂಗದಲ್ಲೂ ಅಭಿವೃದ್ಧಿಯತ್ತ ಒಯ್ಯಲು ಪೂರಕ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುವುದು ಎಂದು ತಿಳಿಸಿದರು.

ಪರಿಸರ ಸಂರಕ್ಷಣೆಗೆ ಐದು ಕೋಟಿ ಸಸಿ ನೆಡಲಾಗುತ್ತಿದೆ. ಬರುವ ದಿನಗಳಲ್ಲಿ ರಾಜ್ಯ ಹಸಿರು ಹೊದ್ದುಕೊಳ್ಳಲಿದೆ ಎಂದು ಹೇಳಿದರು.

ಕುತ್ತಾಬಾದ್–ಕಾಶೆಂಪುರ(ಪಿ) ಸಂಪರ್ಕ ರಸ್ತೆ ನಿರ್ಮಾಣ ಹಾಗೂ ಯದಲಾಪುರ ಗ್ರಾಮಕ್ಕೆ ಮೂಲಸೌಕರ್ಯ ಕಲ್ಪಿಸಲು ಒಟ್ಟು ರೂ. 50 ಲಕ್ಷ ಅನುದಾನ ಕಲ್ಪಿಸಲಾಗುವುದು ಎಂದು ತಿಳಿಸಿದರು.

ಪಿಕೆಪಿಎಸ್‌ನಿಂದ ಸರ್ಕಾರದ ವಿವಿಧ ಸೌಲಭ್ಯಗಳನ್ನು ರೈತರಿಗೆ ತಲುಪಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದು ಎಂದು ಯದಲಾಪುರ ಪಿಕೆಪಿಎಸ್ ಅಧ್ಯಕ್ಷ ಸಂತೋಷ ಪಾಟೀಲ ಅಯಾಸಪುರ ಹೇಳಿದರು.ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಮೃತರಾವ್ ಚಿಮಕೋಡೆ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸಂಗ್ರಾಮ ಮಾತನಾಡಿದರು.

ಮೈಸೂರು ಪೇಟ ತೊಡಿಸಿ,ಶಾಲು ಹೊದಿಸಿ, ಸ್ಮರಣಿಕೆ ಕೊಟ್ಟು ಈಶ್ವರ ಖಂಡ್ರೆ ಅವರನ್ನು ಸನ್ಮಾನಿಸಲಾಯಿತು. ಇದಕ್ಕೂ ಮುನ್ನ ಅವರಿಗೆ ಕ್ರೇನ್‌ನಿಂದ ಬೃಹತ್ ಮಾಲೆ ಹಾಕಲಾಯಿತು. ಪುಷ್ಪ ವೃಷ್ಟಿ ಮಾಡುತ್ತಾ, ಬ್ಯಾಂಡ್, ಬಾಜಾಗಳೊಂದಿಗೆ ಮೆರವಣಿಗೆಯಲ್ಲಿ ವೇದಿಕೆಗೆ ಕರೆ ತರಲಾಯಿತು. ಸಚಿವರು ಸಾರ್ವಜನಿಕರಿಗೆ ಸಸಿ ವಿತರಿಸಿದರು. ವಂದೆ ಮಾತರಂ ಪಬ್ಲಿಕ್ ಸ್ಕೂಲ್ ಮಕ್ಕಳು ನೃತ್ಯ ಪ್ರದರ್ಶಿಸಿದರು. ಉದ್ಯಮಿ ಶಿವರಾಜ ಪಾಟೀಲ ಅಯಾಸಪುರ ಅಧ್ಯಕ್ಷತೆ ವಹಿಸಿದ್ದರು. ಗ್ರಾಮ ಪಂಚಾಯಿತಿ ಅಧ್ಯಕ್ಷ ಗುಣವಂತರಾವ್ ಪಾಟೀಲ, ಮುಖಂಡರಾದ ಜೈರಾಜ ಖಂಡ್ರೆ, ಕರೀಂಸಾಬ್,

ಫೆರೋಜ್‌ಖಾನ್, ಧನರಾಜ ಹಂಗರಗಿ, ರಮೇಶ ಪಾಟೀಲ, ವೆಂಕಟರಾವ್ ಪಾಟೀಲ, ಖುಸ್ರೂ, ಭೀಮರಾವ್ ಪಾಟೀಲ, ಶಿವಕುಮಾರ ಕೋಡಗೆ, ತಿಪ್ಪಣ್ಣ ಅರ್ಜುನ, ಶಿವಕುಮಾರ ತುಂಗಾ, ಕಾವೇರಿ ಪ್ರಕಾಶ,ದತ್ತು ಚಂದ್ರಕಾಂತ ಹಡಪದ, ನರಸಮ್ಮ ಮಾರುತಿ, ತಾಹೇರಾ ಬೇಗಂ, ನಜಾಮಾ ಬೇಗಂ, ಗೌಸಿಯಾ ಬೇಗಂ, ಸಲೋಮಿ ಸುಧಾಕರ, ಮಲ್ಲಯ್ಯ ಕಲ್ಲಯ್ಯ, ಸುಭಾಷ್ ಬಸವಣಪ್ಪ, ಲಕ್ಷ್ಮಿಬಾಯಿ ಜಗನ್ನಾಥ, ಲಕ್ಷ್ಮಿಬಾಯಿ ಮಾಣಿಕಪ್ಪ ಉಪಸ್ಥಿತರಿದ್ದರು. ನವಲಿಂಗ ಪಾಟೀಲ,ಯೋಗೇಂದ್ರ ಯದಲಾಪುರೆ ನಿರೂಪಿಸಿದರು. ಚಂದ್ರಶೇಖರ ಚನಶೆಟ್ಟಿ ಸ್ವಾಗತಿಸಿದರು. ರತ್ನಾ ಪಾಟೀಲ ವಂದಿಸಿದರು. ಗ್ರಾಮ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

# ಬಟೆಂಗೆತೋ ಕಟೆಂಗೆ ಎಂಬುದು ಮರೆಯಬೇಡಿ: ಭಗವಂತ ಖೂಬಾ

ಬೀದರ:ಸೆ.10:ರಾಜ್ಯದಲ್ಲಿ ಬರುವ ಸೆಪ್ಟೆಂಬರ್ 22 ರಿಂದ ನಡೆಯುತ್ತಿರುವ ಜಾತಿವಾರು ಸಮೀಕ್ಷೆ ವೇಳೆ ವೀರಶೈವ ಲಿಂಗಾಯತರು ಯಾರು ಧರ್ಮದ ಕಾಲಂನಲ್ಲಿ ಹಿಂದು ಎಂದು ನಮೋದಿಸಬಾರದು ಎಂದು ಕರೆನೀಡಿರುವ ಈಶ್ವರ ಖಂಡ್ರೆಯವರ ಹೇಳಿಕೆಯನ್ನು ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ ಖಂಡಿಸಿ, ನಮ್ಮ ಎಲ್ಲಾ ಲಿಂಗಾಯತರಲ್ಲಿರುವ ಹಿಂದುತ್ವದ ಭಾವನೆಯನ್ನು ಮರೆಮಾಚಿಸುವ ಪಿತೂರಿ ಇದರ ಹಿಂದೆ ಅಡಗಿದೆ, ಇಷ್ಟು ವರ್ಷ ಹಿಂದು ಎಂದು ಬರೆಯಿಸಿದಾಗ ಅಗದೆ ಇರುವ ತೊಂದರೆ ಇವಗ್ಯಾಕೆ ಎಂದು ಪ್ರಶ್ನಿಸಿದ್ದಾರೆ,ಈಶ್ವರ ಖಂಡ್ರೆ ತನ್ನ ಹೇಳಿಕೆಯನ್ನು ಹಿಂಪಡೆದು, ರಾಜ್ಯದ ಜನರಿಗೆ ಕ್ಷಮೆಯಾಚಿಸಬೇಕೆಂದು ಒತ್ತಾಯಿಸಿದ್ದಾರೆ.

ವೀರಶೈವ ಲಿಂಗಾಯತ ಧರ್ಮಕ್ಕೂ ಸನಾತನ ಹಿಂದೂ ಧರ್ಮಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಹೇಳುತ್ತಿರುವುದು ಖಂಡನೀಯ, ವೀರಶೈವ ಲಿಂಗಾಯತ ಧರ್ಮದ ಬುನಾದಿಯೇ ಸನಾತನ ಧರ್ಮವಾಗಿದೆ, ನಮ್ಮ ಪಂಚಪೀಠದ ಜಗದ್ಗುರುಗಳು ಸಹ ಸನಾತನ ಧರ್ಮದ ಉದ್ಧಾರಕ್ಕಾಗಿ ವತ್ತು ರಕ್ಷಣೆಗಾಗಿ ಜಗದ್ಗೂರು ರೇಣುಕಾಚಾರ್ಯರು ಜನ್ಮತಾಳಿದರು ಎಂದು ಹೇಳಿದ್ದಾರೆ, ಇದೇ ಸತ್ಯವಾಗಿದೆ, ಹಿಗಿದ್ದ ಮೇಲೆ ಹಿಂದು ಧರ್ಮಕ್ಕೂ, ವೀರಶೈವ ಲಿಂಗಾಯತ ಧರ್ಮಕ್ಕೂ ಸಂಬಂಧವಿಲ್ಲ ಎಂದು ಮಾನಸಿಕ ಸಿಮಿತ ಕಳೆದುಕೊಂಡವರಂತೆ ಹೇಳುತ್ತಿರುವುದು ಎಷ್ಟು ಸರಿ ಎಂದು ಭಗವಂತ ಖೂಬಾ ಪ್ರಶ್ನಿಸಿದ್ದಾರೆ.

ಸಮೀಕ್ಷೆ ವೇಳೆ ಯಾರೂ ಯಾವ ಜಾತಿಯನ್ನಾದರು ಬರೆಸಲಿ ನನಗೆ ಅಭ್ಯಂತರವಿಲ್ಲಾ, ಆದರೆ ವೀರಶೈವ ಲಿಂಗಾಯತರು ಹಿಂದು ಎಂದು ಬರೆಯಿಸಬೇಡಿ ಎನ್ನುವುದಕ್ಕೆ ನನ್ನ ಆಕ್ಷೇಪವಿದೆ,ಈಶ್ವರ ಖಂಡ್ರೆ ಇಂತಹ ಹೇಳಿಕೆ ನೀಡಿ,ಅವರ ರಾಜಕೀಯ ಬೆಳೆ ಬೆಯಿಸಿಕೊಳ್ಳಲು ಮತ್ತು ಲಿಂಗಾಯತ, ವೀರಶೈವ ಲಿಂಗಾಯತ ಧರ್ಮದ ಮಧ್ಯೆ ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದಾರೆ,ಈ ಹಿಂದೆ ಸಿದ್ದರಾಮ್ಯನವರು ಕೂಡ ನಮ್ಮ ಮಧ್ಯೆ ಜಗಳ ಹಚ್ಚಿದ್ದರು, ಇವಾಗ ಇವರು ಅದನ್ನೆ ಮುಂದುವರೆಸುವ ಕೆಲಸ ಮಾಡುತ್ತಿದ್ದಾರೆ ಎಂದಿದ್ದಾರೆ.

ರಾಜ್ಯದಲ್ಲಿ ಹಿಂದೂಧರ್ಮದವರು ಇಲ್ಲ ಎಂದು ಬಿಂಬಿಸಿ ಹಿಂದುಗಳಿಗೆ ಅವಮಾನಿಸಿ, ಉಳಿದ ಜಾತಿಯವರಿಗೆ ಖುಷಿಪಡೆಸುವ ಕೆಲಸ ನಡಿತಿದೆ.ಈ ವಿಷಯವನ್ನು ನಮ್ಮ ಪಂಚಪೀಠದ ಎಲ್ಲಾ ಪೂಜ್ಯ



ಜಗದ್ಗೂರುಗಳು ಗಂಭಿರವಾಗಿ ಪರಿಗಣಿಸಿ,ಈಶ್ವರ ಖಂಡ್ರೆ ನೀಡಿರುವ ಹೇಳಿಕೆಯನ್ನು ಮರುಪರಿಶೀಲಿಸಬೇಕೆಂದು ಖೂಬಾ ಒತ್ತಾಯಿಸಿದ್ದಾರೆ.

ಈಗಾಗಲೆ ರಾಜ್ಯದಲ್ಲಿರುವ ರೆಡ್ಡಿ, ಮರಾಠಾ ಮುಂತಾದ ಎಲ್ಲಾ ಸಮಾಜದವರು ಧರ್ಮದ ಕಾಲಂನಲ್ಲಿ ಹಿಂದು ಎಂದು ಬರೆಸಬೇಕೆಂದು ತಿಳಿಸಿದ್ದಾರೆ, ಆದರೆ ವೀರಶೈವ ಲಿಂಗಾಯತರು,ಹಿಂದುಗಳಾಗಿದ್ದರು ಸಹ ಹಿಂದು ಎಂದು ಬರೆಸಬಾರದು ಎಂದು ಹೇಳಿಕೆ ನೀಡಿರುವುದರ ಹಿಂದಿನ ಉದ್ದೇಶವೇನು ಎಂದು ಖೂಬಾ ಪ್ರಶ್ನೆ ಮಾಡಿದ್ದಾರೆ.

ಸಿದ್ದರಾಮಯ್ಯನವರ ಕಾಂಗ್ರೇಸ್ ಸರ್ಕಾರ ಬಂದಾಗಿನಿಂದ ಅನ್ಯಕೋಮಿನವರು, ಹಿಂದುಗಳಿಗೆ ಹಬ್ಬಗಳು ಆಚರಿಸಲು ಸಹ ಬಿಡುತ್ತಿಲ್ಲಾ, ಮಂಡ್ಯ ಜಿಲ್ಲೆಯ ಮದ್ದೂರಿನಲ್ಲಾದ ಗಣೇಶ ವಿಸರ್ಜನೆಯೇ ಸಾಕ್ಷಿಯಾಗಿದೆ, ಇಂತಹ ಸಮಯದಲ್ಲಿ ಹಿಂದುಗಳನ್ನು ಒಗ್ಗೂಡಿಸುವ ಬದಲು ನಮ್ಮನ್ನು ಒಡೆಯುವ ಪ್ರಯತ್ನ ಮಾಡಲಾಗುತ್ತಿದೆ, ನಾವೆಲ್ಲರೂ ಅಖಂಡವಾಗಿದ್ದರೆ ಮಾತ್ರ ನಮಗೆಲ್ಲಾ ಇಲ್ಲಿ ಬದುಕು, ಹರಿದು ಹಂಚಿಹೊದರೆ ನಮ್ಮನ್ನು ಕಡಿದು ತಿನ್ನುವವರು ನಮ್ಮ ಸುತ್ತಮುತ್ತ ಇದ್ದಾರೆ ಎನ್ನುವುದು ನಾವ್ಯಾರುವು ಮರೆಯಬಾರದು,ಬಟೆಂಗೆತೊ ಕಟೆಂಗೆ ಎನ್ನುವ ಮಾತನ್ನು ನೆನಪಿನಲ್ಲಿಟ್ಟುಕೊಂಡು ಒಗ್ಗಟ್ಟಾಗಿ ಇರಬೇಕೆಂದು ಮನವಿ ಮಾಡಿದ್ದಾರೆ, ಹಿಂದುಗಳು ಎಂಬುದು ಮರೆತರೆ ನಾವು ಸ್ವಲ್ಪ ವರ್ಷಗಳು ಬದುಕಬಹುದು ಆದರೆ ನಮ್ಮ ಮುಂದಿನ ಪೀಳಿಗೆಗೆ ಹಿಂದುಗಳಾಗಿ ಬದುಕಲು ಸಾಧ್ಯವಿಲ್ಲಾ ಎಂದು ಖೂಬಾ ಎಚ್ಚರಿಸಿದ್ದಾರೆ.

ಹಿಂದೊಮ್ಮೆ ಅಖಂಡಭಾರತದಲ್ಲಿ ನೇಪಾಳ, ಪಾಕಿಸ್ಥಾನ, ಶ್ರೀಲಂಕಾ, ಭೂತಾನ, ಮಯನ್ಮಾರ, ಮಾಲ್ಡಿವ್ಸ್, ಟಿಬೇಟ್, ಅಫಘಾನಿಸ್ಥಾನ ದೇಶಗಳು ಒಳಗೊಂಡಿದ್ದವು,ಎಲ್ಲರೂ ಹಿಂದುಗಳೆ ಆಗಿದ್ದರು,ಆದರೆ ಕಾಲಾನುಘಟ್ಟದಲ್ಲಿ ಆದ ಬದಲಾವಣೆಗಳಿಂದ ನಮ್ಮ ಧರ್ಮಕ್ಕೆ ಮೇಲಿಂದ ಮೇಲೆ ಪೆಟ್ಟು ಬಿಳಲು ಪ್ರಾರಂಭವಾಯಿತು,ಸಮಯನುಸಾರ ಹುಟ್ಟಿಕೊಂಡ ಸ್ವಾರ್ಥಿಗಳು,ಬುದ್ದಿಗೇಡಿಗಳು, ರಾಕ್ಷಸ ಪ್ರವರ್ತಿಯ ಮನಸ್ಥಿತಿಯವರು ನಮ್ಮ ಹಿಂದು ಧರ್ಮವನ್ನು ಒಡೆಯಲು ಪ್ರಯತ್ನಿಸಿದರು, ಇವಾಗಲು ರಾಜ್ಯದಲ್ಲಿ ಈಶ್ವರ ಖಂಡ್ರೆಯಂತವರ ಕೈಯಲ್ಲಿ ಅಧಿಕಾರ ಇರುವುದರಿಂದ ಹಿಂದುಧರ್ಮಕ್ಕೆ ಧಕ್ಕೆ ತರುವ ಕೆಲಸ ನಡೆಯುತ್ತಿದೆ ಎಂದಿದ್ದಾರೆ.

ಆದ್ದರಿಂದ ಈಶ್ವರ ಖಂಡ್ರೆ ನೀಡಿರುವ ಹೇಳಿಕೆಗಳು ಹಿಂದು ಸಮಾಜಕ್ಕೆ ಅವಮಾನಿಸುವಂತಹದ್ದು ಆಗಿದೆ, ಇದನ್ನು ನಮ್ಮ ರಾಜ್ಯದ ಎಲ್ಲಾ ಹಿಂದು ಮುಖಂಡರುಗಳು, ಬಿಜೆಪಿ ನಾಯಕರುಗಳು,ಹಿಂದುಸಮಾಜದ ಎಲ್ಲಾ ಪೂಜ್ಯರು, ಗುರುಗಳು, ಧರ್ಮ ಪ್ರಚಾರಕರು ಇದನ್ನು ಖಂಡಿಸಬೇಕು, ಹಿಂದುಗಳನ್ನು ಒಗ್ಗೂಡಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕೆಂದು ಭಗವಂತ ಖೂಬಾ ಎಲ್ಲರಲ್ಲಿ ಮನವಿ ಮಾಡಿಕೊಂಡಿದ್ದಾರೆ ಮತ್ತು ಖಂಡ್ರೆ ಮಾಡಿರುವ ಗೊಂದಲವನ್ನು ಅಖಿಲ ಭಾರತ ವೀರಶೈವ ಮಹಾಸಭಾ ಸರಿಪಡಿಸಿ, ಧರ್ಮದ ಕಾಲಂನಲ್ಲಿ ಹಿಂದು ಎಂದು ಬರೆಯುವಂತೆ ರಾಜ್ಯದ ಎಲ್ಲಾ ವೀರಶೈವ ಲಿಂಗಾಯತರಿಗೆ ಸೂಚಿಸಬೇಕೆಂದು ಒತ್ತಾಯಿಸಿದ್ದಾರೆ.

# ಕಲ್ಯಾಣ ಕರ್ನಾಟಕ ಉತ್ಸವ

## ವಿಜೃಂಭಣೆಯಿಂದ ಆಚರಿಸಲು ನಿರ್ಧಾರ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಸೆ.10: ಈ ಭಾಗದ ನಿಜವಾದ ಸ್ವಾತಂತ್ರದಿನವಾದ ಕಲ್ಯಾಣ ಕರ್ನಾಟಕ ಉತ್ಸವವನ್ನು ಅತಿ ವಿಜ್ರಂಭಣೆಯಿಂದ ಆಚರಿಸಬೇಕು ಎಂದು ತಹಸೀಲ್ದಾರ ಮಲ್ಲಿಕಾರ್ಜುನ ವಡ್ಡನಕೇರಿ ಹೇಳಿದರು.

ಪಟ್ಟಣದ ತಹಸೀಲ ಕಚೇರಿಯಲ್ಲಿ ಬುಧವಾರ,ಸೆ.17ರಂದು ನಡೆಯಲಿರುವ ಕಲ್ಯಾಣ ಕರ್ನಾಟಕ ಉತ್ಸವ ಹಾಗು ವಿಶ್ವಕರ್ಮ ದಿನಾಚರಣೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. 1947 ರಂದು ಭಾರತ ದೇಶಕ್ಕೆ ಸ್ವಾತಂತ್ರ ಸಿಕ್ಕರೂ, ಕಲ್ಯಾಣ ಕರ್ನಾಟಕ ಭಾಗವು ನಿಜಾಮನ ಆಡಳಿತದಲ್ಲಿತ್ತು. ಒಂದು ವರ್ಷದ ನಂತರ ಸರ್ದಾರ ವಲ್ಲಭಭಾಯಿ ಪಟೇಲರ ಮುತುವರ್ಜಿಯಿಂದ 1948 ರ ಸೆ.17 ರಂದು ಈ ಭಾಗ-ಕ್ಕೆ ನಿಜವಾದ ಸ್ವಾತಂತ್ರ ದೊ-ರೆತಿದೆ. ಹೀಗಾಗಿ ಸೆ.17 ಕಲ್ಯಾಣ ಕರ್ನಾಟಕ ಉತ್ಸವ ನಿಮಿತ್ಯ ಪಟ್ಟಣದ ತುಂಬೆಲ್ಲ ಮಹಾತ್ಮರ ವೃತ್ತಗಳಿಗೆ ದೀಪಾಲಂಕಾರ ಮಾಡಲಾಗುವುದು. ಭವ್ಯ ಮೆರವಣಿಗೆಯೊಂದಿಗೆ ಸರ್ದಾರ ವಲ್ಲಭಭಾಯಿ ಪಟೇಲರ ವೃತ್ತ ಹಾಗು ತಹಸೀಲ ಕಚೇರಿಯಲ್ಲಿ ಧ್ವಜಾರೋಹಣ ನೆರವೇರಿಸಲಾಗುವುದು. ಎಲ್ಲಾ ಸಂಘಟನೆಯ ಪದಾಧಿಕಾರಿಗಳು ಮತ್ತು ಸರ್ಕಾರಿ ಅಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ಕಾರ್ಯಕ್ರಮ ಯಶಸ್ವಿಗೊಳಿಸಲು ಸಹಕರಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷೆ ಶಶಿಕಲಾ ಅಶೋಕ ಸಿಂಧನಕೆರೆ, ಉಪಾಧ್ಯಕ್ಷ ವಿಜಯಕುಮಾರ ರಾಜಭವನ, ತಾ.ಪಂ.ಕಾರ್ಯನಿರ್ವಾಹಕ ಅಧಿಕಾರಿ ಸೂರ್ಯಕಾಂತ ಬಿರಾದಾರ,ಪುರಸಭೆ ಮುಖ್ಯಾಧಿಕಾರಿ

ಸಂಗಮೇಶ ಕಾರಬಾರಿ,ಪ್ರಮುಖರಾದ ಕಸಾಪ ಅಧ್ಯಕ್ಷ ನಾಗಭೂಷಣ ಮಾಮಡಿ, ಸೋಮನಾಥಪ್ಪ ಅಸ್ಟೂರೆ, ಅಶೋಕ ಬಾವುಗೆ, ಯಲೀಸ್ ಜ್ಯಾಂತೆ, ಸಂತೋಷ ಬಿಜಿಪಾಟೀಲ, ಸಂಗಮೇಶ ಗುಮ್ಮೆ, ಸ್ವಾಮಿ ಭದ್ರೇಶ ಗುರಯ್ಯಾ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜಯರಾಜ ದಾಬಶೆಟ್ಟಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಇಸಿಓ ಮಲ್ಲಿಕಾರ್ಜುನ ಕನ್ನಾಳೆ, ಬಿಸಿಎಮ್ ಅಧಿಕಾರಿ ಗಣೇಶ, ತೋಟಗಾರಿಕೆ ಇಲಾಖೆಯ ಅಧಿಕಾರಿ ಮಾರುತಿ ಜಬನೂರ, ಎಆರ್‌ಟಿಓ ಕಚೇರಿಯ ವಿಶ್ವನಾಥ ಸೇರಿದಂತೆ ಹಲವರು ಇದ್ದರು.




ಕಲಬುರಗಿ: ಮಹಾನಗರ ಪಾಲಿಕೆ ಪೂಜ್ಯ ಮಹಾಪೌರರಾದ ವರ್ಷಾ ರಾಜೀವ ಜಾನೆ ಅವರನ್ನು ಶ್ರೀ ಅಂಬಿಗರ ಸೇವಾದಳ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಂದೇಶ ಕಮಕನೂರ, ದಿಗಂಬರ ನಾಡಗೌಡ, ಶ್ರೀ ಅಂಬಿಗರ ಸೇವಾದಳದ ರಾಜ್ಯಾಧ್ಯಕ್ಷ ಸಂತೋಷ ಬೆಣ್ಣೂರ, ಜಿಲಾಧ್ಯಕ್ಷ ಆನಂದ ಕದರ್ಗಿ, ನಗರ ಅಧ್ಯಕ್ಷ ರಾಜು ಸೊನ್ನ, ಉಪಾಧ್ಯಕ್ಷರಾದ ಶರಣು ಕಿರಸಾವಳಗಿ, ಮಾಂತೇಶ ಹರವಾಳ, ಸದ್ಯಸರಾದ ಮಲ್ಲು ವಾಲಿಕಾರ, ಮಲ್ಲಿಕಾರ್ಜುನ ಗುಡುಬಾ, ಮಲ್ಲು ಚಿಂಚನಸೂರ್, ಸತೀಶ ಇಂಗಳಗಿ, ಶರಣು ನಾಯಿಕೋಡಿ, ಸಚಿನ ಹೋನ್ನಳ್ಳಿ, ಕೃಷ್ಣ, ಸಾಗರ ಚಿಣಮಗೇರಿ, ಪ್ರವೀಣ ಚಿಕ್ಕಾಲ್, ಶರಣು ನಾಟೇಕಾರ ಸೇರಿದಂತೆ ಇತರರು ಇದ್ದರು.

# ಪಂಜಾಬ್ ಪ್ರವಾಹ ಪೀಡಿತರಿಗೆ 11 ಲಕ್ಷ ದೇಣಿಗೆ



ಬೀದರ. ಸೆ.10: ಬೀದರಿನ ಶ್ರೀ ನಾನಕ ಝಿರಾ ಸಾಹೇಬ್ ಪ್ರಬಂಧಕ ಕಮಿಟಿ ಹಾಗೂ ಗುರು ನಾನಕ ಶಿಕ್ಷಣ ಸಂಸ್ಥೆಗಳ ಸಮೂಹದಿಂದ ಪಂಜಾಬ್ ಪ್ರವಾಹ ಪೀಡಿತರಿಗೆ ಪರಿಹಾರ ನಿಧಿಯಾಗಿ 11 ಲಕ್ಷ ರೂಪಾಯಿ ಚೆಕ್‌ನ್ನು ದೇಣಿಗೆ ರೂಪದಲ್ಲಿ ನೀಡಲಾಯಿತು.

ಈ ಚೆಕ್ಕನ್ನು ನಾಂದೇಡಿನ ಸಿಂಗ್ ಸಾಹೇಬ್ ಭಾಯಿ ರಾಮಸಿಂಗ್ ಧುಪಿಯಾ ತಖ್ತ ಸಚ್ಚಖಂಡ ಹಜೂರ ಸಾಹೇಬ್, ಹಾಗೂ ಸಂತ್ ಬಾಬಾ ನರೇಂದ್ರಸಿಂಗ್ ಜತ್ತೆದಾರ ಮತ್ತು ಸಂತ್ ಬಾಬಾ ಬಲ್ವಿಂದರ್ ಸಿಂಗ್ ಗುರುದ್ವಾರಾ ಲಂಗರ್ ಸಾಹೇಬ್ ನಾಂದೇಡ್ ಇವರ ಸಮ್ಮುಖದಲ್ಲಿ ಬೀದರ ಗುರುದ್ವಾರಾ ಶ್ರೀ ನಾನಕ ಝಿರಾ ಸಾಹೇಬ್ ಅಧ್ಯಕ್ಷರಾದ ಡಾ. ಎಸ್.ಬಲಬೀರಸಿಂಗ್ ಅವರು ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಮನಪ್ರಿತ್‌ಸಿಂಗ್ ಖನುಜಾ, ಪುನೀತ್ ಸಿಂಗ್ ಉಪಸ್ಥಿತರಿದ್ದರು.

# ಆನಂದ-ಸ್ವಾಸ್ಥ್ಯಕ್ಕಾಗಿ ಆಟ ಆಡಿ



ಬೀದರ. ಸೆ. 10 : ಆನಂದ ಹಾಗೂ ಸ್ವಾಸ್ಥ್ಯಕ್ಕಾಗಿ ಎಲ್ಲರೂ ಆಟ ಆಡಬೇಕು ಎಂದು ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಉಪ ನಿರ್ದೇಶಕ ಚಂದ್ರಕಾಂತ ಶಹಾಬಾದಕರ್ ಹೇಳಿದರು.

ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಹಾಗೂ ಚಂದ್ರಪ್ಪ ಗೌರಶೆಟ್ಟಿ ಪದವಿಪೂರ್ವ ಕಾಲೇಜು ವತಿಯಿಂದ ಇಲ್ಲಿಯ ಎನ್.ಎಫ್. ಪದವಿಪೂರ್ವ ಕಾಲೇಜಿನಲ್ಲಿ ಬುಧವಾರ ಆಯೋಜಿಸಿದ್ದ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳ ಬೀದರ್ ತಾಲ್ಲೂಕುಮಟ್ಟದ ಕ್ರೀಡಾಕೂಟವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕ್ರೀಡೆಗಳಲ್ಲಿ ಸೋಲು–ಗೆಲುವಿಗಿಂತ ಪಾಲ್ಗೊಳ್ಳುವಿಕೆಯೇ ಮುಖ್ಯ ಎಂದು ತಿಳಿಸಿದರು.

ಚಿದಂಬರ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಡಾ. ಹಾವಗಿರಾವ್ ಮೈಲಾರೆ ಮಾತನಾಡಿ, ದೈಹಿಕ ಹಾಗೂ ಹಾಗೂ ಮಾನಸಿಕ ವಿಕಾಸಕ್ಕಾಗಿ ಪಠ್ಯದ ಜತೆ ಕ್ರೀಡಾ ಚಟುವಟಿಕೆಗಳೂ ಅವಶ್ಯಕ. ಕ್ರೀಡಾಕೂಟಗಳು ಮಕ್ಕಳ ಪ್ರತಿಭೆ ಅನಾವರಣಕ್ಕೆ ವೇದಿಕೆ ಒದಗಿಸುತ್ತವೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಚಂದ್ರಪ್ಪ ಗೌರಶೆಟ್ಟಿ ಕಾಲೇಜು ಪ್ರಾಚಾರ್ಯ ಡಾ. ಚಂದ್ರಪ್ಪ ಭತಮುರ್ಗೆ ಮಾತನಾಡಿ, ಕ್ರೀಡೆಗಳು ವಿದ್ಯಾರ್ಥಿಗಳಲ್ಲಿ ಕ್ರಿಯಾಶೀಲತೆ ಹಾಗೂ ಆತ್ಮವಿಶ್ವಾಸ ಮೂಡಿಸುತ್ತವೆ. ಕ್ರೀಡೆಗಳಲ್ಲಿ ಆರೋಗ್ಯದ ಗುಟ್ಟು ಅಡಗಿದೆ ಎಂದು ತಿಳಿಸಿದರು.

ಓಂಕಾಂತ ಸೂರ್ಯವಂಶಿ, ಡಾ. ವಿಜಯಕುಮಾರ ಪಾಟೀಲ, ವಿಜಯಕುಮಾರ ತೋರಣಕರ್, ಬಾಲಾಜಿ ವಾಡೇಕರ್, ಎಲಿಜಬೆತ್ ಸ್ವರೂಪರಾಣಿ, ರಾಜಶೇಖರ ಮಂಗಲಗಿ, ದೈಹಿಕ ಉಪನ್ಯಾಸಕರಾದ ಸಂ-ಜಯ್ ಜೆಸ್ಸಿ, ಧನರಾಜ ಖೇಣಿ, ನಾಗನಾಥ ಬಿರಾದಾರ ಇದ್ದರು.

ತಹರೀನ್ ಪ್ರಾರ್ಥನೆ ಗೀತೆ ಹಾಡಿದರು. ಎಸ್.ಎಂ. ಐನಾಪುರ ನಿರೂಪಿಸಿದರು. ಬಸವರಾಜ ಹೆಗ್ಗೆ ವಂದಿಸಿದರು.

# ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ



**ಮಲ್ಲಮ್ಮ ನುಡಿ ವಾರ್ತೆ**
**ಬೀದರ:**

ಸೆಪ್ಟೆಂಬರ್.10:– ವಿದ್ಯಾರ್ಥಿಗಳು ಜೀವನದಲ್ಲಿ ಯಾವುದೇ ಸಮಸ್ಯೆಗಳಿಗೊಳಗಾದಾಗ ಟೋಲ್ ಫ್ರೀ ನಂ 14416 ಗೆ ಕರೆಯನ್ನು ಮಾಡಿ ಸಲಹೆ ಪಡೆದುಕೊಳ್ಳಬಹುದು ಎಂದು ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಅಧಿಕಾರಿ ಡಾ.ಕಿರಣ ಎಮ್.ಪಾಟೀಲ ಹೇಳಿದರು.

ಅವರು ಇಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಆರೋಗ್ಯ ಘಟಕ ಬೀದರ ಹಾಗೂ ಬಸವ ಪದವಿ ಪೂರ್ವ ಕಾಲೇಜು ಬೀದರದಲ್ಲಿ "ವಿಶ್ವ ಆತ್ಮಹತ್ಯ ತಡೆಗಟ್ಟುವ ದಿನಾಚರಣೆ ಕಾರ್ಯಕ್ರಮಕ್ಕೆ ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಮನಸ್ಸಿನಲ್ಲಿಯಾವಾಗಲೂಧನಾತ್ಮಕ ಯೋಚನೆಗಳನ್ನು ಮಾಡಬೇಕೆಂದು ವಿದ್ಯಾರ್ಥಿಗಳಿಗೆ ಸಲಹೆ ನಿಡಿದರು. ಮಹಾತ್ಮ ಪುರುಷರ ಧರ್ಮಗುರುಗಳ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಯೋಗ ಧ್ಯಾನವನ್ನು ರೂಢಿಸಿಕೊಳ್ಳಬೇಕು.

ವಿಶೇಷ ಉಪನ್ಯಾಸಕರಾಗಿ ಬೀದರ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಮನೋವೈದ್ಯಾಧಿಕಾರಿ ಡಾ.ಅಮಲ್ ಶರಿಫ್ ಮನೋವೈದ್ಯರು ಮಾತನಾಡಿ, ಆಧುನಿಕ ಯುಗದಲ್ಲಿ ಯುವಜನತೆ ಅತಿಯಾಗಿ ಮೊಬೈಲ್ ಮತ್ತು ಇಂಟರನೆಟ್‌ನಿಂದ ಅನೇಕ ವಿದ್ಯಾರ್ಥಿಗಳು ದುಶ್ಚಟಗಳಿಗೆ ಒಳಗಾಗುತ್ತಿದ್ದಾರೆ. ಹಾಗೂ ಅದರಿಂದ ದೈಹಿಕ & ಮಾನಸಿಕ ಕಾಯಿಲೆಗಳಿಗೆ ಒಳಗಾಗಿ ತಮ್ಮ ಅಮೂಲ್ಯವಾದ ಜೀವನವನ್ನೆನಾಶಮಾಡಿಕೊಳ್ಳುತ್ತಿದ್ದಾರೆ. ಕುಟುಬಂದಲ್ಲಿಯಾರಾದರು ಆತ್ಮಹತ್ಯಗೆ ಒಳಗಾಗುತ್ತಿದ್ದರೆ ಅದು ಮುಂದಿನ ಪೀಳಿಗೆಯ ಅಂದರೆ ಕುಟುಂಬದ ಯುವ ಸದಸ್ಯರ ಮೇಲೆ ಪರಿಣಾಮ ಬೀರುತ್ತದೆ ಣಟಿಜಜಜುಟಿಜಜ. ಇದಕೆ ಸರಿಯಾದ ಮಾಹಿತಿ ಕೊರತೆಯಿಂದ ಯುವಜನತೆ ಆತ್ಮಹತ್ಯಗೆ ಬಲಿಯಾಗುತ್ತಿದ್ದಾರೆ ಆದರಿಂದ ಸರಿಯಾದ ಮಾಹಿತಿ, ಸಲಹೆ, ಆಪ್ತಸಮಾಲೋಚನೆ, ಚಿಕಿತ್ಸೆ, ನೀಡಿದರೆ ಆತ್ಮಹತ್ಯ ತಡೆಗಟ್ಟಲು ಸರಿಯಾದ ಅರಿವು ಮೂಡಿಸುವುದರಿಂದ ಯುವಜನತೆಗಳನ್ನು ಆತ್ಮಹತ್ಯಗೆ ಬಲಿಯಾಗುವದನ್ನು ಕಡಿಮೆ ಮಾಡಬಹುದು ಎಂದು ಹೇಳಿದರು.

ಕುಂಬಾರವಾಡ ಪಿ.ಎಚ್.ಸಿ. ಮುಖ್ಯವೈದ್ಯಾಧಿಕಾರಿ ಡಾ. ವೈಶಾಲಿ ಮಾತನಾಡಿ, ವಿದ್ಯಾರ್ಥಿಗಳು ಮೊಬೈಲ್ ಕಡಿಮೆ ಬಳಸುವುದು ಹಾಗೂ ಯೋಗ ಧ್ಯಾನವನ್ನು ರೂಢಿಸಿಕೊಳ್ಳಬೇಕು ಎಂದು ಹೇಳಿದರು. ಶ್ರೀ ವಿರಶಟ್ಟಿ ಚನ್ನಶೇಟ್ಟೆ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳು ಜಿಲ್ಲಾ ಆನೆ ಕಾಲು ರೋಗ ನಿಯಂತ್ರಣ ಘಟಕ ಬೀದರ ರವರು ವಿದ್ಯಾರ್ಥಿಗಳು ಸಮಸ್ಯಗಳಿಗೆ ಚಿಂತೆ ಮಾಡದೆ ಸಮಸ್ಯಗಳಿಗೆ ಚಿಂತನೆ ಮಾಡುವ ಕುರಿತು ಪರಿಹಾರ ಕಂಡುಕೊಳ್ಳುವ ಬಗ್ಗೆ ಹೇಳಿದರು. ಮನೋವ್ಯದ್ಯರ ಹಾಗೂ ಆಪ್ತಸಮಾಲೋಚಕರ ಸಲಹೆ ಪಡೆಯುವಂತೆ ಕಿವಿ ಮಾತು ಹೇಳಿದರು.

ಬೀದರ ಜಿಲ್ಲಾ ಮಾನಸಿಕ ವಿಭಾಗದ ಮನೊಶಾಸ್ತ್ರಜ್ಞ ಮಲ್ಲಿಕಾರ್ಜುನ ಗುಡ್ಡೆ ಮಾತನಾಡಿ, ವಿದ್ಯಾರ್ಥಿಗಳು ಅಂಕಗಳಿಗೆ ಪ್ರಾಮುಖ್ಯತೆ ಕೊಡುವುದರ ಜೋತೆಗೆ ಸಮಸ್ಯಗಳಿಗೆ ಸೋಲದೆ ಅವುಗಳನ್ನು ಎದುರಿಸುವ ಧೈರ್ಯದೊಂದಿಗೆ ಮುನ್ನಡೆಯುವುದನ್ನು ಕಲಿಯಬೇಕು ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಬೀದರ ಬಸವ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ರಆಮಲಿಂಗ ಬೋರಳೆ, ಸವಿತಾ ಬೋರಳೆ, ಮೌನೆಶ್ವರಿ, ಪರಶುರಾಮ ಸಿಂದೆ, ಶಿವರಾಜ, ಅನೀಲಕುಮಾರ, ಜ್ಯೋತಿ, ಬ್ರಮಾರಂಬಾದೇವಿ ಸೇರಿದಂತೆ ಕಾಲೇಜಿನ ಎಲ್ಲಾ ಸಿಬ್ಬಂದಿವರ್ಗದವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಸಿಮಪ್ಪಾಸರಕೂರೆ ಆಪ್ತಸಮಾಲೋಚಕರು ಜಿಲ್ಲಾ ಮಾನಸಿಕ ವಿಭಾಗ, ಬೀದರ ಅವರು ನೇರವೇರಿಸಿಕೊಟ್ಟರು ಹಾಗೂ ವಂದನಾರ್ಪಣ ರೇಣುಕಾ ಆಪ್ತಸಮಾಲೋಚಕರು ಜಿಲ್ಲಾ ಮಾನಸಿಕ ವಿಭಾಗ, ಬೀದರ. ಅವರು ನೇರವೇರಿಸಿಕೊಟ್ಟರು.

# ಬೀದರ ತೋಟಗಾರಿಕೆ ಮಹಾ ವಿದ್ಯಾಲಯದಲ್ಲಿ ಶಿಕ್ಷಕರ ದಿನಾಚರಣೆ

**ಮಲ್ಲಮ್ಮ ನುಡಿ ವಾರ್ತೆ**
**ಬೀದರ:**

ಸೆಪ್ಟೆಂಬರ್.10 (ಕರ್ನಾಟಕ ವಾರ್ತೆ):–ಶಿಕ್ಷಕರು ಅಂದರೆ ಬರಿ ಪಾಠ ಮಾಡುವುದಷ್ಟೇಅಲ್ಲ, ವಿದ್ಯಾರ್ಥಿಗಳನ್ನು ಸಮಾಜದಲ್ಲಿ ಒಳ್ಳೆಯ ಆದರ್ಶ ವ್ಯಕ್ತಿಗಳಾಗಿ ಬದುಕಲು ಮಾಡುವುದರ ಜೊತೆ ಒಳ್ಳೆಯ ಸಂಸ್ಕಾರವನ್ನು ಕಲಿಸುವುದು ಕೂಡ ಅತೀ ಮುಖ್ಯವಾಗಿರುತ್ತದೆ ಎಂದು ಬೀದರ ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಡಾ.ಎಸ್.ವಿ.ಪಾಟೀಲ್ ತಿಳಿಸಿದರು.

ಅವರು ಇತ್ತೀಚಿಗೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟ ಅಡಿಯಲ್ಲಿ ಬರುವ ತೋಟಗಾರಿಕೆ ಮಹಾವಿದ್ಯಾಲಯ, ಬೀದರನಲ್ಲಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ 137ನೇ ಜನ್ಮ ದಿನದ ನಿಮಿತ್ಯ ಬೀದರ ತೆ–ೂಟಗಾರಿಕೆ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಶಿಕ್ಷಣ ಮತ್ತು ಸಂಸ್ಕಾರ ಬದುಕಿನ ಮೂಲ ಮಂತ್ರ, ಶಿಕ್ಷಣ ಎಂದಿಗೂ ಎಡವಲು ಬಿಡುವುದಿಲ್ಲ, ಸಂಸ್ಕಾರ ಕೆಡಲು ಬಿಡುವುದಿಲ್ಲ. ಶಿಕ್ಷಕರು ಸಹ ಒಳ್ಳೆಯ ರೀತಿಯಲ್ಲಿ ಸಾಧನೆ ಮಾಡಿದಲ್ಲಿ ಮಾತ್ರ ಸಮಾಜವು ಗುರುತಿಸಲಿಕ್ಕೆ ಸಾಧ್ಯ, ನುಡಿದಂತೆ ನಡೆದು ತೋರಿಸಬೇಕೆಂದು ಹೇಳಿದರು.

ಕಲಬುರಗಿ ಕೃಷಿ ಮಹಾವಿದ್ಯಾಲಯದ ನಿವೃತ್ತ ಡೀನ್ ಡಾ. ಸುರೇಶ ಪಾಟೀಲ್ ಮಾತನಾಡಿ, ಶಿಕ್ಷಕರನ್ನು ದೈಹಿಕ ಸಾಮರ್ಥ್ಯದಿಂದ ಅಳೆಯಲಿಕ್ಕೆ ಸಾಧ್ಯವಿಲ್ಲ, ಅವರಲ್ಲಿರುವ ಜ್ಞಾನದಿಂದ ಮಾತ್ರ ಅಳೆಯಲು ಸಾಧ್ಯ. ಕೇವಲ ಒಂದು ದಿವಸ ಶಿಕ್ಷಕರ ದಿನಾಚರಣೆಯನ್ನು ಆಚರಿಸಿದರೆ ಸಾಲದು ವಿದ್ಯಾರ್ಥಿಗಳು ಗುರುವಿನ ಮಾರ್ಗದರ್ಶನದಲ್ಲಿ ಸಾಧನೆ ಮಾಡಿ, ಈ ಸಮಾಜಕ್ಕೆ ಒಳ್ಳೆಯ ಕೊಡುಗೆ ನೀಡಿದಲ್ಲಿ ಮಾತ್ರ ತಂದೆ–ತಾಯಿ ಮತ್ತು ಗುರುವಿನ ಋಣ ತೀರಿಸಿದಂತಾಗುತ್ತದೆಂದು ವಿದ್ಯಾರ್ಥಿಗಳಿಗೆ ಕಿವಿಮಾತನ್ನು ಹೇಳಿದರು.

ಮಹಾವಿದ್ಯಾಲಯದ ವಿದ್ಯಾರ್ಥಿಗಳು ಶಿಕ್ಷಕರುಗಳಿಗಾಗಿ ವಿವಿಧ ಸಾಂಸ್ಕೃತಿಕ ಕ್ರೀಡಾಕೂಟಗಳನ್ನು ಏರ್ಪಡಿಸಿ ವಿಜೇತರಾದ ಶಿಕ್ಷಕರುಗಳಿಗೆ ಬಹುಮಾನವನ್ನು ವಿತರಣೆ ಮಾಡಿ ಸತ್ಕರಿಸಿದರು.

ಈ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂ ಸೇವಾ ಕಾರ್ಯಕ್ರಮದ ಅಧಿಕಾರಿ ವಿಜಯ ಮಹಾಂತೇಶ, ಡಾ. ಮುಹಮ್ಮದ ಫಾರೂಖ, ಡಾ. ರಾಜಕುಮಾರಎಮ್, ಡಾ. ವಿಜಯಮಹಾಂತೇಶ, ಡಾ. ವೀರೆಂದ್ರ ಪ್ರತಾಪಸಿಂಹ್, ಡಾ: ಅಂಬ್ರೇಶ, ಡಾ. ಅರವಿಂದಕುಮಾರ, ಡಾ. ಕಡ್ಲಿ ವೀರೇಶ, ಡಾ. ರಮೇಶ ನಾಯ್ಕ ಕೆ., ಶ್ರೀಮತಿ ಜಾನ್ನವಿ ಡಿ. ಆರ್., ಅನುರಾಧಾ ವ., ಡಾ. ಹರೀಶ ಟಿ., ಅಂಜನೇಯಎನ್ ಸೇರಿದಂತೆ ಮಹಾವಿದ್ಯಾಲಯದ ಎಲ್ಲ ಶಿಕ್ಷಕ, ಶಿಕ್ಷಕೇತರ ಸಿಬ್ಬಂದಿ ವರ್ಗದವರು ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಾದ ಕು. ಭಾನು ಪ್ರಸಾದ, ಸ್ವಾಗತ ಭಾಷಣ, ಕು. ಪೂರ್ಣಿಮಾ, ವಂದನಾರ್ಪಣೆ ಮಾಡಿದರೆ, ಕು. ಲಕ್ಷ್ಮೀ ಇ., ನಿರೂಪಣೆ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟರು.

# ಕೃಷಿ ಇಲಾಖೆಯಿಂದ ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ**
**ಬೀದರ:**

ಸೆಪ್ಟೆಂಬರ್.10–2025–26ನೇ ಸಾಲಿನ ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ ಎಣ್ಣೆಕಾಳು ಕೋಯ್ಲೋತರ ಘಟಕಕ್ಕೆ ಮೂಲ ಸೌಕರ್ಯ ಕಲ್ಪಿಸಲು ಕೃಷಿ ಇಲಾಖೆಯಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಬೀದರ ಜಂಟಿ ಕೃಷಿ ನಿರ್ದೇಶಕಿ ದೇವಿಕಾ ಆರ್. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸ್ಥಳೀಯವಾಗಿ ಉದ್ಯೋಗಾವಕಾಶ ಕಲ್ಪಿಸಲು, ಶುದ್ಧ ಖಾದ್ಯ ತೈಲ ಉಪಯೋಗಿಸಲು ಅನುಕೂಲ ಆಗುವಂತೆ ಹಾಗೂ ಎಣ್ಣೆಕಾಳು ಬೆಳೆ ಉತ್ತೇಜಿಸಲು ಈ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ. ಎಣ್ಣೆಕಾಳು ಕೋಯ್ಲೋತರ ಘಟಕಗಳಿಗೆ ಅವಶ್ಯವಿರುವ ಯಂತ್ರೋಪಕರಣ ಖರೀದಿಸಲು ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು, ರೈತ ಉತ್ಪಾದಕ ಸಂಘಗಳು ವಿಸ್ತ್ರ ಯೋಜನಾ ವರದಿಯೊಂದಿಗೆ ಅರ್ಜಿ ಸಲ್ಲಿಸಬಹುದು. ಯೋಜನಾ ವರದಿಯು ಶೇ.33 ರಷ್ಟು ಅಥವಾ ರೂ. 9.99 ಲಕ್ಷ ಮೀರದಂತೆ ಸಹಾಯಧನ ಒದಗಿಸಲಾಗುವುದು.

ಅರ್ಜಿಗಳನ್ನು ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪರಿಶೀಲಿಸಿ ಅರ್ಹ ಫಲಾನುಭವಿಯನ್ನು ಕಾರ್ಯಕಾರಿ ಸಮಿತಿಯಲ್ಲಿ ಆಯ್ಕೆಮಾಡಲಾಗುವುದೆಂದು ಅವರು ತಿಳಿಸಿದ್ದಾರೆ.

ಜಾಹೀರಾತಿಗಾಗಿ ಇಂದೇ
ಸಂಪರ್ಕಿಸಿ:7795896664

# ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ**

ಬೀದರ, ಸೆಪ್ಟೆಂಬರ್.10–2025–26ನೇ ಸಾಲಿನ ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ ಎಣ್ಣೆಕಾಳು ಕೋಯ್ಲೋತರ ಘಟಕಕ್ಕೆ ಮೂಲ ಸೌಕರ್ಯ ಕಲ್ಪಿಸಲು ಕೃಷಿ ಇಲಾಖೆಯಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಬೀದರ ಜಂಟಿ ಕೃಷಿ ನಿರ್ದೇಶಕಿ ದೇವಿಕಾ ಆರ್. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸ್ಥಳೀಯವಾಗಿ ಉದ್ಯೋಗಾವಕಾಶ ಕಲ್ಪಿಸಲು, ಶುದ್ಧ ಖಾದ್ಯ ತೈಲ ಉಪಯೋಗಿಸಲು ಅನುಕೂಲ ಆಗುವಂತೆ ಹಾಗೂ ಎಣ್ಣೆಕಾಳು ಬೆಳೆ ಉತ್ತೇಜಿಸಲು ಈ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ. ಎಣ್ಣೆಕಾಳು ಕೋಯ್ಲೋತರ ಘಟಕಗಳಿಗೆ ಅವಶ್ಯವಿರುವ ಯಂತ್ರೋಪಕರಣ ಖರೀದಿಸಲು ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು, ರೈತ ಉತ್ಪಾದಕ ಸಂಘಗಳು ವಿಸ್ತ್ರ ಯೋಜನಾ ವರದಿಯೊಂದಿಗೆ ಅರ್ಜಿ ಸಲ್ಲಿಸಬಹುದು. ಯೋಜನಾ ವರದಿಯು ಶೇ.33 ರಷ್ಟು ಅಥವಾ ರೂ. 9.99 ಲಕ್ಷ ಮೀರದಂತೆ ಸಹಾಯಧನ ಒದಗಿಸಲಾಗುವುದು.

# ಹಾರಕೂಡ ಗ್ರಾಮದಲ್ಲಿ ವಿದ್ಯುತ್ ಕಂಬಗಳ ತಂತಿ ಸ್ಥಳಾಂತರಕ್ಕೆ ಮನವಿ.

**ಮಲ್ಲಮ್ಮ ನುಡಿ ವಾರ್ತೆ**
**ಬಸವಕಲ್ಯಾಣ :**

ಸೆ 10 ತಾಲೂಕಿನ ಹಾರಕೂಡ ಗ್ರಾಮದ ಮುಖ್ಯ ರಸ್ತೆಯಲ್ಲಿ ಇರುವ 11000 ತಿಥಿ ವಿದ್ಯುತ್ ಕಂಬಗಳು ಹಾಗೂ ತಂತಿಗಳು ಬೇರೆ ಕಡೆ ಸ್ಥಳಾಂತರ ಮಾಡ ಬೇಕು ಎಂದು ಗ್ರಾಮ ಪಂಚಾಯತ ಸಧ್ಯಸರಾದ ಚನ್ನವೀರ ಎ. ಹೋಳಕರ್ ಅವರು ಸಾಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಗೆ ಬರೆದ ಮನವಿ ಪತ್ರವನ್ನು ಇಲ್ಲಿನ ಜೆಸ್ಕಾಂ ತಾಲೂಕಿನ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಈ ಗ್ರಾಮದಲ್ಲಿನ ಮುಖ್ಯ ರಸ್ತೆಯಲ್ಲಿ ಹಾಗೂ ಜನರು ವಾಸಿಸುವ ಮನೆಯ ಮೇಲೆಯಿಂದಲೆ ವಿದ್ಯುತ್ ತಂತಿ



ಹಾದು ಹೋಗಿದೆ ಇದರಿಂದ ಸಾರ್ವಜನಿಕರಿಗೆ ಬಹಳಷ್ಟು ತೊಂದರೆ ಅನುಭವಿಸುವಂತಾಗಿದೆ ಯಾವುದೇ ಸಂದರ್ಭದಲ್ಲಾದರು ಪ್ರಾಣ ಹಾನಿ ಅವಘಡ ಸಂಭವಿಸುವ ಸಾಧ್ಯತೆ ಇದೆ ಎಂದರು. ಸಂಬಂಧಪಟ್ಟ ಅಧಿಕಾರಿಗಳು ಆದಷ್ಟು ಬೇಗ ಎಚ್ಚೆತ್ತುಕೊಂಡು ಮುಂದೆ ಆಗುವ ಅನಾಹುತಗಳನ್ನು ತಪ್ಪಿಸಲು ವಿದ್ಯುತ್ ಕಂಬಗಳು ಮತ್ತು ತಂತಿಯನ್ನು ಬೇರೆ ಕಡೆ ಸ್ಥಳಾಂತರಿಸಬೇಕು ಎಂದು ಗ್ರಾ. ಪಂ. ಸದಸ್ಯರಾದ ಚನ್ನವೀರ ಎ. ಹೋಳಕರ್ ಅವರು ಮನವಿ ಪತ್ರದ ಮೂಲಕ ಒತ್ತಾಯಿಸಿದ್ದಾರೆ.

# ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ನನ್ನ ಪ್ರಥಮ ಆದ್ಯತೆ: ಶಾಸಕ ಪಾಟೀಲ್





**ಮಲ್ಲಮ್ಮ ನುಡಿ ವಾರ್ತೆ**
**ಚಿಟಗುಪ್ಪ:**

> ಸರ್ಕಾರಿ ಶಾಲೆಗಳಲ್ಲಿ ಶೈಕ್ಷಣಿಕ ಅಭಿವೃದ್ಧಿಗೆ ಸರ್ಕಾರ ಸಾಕಷ್ಟು ಸೌಲಭ್ಯ ಒದಗಿಸುತ್ತಿದ್ದು, ಶಿಕ್ಷಕರು, ಇಲಾಖೆಯ ಅಧಿಕಾರಿಗಳು ಮನೆ ಮನೆಗೆ ತೆರಳಿ ಪಾಲಕರ ಮನವಲಿಸಿ ಶಾಲೆ ಕಡೆ ಮಕ್ಕಳು ಬರುವಂತೆ ಪ್ರಾಮಾಣಿಕ ಪ್ರಯತ್ನ ಮಾಡಿ.
> **–ಡಾ.ಶೈಲೇಂದ್ರ ಬೆಲ್ದಾಳೆ ಶಾಸಕ, ಬೀದರ್ ದಕ್ಷಿಣ ಕ್ಷೇತ್ರ**

ಮಕ್ಕಳ ಭವಿಷ್ಯ ರೂಪಿಸುವ ಶಿಕ್ಷಕರ ಪಾತ್ರ ಸಮಾಜದಲ್ಲಿ ಮಹತ್ವದ್ದಾಗಿದ್ದು, ಶಿಕ್ಷಕರಿಗೆ ಸಮಾಜದಲ್ಲಿ ಬಹಳ ಗೌರವದ ಸ್ಥಾನವಿದ್ದು, ಶಿಕ್ಷಕರು ನಿರ್ವಹಿಸುವ ಕಾರ್ಯ ಅನನ್ಯವಾಗಿದೆ ಎಂದು ಶಾಸಕ ಡಾ. ಸಿದ್ದು ಪಾಟೀಲ್ ನುಡಿದರು. ಪಟ್ಟಣದ ಶ್ರೀ ಮಡಿವಾಳೇಶ್ವರಗವಿ ಕಲ್ಯಾಣ ಮಂಟಪದಲ್ಲಿ ಶಿಕ್ಷಣ ಇಲಾಖೆಯಿಂದ ಮಂಗಳವಾರ ಆಯೋಜಿಸಿದ್ದ ತಾಲೂಕು ಮಟ್ಟದ 64ನೇ ಶಿಕ್ಷಕರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ನನ್ನ ಮೊದಲ ಆದ್ಯತೆ ಶಿಕ್ಷಣ ಮತ್ತು ಶಿಕ್ಷಕರಿಗೆ, ಗೌರವಿಸುವುದು, ಅಭಿವೃದ್ಧಿಗೊಳಿಸುಲಾಗುವುದು ಎಂದರು. ಮನುಷ್ಯ ಏನನ್ನಾದರೂ ಸಾಧಿಸಬೇಕೆಂದರೆ ಅವನ ಹಿಂದೆ ಗುರು ಇರಬೇಕು ಜೊತೆಗೆ ಉತ್ತಮ ಶಿಕ್ಷಣ ಇರಬೇಕು ಎಂದರು. ಕ್ಷೇತ್ರದಲ್ಲಿ ಶಿಕ್ಷಣ ಅಭಿವೃದ್ಧಿಗೆ ಪ್ರಥಮ ಆದ್ಯತೆ ನೀಡುತ್ತಿದ್ದು, ಅದರಂತೆ ನಾನಾ ಅಭಿವೃದ್ಧಿಗೆ ಶ್ರಮಿಸಲಾಗುತ್ತಿದೆ. ನೂತನ ತಾಲೂಕು ಕೇಂದ್ರವಾಗಿರುವ ಇಲ್ಲಿ ಪ್ರಜಾಸೌಧ ಶಂಕುಸ್ಥಾಪನೆ ನೆರವೇರಿಸಲಾಗಿದೆ. ಅದರಂತೆ ಕ್ರೀಡಾಂಗಣ, ತಾಲೂಕು ಮಟ್ಟದ ಸರ್ಕಾರಿ ಆಸ್ಪತ್ರೆ, ತಾಪಂ ಕಟ್ಟಡ ನಿರ್ಮಾಣ ಸೇರಿ ಇತರೆ ಇಲಾಖೆಯ ಕಟ್ಟಡ ನಿರ್ಮಾಣಕ್ಕೂ ಸರ್ಕಾರದ ಮೇಲೆ ಒತ್ತಡ ತಾಲೂಕಿಗೆ ಬೇಕಾಗಿರುವ ಸೌಲಭ್ಯಗಳು ತರುವ ಪ್ರಯತ್ನ ಮಾಡುತ್ತೇನೆ. ಶಿಕ್ಷಕರ ಸಮಸ್ಯೆಗಳಿಗೂ ಸದಾ ಸ್ಪಂದಿಸಲಾಗುವುದು ಎಂದು ಭರವಸೆ ನೀಡಿದರು. ಬೀದರ್ ದಕ್ಷಿಣ ಕ್ಷೇತ್ರದ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಮಾತನಾಡಿ, ಮಕ್ಕಳ ಸರ್ವಾಂಗೀಣ ವ್ಯಕ್ತಿತ್ವದ ಬೆಳವಣಿಗೆಗೆ ಪೂರಕವಾಗಿ ಪಾಠ ಬೋಧನೆ ಮಾಡುವ ಮೂಲಕ ಮುಂದಿನ ಉತ್ತಮ ನಾಗರಿಕರನ್ನಾಗಿ ರೂಪಿಸುವ ಬಹು ದೊಡ್ಡ ಜವಾಬ್ದಾರಿ ಶಿಕ್ಷಕರ ಮೇಲಿದೆ. ಕಲ್ಲಿನ ಮೂರ್ತಿಯನ್ನು ಶಿಲೆಯನ್ನಾಗಿಸುವಂತೆ ಅಮೂರ್ತ ರೂಪದ ಮಕ್ಕಳನ್ನು ಮೂರ್ತರೂಪ ಕೊಡುವ ಮಕ್ಕಳ ಭವಿಷ್ಯ ರೂಪಿಸುವ ಗುರುತರ ಜವಾಬ್ದಾರಿ ಶಿಕ್ಷಕರ ಮೇಲಿದೆ. ಮಕ್ಕಳ ಅಂತರಾಳವನ್ನು ಅರಿತು, ಪರಿಣಾಮಕಾರಿಯಾಗಿ ಬೋಧನೆ ಮಾಡುವ ಮೂಲಕ ಮಕ್ಕಳು ಸುಂದರ ವ್ಯಕ್ತಿತ್ವ ರೂಪಿಸಿಕೊಳ್ಳುವ ಜವಾಬ್ದಾರಿ ನಿಭಾಯಿಸುವ ಶಿಕ್ಷಕರ ಸ್ಥಾನ ಗೌರವಕ್ಕೆ ಭಾಜನವಾಗಿದ್ದು, ಶಿಕ್ಷಕ ಓರ್ವ ವ್ಯಕ್ತಿ ಅಲ್ಲ ಅದೊಂದು ಶಕ್ತಿಯಾಗಿದ್ದು, ತಾಲೂಕಿನ ಶೈಕ್ಷಣಿಕ ಪ್ರಗತಿಗೆ ಸಹಕಾರಿಯಾಗಿ ಕಾರ್ಯ ನಿರ್ವಹಿಸಬೇಕು ಎಂದು ಹೇಳಿದರು. ಕ್ಷೇತ್ರಶಿಕ್ಷಣಾಧಿಕಾರಿ ವೆಂಕಟೇಶ್ ಗುಡಾಳ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರೊ. ಶಾಂತಕುಮಾರ ಪಾಟೀಲ್ ವಿಶೇಷ ಉಪನ್ಯಾಸ ನೀಡಿದರು. ಅಯ್ಯಪ್ಪ ಸ್ವಾಮಿ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಲಿಂಗ ಶಿವಾಚಾರ್ಯರು ಮರುಳಾರಾಧ್ಯ ಶಿವಾಚಾರ್ಯರು ಕಾರ್ಯಕ್ರಮದ ದಿವ್ಯಸಾನಿಧ್ಯವಹಿಸಿ ಆಶೀರ್ವಾವಚನ ನೀಡಿದರು. ಈ ಸಂದರ್ಭದಲ್ಲಿ ಉತ್ತಮ ಶಿಕ್ಷಕರ ಪ್ರಶಸ್ತಿ ಪಡೆದವರಿಗೆ, ನಿವೃತ್ತ ಶಿಕ್ಷಕರಿಗೆ ಹಾಗೂ ಮರಣ ಹೊಂದಿದ ಶಿಕ್ಷಕರ ಕುಟುಂಬದ ಸದಸ್ಯರಿಗೆ ಸನ್ಮಾನಿಸಿ ಗೌರವಿಸಿದರು. ವಿದ್ಯಾರ್ಥಿಗಳಿಂದ ಸಂಸ್ಕೃತಿಕ ಕಾರ್ಯಗಳು ಜರುಗಿದವು. ಈ ಸಂದರ್ಭದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ರವೀಂದ್ರರೆಡ್ಡಿ ಮಾಲಿ ಪಾಟೀಲ್, ಪ್ರೌಢ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಮಹೇಬುಬ್ ಪಟೇಲ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕಾಧ್ಯಕ್ಷ ರಾಜಪ್ಪ ಜಮಾದರ್, ಸರ್ಕಾರಿ ನೌಕರರ ಸಂಘದ ತಾಲೂಕಾಧ್ಯಕ್ಷ ರಾಜಶೇಖರ ಉಪ್ಪಿನ, ಪ್ರೌಢ ಶಾಲಾ ಶಿಕ್ಷಕರ ಸಂಘದ ತಾಲೂಕಾಧ್ಯಕ್ಷ ಅಶೋಕಕುಮಾರ್ ಮಹೇಂದ್ರಕ್ಕರ್, ಸಾವಿತ್ರಿಬಾಯಿ ಪುಲೇ ಶಿಕ್ಷಕಿಯರ ಸಂಘದ ತಾಲೂಕಾಧ್ಯಕ್ಷೆ ಪ್ರೇಮಿಳಾ ರೆಡ್ಡಿ, ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕಾಧ್ಯಕ್ಷ ಅನೀಲಕುಮಾರ್ ಸಿಂಧೆ, ಪಂಡಿತ ಕಲ್ಯಾಣ, ಮಾರುತಿ ಜಟಗೊಂಡ, ಕಾಶಪ್ಪ ಅಮ್ಮಗೊಂಡ, ಪ್ರೀತಮಸಿಂಗ್ ಜಾಧವ್, ಕಾಶಿನಾಥ್ ಬೋರಾಳೆ, ಕರುಣಾದೇವಿ ಸಿಂಧೆ, ರಾಮಚಂದ್ರ, ರಾಮಲು, ಶಿವಕುಮಾರ್ ರಾಠೋಡ, ರಾಮಕೃಷ್ಣ ನಿರ್ಣಕರ್, ಸತ್ಯನಾರಾಯಣ ಮಾಳಾ, ಸಂತೋಷ ಹಳ್ಳಿಖೇಡ್, ರಮೇಶ ಖ್ಯಾತ, ಸಂತೋಷ, ಭಜರಂಗಬಲಿ, ಸಂಜೀವನ ಭೋಸ್ಲೆ, ಗುಂಡಪ್ಪ ಕೋರಿ, ಪ್ರಭು ಕಾಂಚನಾಳ, ತನುಜಾ ಆಣದುರೆ, ಸಂಗೀತಾ, ಸೀಮಾ, ಹಸನ್, ಮಾಣಿಕರಾವ ಪವರ್, ದಿಲೀಪ ಕಟ್ಟಿಮನಿ, ಸೇರಿದಂತೆ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಶಾಲೆಯ ಶಿಕ್ಷಕ ಮತ್ತು ಶಿಕ್ಷಕಿಯರು ಉಪಸ್ಥಿತರಿದ್ದರು. ಕಾರ್ಯಕ್ರಮ ಸುದರ್ಶನ್ ವಿಶ್ವಕರ್ಮ ನಿರೂಪಿಸಿ ವಂದಿಸಿದರು.

ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಭವ್ಯ ಮೆರವಣಿಗೆ ಪುರಸಭೆ ಅಧ್ಯಕ್ಷ ದಿಲೀಪಕುಮಾರ್ ಬಗ್ದಲಕರ್ ಚಾಲನೆ ನೀಡಿದರು.

# ಮಹಾತ್ಕಾರ್ಯಗಳಿಗೆ ಮನಸ್ಸೆ ಮೂಲಾಧಾರ – ಹಾರಕೂಡ ಶ್ರೀ



(ವರದಿ. ಡಿ. ಕೆ. ಪ್ರಹ್ಲಾದ ಜಿ.)
**ಮಲ್ಲಮ್ಮ ನುಡಿ ವಾರ್ತೆ**

ಬಸವಕಲ್ಯಾಣ :– ಸೆ 10

ಸೃಷ್ಟಿಕರ್ತ ಪರಮಾತ್ಮನನ್ನು ಕುರಿತು ಬಹು ಎತ್ತರದ ಭಕ್ತಿಯ ಮನಸ್ಸು ಇದ್ದರೆ ಅಂಥಹವರಿಂದ ಸಮಾಜದಲ್ಲಿ ಮಹತ್ಕಾರ್ಯಗಳು ಘಟಿಸುತ್ತವೆ ಎಂದು ಹಾರಕೂಡದ ಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು ನುಡಿದರು.

ತಾಲೂಕಿನ ಬೇಡರವಾಡಿ (ಗ) ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿದ ವೀರ ಹನುಮಾನ ದೇವಸ್ಥಾನದ ಕಳಸಾರೋಹಣ ಸಮಾರಂಭದ ದಿವ್ಯಸಾನಿಧ್ಯವಹಿಸಿ ಮಾತನಾಡಿದ ಶ್ರೀಗಳು, ಮನಸ್ಸು ಶುದ್ಧವಾದಷ್ಟು ಸತ್ಕಾರ್ಯಗಳು ಅರಳುತ್ತವೆ.

ಹೀಗಾಗಿ ಮನಸ್ಸಿನ ಸುದ್ದಿಕರಣಕ್ಕಾಗಿ ಸಾಧು ಸಂತರ ಸತ್ಸಂಗದಲ್ಲಿ ಮನಸಾರೆ ತೊಡಗಿಸಿಕೊಳ್ಳಬೇಕು. ಸುದೀರ್ಘ ಕಾಲದ ಪೂಜೆ ಪುನಸ್ಕಾರಗಳಿಗಿಂತಲೂ ಒಂದು ಕ್ಷಣದ ಗುರು ಸಾನಿಧ್ಯ ಶ್ರೇಷ್ಠವಾಗಿರುತ್ತದೆ.

ಗುರು ಗೋವಿಂದನ ಅನುಗ್ರಹ ಪಡೆಯಬೇಕಾದರೆ, ಹೆತ್ತತಾಯಿಯನ್ನು ಅತ್ಯಂತ ಗೌರವದಿಂದ ಕಾಣಬೇಕು.

ದೈವತ್ವದ ಗಣಿಯಾಗಿರುವ ತಾಯಿಯನ್ನು ಪೂಜ್ಯನೀಯವಾಗಿ ನೋಡಿಕೊಳ್ಳುವವರ ಬಾಳು ಸುಭಿಕ್ಷೆಯಿಂದ ಕೂಡಿರುತ್ತದೆ ಎಂದು ನುಡಿದರು.

ಸಮಸ್ತ ಭಾರತೀಯರ ಆರಾಧ್ಯ ದೇವರಾದ ಶ್ರೀರಾಮಚಂದ್ರರ ಭಕ್ತ ವೀರ ಹನುಮಾನ ಮಂದಿರ ನಿರ್ಮಿಸಿ ಕಳಸಾರೋಹಣ ಹಾಡಿರುವ ಬೇಡರವಾಡಿ (ಯು) ಗ್ರಾಮದ ಎಲ್ಲ ಜನತೆಯಲ್ಲಿ ಆಂಜನೇಯ ಸ್ವಾಮಿಯ ಆದರ್ಶಗಳು ಬೆಳೆದು ಬರುವಂತಾಗಲಿ ಹಾಗೂ ಸರ್ವರಿಗೂ ಸನ್ಮಂಗಳವಾಗಲಿ ಎಂದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಆಶಿತೋಷ ಮಹಾರಾಜ, ಅವಧೂತಪುರಿ ಮಹಾರಾಜ, ಧನರಾಜ ಭೋಸಲೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಕಾರ್ತಿಕ ಸ್ವಾಮಿ ಎಲ್ಲದಗುಂಡಿ ಪ್ರಾರ್ಥನೆ ಗೀತೆ ಹಾಡಿದರು. ಗೋವಿಂದ ಗುರೂಜಿ ಸ್ವಾಗತಿಸಿ. ನಿರೂಪಿಸಿದರು. ಕಾರ್ಯಕ್ರಮಕ್ಕೂ ಮೊದಲು ಹಾರಕೂಡ ಶ್ರೀಗಳ ಅದ್ದೂರಿ ಮೆರವಣಿಗೆ ಜರುಗಿತು.

**ಲೋಕಮುದ್ರಾ ಸೌಹಾರ್ದ ಕ್ರೇಡಿಟ್ ಕೋ–ಆಪರೇಟಿವ್ ಲಿ., ಭಾಲ್ಕಿ**
**ಜಾಧವ ಕಾಂಪ್ಲೆಕ್ಸ್, ಬೀದರ ರೋಡ್ ಭಾಲ್ಕಿ–58328, ಬೀದರ ಜಿಲ್ಲೆ.**

**09ನೇ ಸಾಮಾನ್ಯ ಸಭೆಯ ನೋಟಿಸ್**

ಆತ್ಮೀಯ ಸಹಕಾರಿ ಬಂಧುಗಳೇ,

ದಿನಾಂಕ 25–09–2025ರ ಗುರುವಾರ ರಂದು ಸಮಯ ಬೆಳಿಗ್ಗೆ 10:10 ಗಂಟೆಗೆ ಸ್ಥಳ ಸಹಕಾರಿಯ ಕಛೇರಿ ಆವರಣದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಸುಭಾಷ ಶೆಡೋಳೆ ಇವರ ಅಧ್ಯಕ್ಷತೆಯಲ್ಲಿ ಸಹಕಾರಿಯ 09ನೇ ವಾರ್ಷಿಕ ಮಹಾ ಸಭೆಯನ್ನು ಕರೆಯಲಾಗಿದೆ. ಸಹಕಾರಿಯ ಸದಸ್ಯರಾದ ತಾವು ಸದರಿ ಸಭೆಯಲ್ಲಿ ಸಮಯಕ್ಕೆ ಸರಿಯಾಗಿ ಭಾಗವಹಸಿ ಸಭೆಯನ್ನು ಯಶಸ್ವಿಗೊಳಿಸಲು ಕೊರಿದೆ.

**ಸಭೆಯಲ್ಲಿ ಚರ್ಚಿಸುವ ವಿಷಯಗಳು:–**

1. ಸಭೆಯ ನೋಟಿಸ್ ಓದಿ ದಾಖಲಿಸುವುದು.
2. ಹಿಂದಿನ ಮಹಾಸಭೆಯ ನಡಾವಳಿ ಮತ್ತು ನಿರ್ಣಯಗಳನ್ನು ಓದಿ ದೃಡಿಕರಿಸುವುದು.
3. 2024–25ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಮತ್ತು ಆರ್ಥಿಕ ತಖ್ತೆಗಳನ್ನು ಅಂಗೀಕರಿಸುವ ಕುರಿತು.
4. 2025–26ನೇ ಸಾಲಿನ ಕ್ರೀಯಾ ಯೋಜನೆಯ ಅನುಮೊದನೆ.
5. 2025–26ನೇ ಸಾಲಿನ ಅಂದಾಜು ಆಯ–ವ್ಯಯವನ್ನು ಮಂಜುರು ಮಾಡುವುದು.
6. 2025–26ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕ ಮಾಡುವ ಬಗ್ಗೆ.
7. 2024–25ನೇ ಸಾಲಿನ ಲಾಭ ವಿಂಗಡನೆ ಬಗ್ಗೆ.
8. ಸಹಕಾರಿಯ ವತಿಯಿಂದ ಸದಸ್ಯರಿಗೆ ಸೇವೆ ನೀಡಲು ಶಾಖೆ ಆರಂಭಿಸುವ ಕುರಿತು.
9. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರ ವಿಷಯಗಳು.

**ಸ್ಥಳ:**ಭಾಲ್ಕಿ
**ದಿನಾಂಕ:** 10–09–2025

**ಆಡಳಿತ ಮಂಡಳಿಯ ಪರವಾಗಿ**
ಸಹಿ/–
ಮುಖ್ಯ ಕಾರ್ಯನಿರ್ವಾಹಕರು
ಲೋಕಮುದ್ರಾ ಸೌಹಾರ್ದ
ಕ್ರೇಡಿಟ್ ಕೋ– ಆಪರೇಟಿವ್ ಲಿ., ಭಾಲ್ಕಿ

**ಸೂಚನೆಗಳು:–**
1. ಸಾಮಾನ್ಯ ಸಭೆಯಲ್ಲಿ ಭಾಗವಹಿಸುವ ಸದಸ್ಯರು ಸಹಕಾರಿಯ ಗುರುತಿನ ಚಿಟಿ ಕಡ್ಡಾಯವಾಗಿ ತರಬೇಕು.
2. ಸಹಕಾರಿಯ ವಿಷಯದ ಕುರಿತು ತಮ್ಮ ಪ್ರಶ್ನೆಗಳನ್ನು ಇದ್ದರೆ ದಿನಾಂಕ 19–09–2025ರ ಒಳಗಾಗಿ ಲಿಖಿತವಾಗಿ ಸಹಕಾರಿಗೆ ನೀಡಬೇಕು.

# ಹೈನುಗಾರಿಕೆಯಿಂದ ಆರ್ಥಿಕ ಸದೃಢತೆ: ಶಾಸಕ ಮಾನಪ್ಪ ವಜ್ಜಲ್ ಸಲಹೆ

**ಮಲ್ಲಮ್ಮ ನುಡಿ ವಾರ್ತೆ**
**ಲಿಂಗಸುಗೂರು,**

ಸೆಪ್ಟೆಂಬರ್ 09: ಕೇಂದ್ರ ಹಾಗೂ ರಾಜ್ಯ ಸರಕಾರದಿಂದ ಸಿಗುವ ಸಾಲ ಸೌಲಭ್ಯಗಳನ್ನು ಶ್ರಮಪಟ್ಟು ಬಳಸಿಕೊಂಡು, ಮಹಿಳೆಯರು, ರೈತರು, ಹೈನುಗಾರಿಕೆಗೆ ಹೆಚ್ಚು ಒತ್ತು ನೀಡುವ ಮೂಲಕ ಆರ್ಥಿಕವಾಗಿ ಸದೃಢತೆ ಸಾಧಿಸಬೇಕು ಎಂದು ಶಾಸಕ ಮಾನಪ್ಪ ವಜ್ಜಲ್ ಸಲಹೆ ನೀಡಿದರು. ಲಿಂಗಸುಗೂರು ತಾಲೂಕ ಪಂಚಾಯತ್ ಸಭಾಂಗಣದಲ್ಲಿ ನಡೆದ 'ಹಾಲು ಉತ್ಪಾದಕರ ಸಹಕಾರ ಸಂಘ ಸ್ಥಾಪನೆ' ಮತ್ತು 'ಚಿಂತನ–ಮಂಥನ ಕಾರ್ಯಕ್ರಮ' ಉದ್ಘಾಟನೆ ಸಂದರ್ಭದಲ್ಲಿ ಮಾತನಾಡಿದ ಅವರು, ಸರ್ಕಾರದಿಂದ ಲಭ್ಯವಿರುವ ಸಬ್ಸಿಡಿ ಹಾಗೂ ಆರ್ಥಿಕ ನೆರನೆರವು ಪರಿಣಾಮಕಾರಿಯಾಗಿ ಉಪಯೋಗಿಸಿ, ಉತ್ತಮ ತಳಿಯ ರಾಸುಗಳನ್ನು ಸಾಕಾಣಿಕೆ ಮಾಡುವುದು, ಗುಣಮಟ್ಟದ ಆಹಾರ ಒದಗಿಸುವುದು, ಹಸುಗಳಿಗೆ ಅಗತ್ಯ ಲಸಿಕೆಗಳನ್ನು ನೀಡುವ ಮೂಲಕ ಪ್ರತಿ ಲೀಟರ್ ಹಾಲಿಗೆ ತಕ್ಕ ಮೌಲ್ಯವನ್ನೊದಗಿಸುವ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದರು. ಸಾಧ್ಯವಾದ ಗುರಿಯೆಂದರೆ, ಪ್ರತಿ ಲೀಟರ್ ಹಾಲಿನ ಬೆಲೆ 50 ರೂಪಾಯಿ ಆದರೂ ಕನಿಷ್ಠ 30 ರೂಪಾಯಿಯಷ್ಟು ವೆಚ್ಚ ಮಾಡುತ್ತಾ ಸ್ವಾವಲಂಬಿತ ಜೀವನ ಮೌಲ್ಯ ಸಾಧಿಸುವುದು ಎಂದು ಮಹತ್ವಾರ್ಹವಾಗಿ ಹೇಳಿದರು.

ಕಾರ್ಯಕ್ರಮದಲ್ಲಿ ತಾ ಪಂ ಕಾರ್ಯನಿರ್ವಾಹಕ ಅಧಿಕಾರಿ ಉಮೇಶ್ ಪ್ರಸ್ತಾವನೆ ನೀಡಿದರು. ಲಿಂಗಸುಗೂರು ತಾಲ್ಲೂಕಿನಲ್ಲಿ ಆಧುನಿಕ ತಂತ್ರಜ್ಞಾನ ಬಳಕೆ ಹಾಗೂ ಪ್ರತಿ ಹಳ್ಳಿಯಲ್ಲಿ ಹಾಲು ಉತ್ಪಾದಕ ಸಂಘ ಸ್ಥಾಪನೆಗೊಳಿಸಿ ಮುಂದಿನ ಎರಡು ತಿಂಗಳಲ್ಲಿ ಪ್ರತಿದಿನ 50,000 ಲೀಟರ್ ಹಾಲು ಉತ್ಪಾದನೆ ಗುರಿಯನ್ನು ಸಾಧಿಸಲು ಅಧಿಕಾರಿಗಳು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ತಾ ಪಂ ಸಹಾಯಕ ನಿರ್ದೇಶಕರು ಪಂಪನಗೌಡ ಪಾಟೀಲ್, ಕೆಎಂಎಫ್ ನಿರ್ದೇಶಕರು ಅಮರಗುಂಡಪ್ಪ ಹಳ್ಳಿ, ಸ.ನಿರ್ದೇಶಕರು ಪಶುಪಾಲನಾ ಇಲಾಖೆ ಡಾ. ಅಮರೇಗೌಡ ಪಾಟೀಲ್, ಕೃಷಿ ವಿಸ್ತರಣೆ ಶಿಕ್ಷಣ ಕೇಂದ್ರ ಮುಖ್ಯಸ್ಥರು ವಾಣಿ ಶ್ರೀ, ಸಹಕಾರ ಸಂಘ ಉಪ ನಿರ್ದೇಶಕರು ಮಹೇಬೂಬ್ ತರಬೇತಿ ನೀಡಿದರು. ಸಂದರ್ಭದಲ್ಲಿ ಜಿಲ್ಲಾ ಸಹಕಾರಿ ಒಕ್ಕೂಟ ನಿರ್ದೇಶಕರು ಶಶಿಧರ ಪಾಟೀಲ್, ತಾ ಪಂ ಸಹಾಯಕ ನಿರ್ದೇಶಕರು ವೆಂಕಟೇಶ ದೇಸಾಯಿ, ತಾಲೂಕ ಯೋಜನಾಧಿಕಾರಿಗಳು ಮಹಿಬೂಬ ಸಾಬ್ ಉಪಸ್ಥಿತರಿದ್ದರು.

# ಅಲ್ಲಮಪ್ರಭು ಸಂಘ: 15ಕ್ಕೆ ಮಹಾಸಭೆ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಸೆ. 10 : ಇಲ್ಲಿಯ ಉಸ್ಮಾನ್ ಗಂಜ್‌ನ ಬಸವ ಮಂಟಪದಲ್ಲಿ ಇರುವ ಅಲ್ಲಮಪ್ರಭು ಪತ್ತಿನ ಸಹಕಾರ ಸಂಘ ನಿಯಮಿತದ 23ನೇ ವಾರ್ಷಿಕ ಮಹಾಸಭೆ ಸೆ. 15 ರಂದು ಮಧ್ಯಾಹ್ನ 12.30ಕ್ಕೆ ನಡೆಯಲಿದೆ.

ಸಂಘದ ಅಧ್ಯಕ್ಷ ಕುಶಾಲರಾವ್ ಪಾಟೀಲ ಖಾಜಾಪುರ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಘದ ಸದಸ್ಯರು ತಪ್ಪದೆ ಮಹಾಸಭೆಯಲ್ಲಿ ಭಾಗವಹಿಸಬೇಕು ಎಂದು ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶಿವಕುಮಾರ ಸ್ವಾಮಿ ಮನವಿ ಮಾಡಿದ್ದಾರೆ.

# ಮನ್ನಳ್ಳಿ ಗ್ರಾಮ ಪಂಚಾಯತ ನಲ್ಲಿ ಗ್ರಾಮ ಸಭೆ



ಮಲ್ಲಮ್ಮ ನುಡಿ ವಾರ್ತೆ ಬೀದರ. ಸೆ.10 : ಬೀದರ ತಾಲ್ಲೂಕಿನ ಮನ್ನಳ್ಳಿ ಗ್ರಾಮ ಪಂಚಾಯತ ನಲ್ಲಿ 2024–25 ನೇ ಸಾಲಿನ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಹಾಗೂ 15ನೇ ಹಣಕಾಸು ಯೋಜನೆಯ ಸಾಮಾಜಿಕ ಪರಿಶೋಧನೆಯ ಗ್ರಾಮ ಸಭೆಯನ್ನು ಜರುಗಿಸಲಾಯಿತು. ಈ ಸಂಧರ್ಭದಲ್ಲಿ ನೋಡಲ್ ಅಧಿಕಾರಿ ರವರಾದ ಶ್ರೀ ಜಾಕಿರ್ ಹುಸೇನ್ ಸಹಾಯಕ ನಿರ್ದೇಶಕರು ಅಕ್ಷರ ದಾಸೋಹ ಬೀದರ, ಗ್ರಾಮ ಪಂಚಾಯತ ಅಧ್ಯಕ್ಷರು, ಉಪಾಧ್ಯಕ್ಷರು, ಪಂಚ ಗ್ಯಾರಂಟಿ ಯೋಜನೆಯ ತಾಲೂಕಾ ಉಪಾಧ್ಯಕ್ಷರು ಹಾಗೂ ಸದಸ್ಯರಾದ ಶ್ರೀ ರಾಜಕುಮಾರ ಮಡಕಿ, ಎಲ್ಲ ಸದಸ್ಯರು, ಪಂ.ಅ. ಅಧಿಕಾರಿಗಳು, ಗ್ರಾಮ ಪಂಚಾಯತ ಸಿಬ್ಬಂದಿಗಳು, ಮನರೇಗಾ ಕೂಲಿಕಾರ್ಮಿಕರು, ಮೇಟಿಗಳು,ಗ್ರಾಮಸ್ಥರು ಹಾಜರಿದ್ದರು.

## ಪ್ರಜಾಸೌಧ ಕಟ್ಟಡ ಆರಂಭಿಸಲು ಗುರುನಾಥ ವಡ್ಡೆ ಆಗ್ರಹ

ಮಲ್ಲಮ್ಮ ನುಡಿ ವಾರ್ತೆ

ಕಮಲನಗರ :ಸೆ.10: ಕಮಲನಗರ ನೂತನ ತಾಲ್ಲೂಕು ಕೇಂದ್ರದಲ್ಲಿ ಪ್ರಜಾಸೌಧ ತಹಶೀಲ ಕಚೇರಿ ಕಟ್ಟಡ ಕಾಮಗಾರಿ ತಕ್ಷಣ ಆರಂಭಿಸಬೇಕೆಂದು ಸಾಮಾಜಿಕ ಕರ್ಯಕರ್ತ ಗುರುನಾಥ ವಡ್ಡೆ ಆಗ್ರಹಿಸಿದ್ದಾರೆ.

ಪ್ರಜಾಸೌಧ ತಹಶೀಲ ಕಚೇರಿ ಕಟ್ಟಡಕ್ಕೆ ಜ. 13, 2025 ರಂದು ಟೆಂಡರ್ ನೊಟಿಫಿಕೇಶನ್ ಆಗಿದ್ದು, ಈಗಾಗಲೇ ಟೆಂಡರ್ ಪ್ರಕ್ರಿಯೆ ಮುಗಿದು ಗುತ್ತಿಗೆದಾರರಿಗೆ ವಹಿಸಲಾಗಿದೆ. ಆದರೂ ಇಲ್ಲಿಯವರೆಗೆ ತಹಶೀಲ್ ಕಚೇರಿ ಕಟ್ಟಡ ಕಾಮಗಾರಿ ಆರಂಭವಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಯಾವುದೇ ಕಾರಣಕ್ಕೂ ವಿಳಂಬಕ್ಕೆ ಆಸ್ಪದ ಕೊಡದೇ ತಕ್ಷಣ ಜಿಲ್ಲಾಡಳಿತದಿಂದ ನಿಗದಿಪಡಿಸಿದ ಕಮಲನಗರ ಪಟ್ಟಣದಲ್ಲಿಯ ಸರ್ವೆ.ನಂ. 79/*/6 ಖತಗಾಂವ ರಸ್ತೆ ಪಕ್ಕದಲ್ಲಿನ ಸ್ಥಳದಲ್ಲಿ ಪ್ರಜಾಸೌಧ ತಹಶೀಲ ಕಚೇರಿ ಕಟ್ಟಡ ಕಾಮಗಾರಿ ಪ್ರಾರಂಭಿಸಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ಕುರಿತು ಜಿಲ್ಲಾಧಿಕಾರಿಗಳಿಗೆ ಸೋಮವಾರ ಮನವಿ ಪತ್ರ ಸಲ್ಲಿಸಿರುವುದಾಗಿ ತಿಳಿಸಿದ್ದಾರೆ.

# ಸ್ನಾತಕೋತ್ತರ ಕೋರ್ಸುಗಳ ಪ್ರಥಮ ಸೆಮಿಸ್ಟರ್ ಪ್ರವೇಶಕ್ಕೆ ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಕಲಬುರಗಿ: ಸೆ.10:ಸರ್ಕಾರಿ ಮಹಾವಿದ್ಯಾಲಯ(ಸ್ವಾಯತ್ತ)ದಲ್ಲಿ ನಡೆಸಲಾಗುತ್ತಿರುವ ಕಲಾ, ವಾಣಿಜ್ಯ, ಸಮಾಜವಿಜ್ಞಾನ ಮತ್ತು ವಿಜ್ಞಾನ ನಿಕಾಯಗಳ ವಿವಿಧ ಸ್ನಾತಕೋತ್ತರ ಕೋರ್ಸುಗಳ ಪ್ರಥಮ ಸೆಮಿಸ್ಟರ್ ಪ್ರವೇಶಕ್ಕೆ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕವನ್ನು ದಿನಾಂಕ: 2509–2025 ರವರೆಗೆ ವಿಸ್ತರಿಸಲಾಗಿದ್ದು, ಭರ್ತಿ ಮಾಡಿದ ಅರ್ಜಿಗಳನ್ನು ಸೂಕ್ತ ದಾಖಲೆಗಳೊಂದಿಗೆ ಕಾಲೇಜಿನ ಕಛೇರಿಗೆ ಸಲ್ಲಿಸುವ ಅಂತಿಮ ದಿನಾಂಕ: 30–09–2025ರವರೆಗೆ ಇರುತ್ತದೆ. ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಕಾಲೇಜಿನ ವೆಬ್ ಸೈಟ ïwwwgcak.ac.inಗೆ ಭೇಟಿ ನೀಡಲು ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಸವಿತಾ ತಿವಾರಿ ಅವರು ತಿಳಿಸಿದ್ದಾರೆ.

# ವದಂತಿಗಳಿಗೆ ಕಿವಿಗೊಡದೆ, ಸತ್ಯ ಮಾಹಿತಿ ಕೊಡಿ: ಪ್ರೊ.ಬಿ.ಕೆ.ರವಿ




ಮಲ್ಲಮ್ಮ ನುಡಿವಾರ್ತೆ

ಕೊಪ್ಪಳ:ಸೆ.10:ರಾಜ್ಯದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ಕಾರ್ಯ ನಡೆಯುತ್ತಿದ್ದು, ಈ ಬಗ್ಗೆ ಜಾಗೃತಿ ಅಗತ್ಯವಾಗಿದೆ. ಸಮೀಕ್ಷಾದಾರರು ಮನೆಮನೆಗೆ ಬಂದು ಮಾಹಿತಿ ಪಡೆಯುವಾಗ ಸತ್ಯಾಂಶಗಳನ್ನು ಕೊಡಿ, ವದಂತಿಗಳಿಗೆ ಕಿವಿಗೊಡಬೇಡಿ ಎಂದು ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಕೆ.ರವಿ ಕರೆ ನೀಡಿದರು. ರಾಜ್ಯದ್ಯಂತ ಸೆಪ್ಟೆಂಬರ್ 22 ರಿಂದ ಅಕ್ಟೋಬರ್ 7ರವರೆಗೆ ನಡೆಯುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕುರಿತ ಜಾಗೃತಿ ಅಭಿಯಾನದ ಉದ್ಘಾಟನೆಯನ್ನು ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನೆರವೇರಿಸಿ ಮಾತನಾಡಿದ ಅವರು, ಸಮೀಕ್ಷೆಗಳ ಬಗ್ಗೆ ಇಲ್ಲ ಸಲ್ಲದ, ಸುಳ್ಳು ಮಾಹಿತಿ, ವದಂತಿಗಳನ್ನು ನಂಬಬೇಡಿ. ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗೆ ಸಂಬಂಧಿಸಿದಂತೆ ಸತ್ಯವಾದ ಮಾಹಿತಿ ಕೊಡುವ ಮೂಲಕ ಸರಕಾರದ ಉದ್ದೇಶ ಸಾರ್ಥಕಗೊಳಿಸುವ ಹೊಣೆ ಎಲ್ಲರದ್ದು ಎಂದರು. 1931ರ ನಂತರ ದೇಶದಲ್ಲಿ ವೈಜ್ಞಾನಿಕ ಸಮೀಕ್ಷೆ ಇದುವರೆಗೆ ಆಗಿಲ್ಲ. ಸತ್ಯಾಸತ್ಯತೆ, ವಿವಿಧ ಸಮುದಾಯಗಳ ನೈಜ ಸ್ಥಿತಿ ಅರಿಯಲು ಈ ಸಮೀಕ್ಷಾ ಕಾರ್ಯ ಸಹಾಯಕವಾಗಲಿದೆ. ಪ್ರತಿ ಹತ್ತು ವರ್ಷಗಳಿಗೊಮ್ಮೆ ಈ ರೀತಿಯ ಸಮೀಕ್ಷೆಗಳು ನಡೆದರೆ ಸಮುದಾಯಗಳ ವಸ್ತುಸ್ಥಿತಿ, ವಾಸ್ತವ ಸಂಗತಿ ನಿಖರವಾಗಿ ದೊರಕಬಲ್ಲದು ಎಂದು ಅವರು ಅಭಿಪ್ರಾಯಪಟ್ಟರು.

ಎಲ್ಲ ಸಮುದಾಯಗಳಿಗೂ ಅವಕಾಶ ಕಲ್ಪಿಸಲು ಇದು ಅನುಕೂಲವಾಗುತ್ತದೆ. ಮೀಸಲಾತಿ ರೂಪಿಸಲು ಇದೊಂದು ಉತ್ತಮ ನಡೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕನಸಿನ ಕೂಸಿದು. ಎಲ್ಲ ಮನೆಗಳ ಮಾಹಿತಿ ದಾಖಲಾಗಬೇಕು. ಗಣತಿದಾರರು ಮಾಹಿತಿ ಸಂಗ್ರಹಕ್ಕೆ ಮನೆಗೆ ಬಂದಾಗ ಸಾಮಾಜಿಕ ಜವಾಬ್ದಾರಿ ಅರಿತು ಸ್ಪಂದಿಸಬೇಕು ಎಂದು ಅವರು ವಿವರಿಸಿದರು.

ಗ್ರಂಥಪಾಲಕ ಪ್ರಕಾಶಗೌಡ ಎಸ್.ಯು. ಪ್ರಾಸ್ತಾವಿಕ ಮಾತನಾಡಿದರು. ಚೂಡಾಮಣಿ ಸ್ವಾಗತಿಸಿದರು. ಗೌರಿ ಪ್ರಾರ್ಥಿಸಿದರು. ಕಾಲೇಜಿನ ಪ್ರಾಚಾರ್ಯ ಪ್ರೊ.ವೈ.ಬಿ.ಅಂಗಡಿ ಅಧ್ಯಕ್ಷತೆ ವಹಿಸಿದ್ದರು. ಆಂತರಿಕ ಗುಣಮಟ್ಟ ಭರವಸೆ ಕೋಶದ ಸಂಯೋಜಕರಾದ ಡಾ.ಟಿ.ವಿ.ವಾರುಣಿ, ಎನ್ ಎಸ್ ಎಸ್ ಸಂಚಾಲಕ ಬಸವರಾಜ ಪಟ್ಟಣಶೆಟ್ಟಿ, ಕೊಪ್ಪಳ ವಿವಿ ಆಡಳಿತಾಧಿಕಾರಿ ಪ್ರೊ.ತಿಮ್ಮಾರಡ್ಡಿ ಮೇಟಿ ವೇದಿಕೆಯಲ್ಲಿದ್ದರು. ಯಮನೂರಪ್ಪ ನಿರೂಪಿಸಿದರು. ಈ ವೇಳೆ ಬೋಧಕ ಸಿಬ್ಬಂದಿ ಸುಧಾ ಹೆಗಡೆ, ಉಮೇಶ ಅಂಗಡಿ ಸೇರಿದಂತೆ ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು.

## ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರಿಂದ ವಿವಿಧ ಕಾರ್ಯಕ್ರಮ

ರಾಯಚೂರು ಸೆ10: ರಾಯಚೂರು ಜಿಲ್ಲೆಯಲ್ಲಿ ಪ್ರವಾಸದಲ್ಲಿರುವ ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರಾದ ಯು.ನಿಸಾರ್ ಅಹಮದ್ ಅವರು ಸೆಪ್ಟೆಂಬರ್ 11ರಂದು ಬೆಳಗ್ಗೆ 10 ಗಂಟೆಗೆ ರಾಯಚೂರ ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ವಸತಿ ನಿಲಯಗಳು, ಸರ್ಕಾರಿ ಉರ್ದು ಶಾಲೆಗಳಿಗೆ ಭೇಟಿ, ಕಾಲೊನಿ ಅಭಿವೃದ್ಧಿ ಮತ್ತು ಇತರೆ ಕಾಮಗಾರಿಗಳ ಪರಿಶೀಲನೆ ನಡೆಸುವರು. ಮಧ್ಯಾಹ್ನ 3.30ಕ್ಕೆ ರಾಯಚೂರು ಜಿಲ್ಲಾ ಪಂಚಾಯತ್ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ ಅಲ್ಪಸಂಖ್ಯಾತರ ಮುಸ್ಲಿಂ, ಕ್ರೈಸ್ತ್, ಜೈನ್, ಬೌದ್ಧರು, ಸಿಖ್ ಮತ್ತು ಪಾರ್ಸಿ ಸಮುದಾಯದ ಮುಖಂಡರೊಂದಿಗೆ ಸಮಾಲೋಚನೆ ಮತ್ತು ಕುಂದು–ಕೊರತೆ ಅರ್ಜಿ ಸ್ವೀಕರಿಸಿ ರಾಯಚೂರಿನ ಪ್ರವಾಸಿ ಮಂದಿರದಲ್ಲಿ ವಾಸ್ತವ್ಯ ಮಾಡುವರು.

# ಜಗತ್ತಿನ ಚುಕ್ಕಾಣಿ ಹಿಡಿಯಬೇಕಾದರೆ ಜ್ಞಾನದ ಸಂಪತ್ತಿನ ಅವಶ್ಯಕತೆ ಇದೆ :ಸಚಿವ ಪ್ರಿಯಾಂಕ್ ಖರ್ಗೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಸೆ.10 : ಜ್ಞಾನಕ್ಕೆ ಆಗ್ರಸ್ಥಾನ ನೀಡಬೇಕೆಂದರೆ ಹಾಗೂ ಜಗತ್ತಿನ ಚುಕ್ಕಾಣಿ ಹಿಡಿಯಬೇಕಾದರೆ ಜ್ಞಾನದ ಸಂಪತ್ತು ಹೊಂದುವ ಅನಿವಾರ್ಯತೆ ಇದೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಐಟಿ ಬಿಟಿ ಹಾಗೂ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಹೇಳಿದ್ದಾರೆ.



2024–25 ಮತ್ತು 2025–26 ಸಾಲಿನ ಕೆ.ಕೆ.ಆರ್.ಡಿಬಿ ಮ್ಯಾಕ್ರೋ ಯೋಜನೆಯಡಿಯಲ್ಲಿ ನವೀಕರಣಗೊಂಡ ಎಸ್ ಎಂ ಪಂಡಿತ್ ರಂಗಮಂದಿರ ಉದ್ಘಾಟನೆ ನೆರವೇರಿಸಿ ಹಾಗೂ ಶಿಕ್ಷಕರ ದಿನಾಚರಣೆ ನೆರವೇರಿಸಿ ಅವರು ಮಾತನಾಡುತ್ತಿದ್ದರು.

ಜ್ಞಾನ ಹಾಗೂ ಕೌಶಲ್ಯದ ರಾಜಧಾನಿಯಾಗಿ ರಾಜ್ಯ ಮುನ್ನುಗ್ಗುತ್ತಿದೆ. ವಿದೇಶಗಳಿಗೆ ಭೇಟಿ ನೀಡಿದಾಗ ನಮ್ಮ ರಾಜ್ಯದ ಕೌಶಲ್ಯ ಅಭಿವೃದ್ಧಿಯ ಬಗ್ಗೆ ಮಾತನಾಡುತ್ತಾರೆ. ಇದು ಹೆಮ್ಮೆಯ ಸಂಗತಿಯಾಗಿದೆ. ಬಂಡವಾಳ ಆಕರ್ಷಣೆಗೆ ಕೇವಲ ಆರ್ಥಿಕ ನೀತಿಗಳಲ್ಲ ಶಿಕ್ಷಣ ಹಾಗೂ ಜ್ಞಾನಕ್ಕೆ ಅಗ್ರಸ್ಥಾನ ನೀಡಬೇಕು ಎನ್ನುವುದು ಇದರಿಂದ ಸಾಬೀತಾಗುತ್ತದೆ. ಅದು ಶಿಕ್ಷಕರಿಂದ ಮಾತ್ರ ಸಾಧ್ಯ. ಶಿಕ್ಷಕರಿಲ್ಲದೇ ಸಮಾಜವಿಲ್ಲ ಹಾಗೂ ದೇಶವಿಲ್ಲ ಎಂದರು.

ಪ್ರಗತಿಪರ ಸಮಾಜ ಕಟ್ಟಬೇಕಾದರೆ ವೈಜ್ಞಾನಿಕ ಮನೋಭಾವನೆ ಬೆಳೆಸಬೇಕು ಇದರ ಜೊತೆಗೆ ಕುತೂಹಲ ಬೆಳೆಸುವುದು ಕೂಡಾ ಬಹಳ ಮುಖ್ಯವಾಗಿದೆ. ವಿದ್ಯಾರ್ಥಿಗಳು ಪ್ರಶ್ನೆ ಕೇಳುವಂತೆ ಅವರನ್ನು ಪ್ರೇರೇಪಿಸಬೇಕು ಎಂದು ಕರೆ ನೀಡಿದ ಸಚಿವರು ಪುರಾಣಗಳು ಸಾಂಸ್ಕೃತಿಕ ಗುರುತಿನ ಪ್ರತೀಕಗಳಾಗಿವೆ. ಆಧ್ಯಾತ್ಮಿಕ ಹಾಗೂ ನೈತಿಕ ಮೌಲ್ಯಗಳ ಬೆಳವಣಿಗೆಗೆ ಪುರಾಣಗಳು ಬೇಕು. ಆದರೆ, ಪುರಾಣಗಳನ್ನು ಇತಿಹಾಸಗಳೆಂದು ಹಾಗೂ ವಿಜ್ಞಾನವೆಂದು ತಪ್ಪಾಗಿ ಅರ್ಥೈಸಲಾಗುತ್ತಿದೆ. ಬದಲಿಗೆ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವನೆ ಬೆಳೆಸಬೇಕು ಎಂದು ಅಭಿಪ್ರಾಯಪಟ್ಟರು.

ಪ್ರಬುದ್ಧ ಸಮಾಜ ನಿರ್ಮಾಣ ಮಾಡುವಲ್ಲಿ ಶಿಕ್ಷಕರ ಪಾತ್ರ ಹಿರಿದಾಗಿದೆ ಎಂದು ಅಭಿಪ್ರಾಯಪಟ್ಟ ಸಚಿವರು ಬುದ್ಧ, ಬಸವ ಹಾಗೂ ಅಂಬೇಡ್ಕರ್ ಅವರು ಕೂಡಾ ಪ್ರಬುದ್ಧ ಸಮಾಜ ನಿರ್ಮಾಣಕ್ಕೆ ಒತ್ತು ನೀಡಿದ್ದರು ಇದನ್ನು ಶಿಕ್ಷಕರು ಮನಗಾಣಬೇಕು ಎಂದರು.

ಜಿಲ್ಲೆಯ ಶೈಕ್ಷಣಿಕ ಪ್ರಗತಿಗೆ ಅಗತ್ಯವಿರುವ ಕಾರ್ಯಕ್ರಮಗಳಿದ್ದರೂ ಕೂಡಾ ಪರೀಕ್ಷಾ ಫಲಿತಾಂಶದ ಶೇಕಡಾವರು ಪ್ರಗತಿ ಕಂಡುಬರುತ್ತಿಲ್ಲ ಎಂದು ಸಚಿವರು ಈ ಬಾರಿಯ ಎಸ್ ಎಸ್ ಎಲ್ ಸಿ ಯ ಪರೀಕ್ಷೆಯ ಫಲಿತಾಂಶ ನಿರಾಶೆದಾಯಕವಾಗಿತ್ತು. ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ಶಿಕ್ಷಕರು ಈ ನಿಟ್ಟಿನಲ್ಲಿ ಅಗತ್ಯಶ್ರಮವಹಿಸಿ ಮುಂಬರುವ ಪರೀಕ್ಷೆಗಳಲ್ಲಿ ಫಲಿತಾಂಶದ ಗಣನೀಯ ಹೆಚ್ಚಳಕ್ಕೆ ಪ್ರಯತ್ನಿಸಬೇಕು ಎಂದು ಶಿಕ್ಷಕರಿಗೆ ಕರೆ ನೀಡಿದರು.

2024–25. ಸಾಲಿನಲ್ಲಿ ಎಸ್ ಎಸ್ ಎಲ್ ಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಸರ್ಕಾರ ಶಾಲೆಯ ಮೂವರು ವಿದ್ಯಾರ್ಥಿಗಳಾದ ನೀಲಮ್ಮ ತಂದೆ ವೀರಣ್ಣ ಪ್ರಥಮ ಸ್ಥಾನ, ಶಿವಕುಮಾರ ತಂದೆ ವಿಶ್ವನಾಥ ಮಾಲಿ ಪಾಟೀಲ, ಹಾಗೂ ಸಂಪತ್ ಕುಮಾರ್ ತಂದೆ ಅಶೋಕ ಕಲಶೆಟ್ಟಿ, ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಲಾಯಿತು,

ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪಡೆದ ಪ್ರಾಥಮಿಕ ವಿಭಾಗದ 16 ಜನ ಹಾಗೂ ಪ್ರೌಢವಿಭಾಗದ 7 ಜನ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.:

ಕಾರ್ಯಕ್ರಮದಲ್ಲಿ ಡಾ. ಸರ್ವಪಲ್ಲಿ ರಾಧಾಕೃಷ್ಣನರವರ ಜನ್ಮ ದಿನಾಚರಣೆ ಅಂಗವಾಗಿ 2025ನೇ ಸಾಲಿನ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಪಡೆದ ಪ್ರಾಥಮಿಕ ವಿಭಾಗದ 16 ಜನ ಹಾಗೂ ಪ್ರೌಢಶಾಲಾ ವಿಭಾಗದ 7 ಜನ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರಶಸ್ತಿ ಪ್ರದಾನ ಮಾಡಲಾದ ಶಿಕ್ಷಕರ ವಿವರ ಇಂತಿದೆ.

ಪ್ರಾಥಮಿಕ ವಿಭಾಗ: ಆಳಂದ ತಾಲೂಕಿನ ಬಿಲಗುಂದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ಸಂಗೀತಾ ಹಟ್ಟಿ, ಸೇಡಂ ತಾಲೂಕಿನ ಚಂದಾಪೂರ ಉರ್ದು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ ಜಾಫರ್ ಅಲಿ. ಚಿಂಚೋಳಿ ತಾಲೂಕಿನ ಜಿಲವರ್ಷಾ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ ಲಿಂಗಪ್ಪ ಮತ್ತು ಶಿವರಾಂಪೂರ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ ನಾಗೇಶ, ಕಲಬುರಗಿ ಉತ್ತರ ತಾಲೂಕಿನ ಕಾಗಿಕಾರಖಾನಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ ಸಂಗಮೇಶ್ವರ ವ್ಹಿ ಸ್ವಾಮಿ.

ಕಲಬುರಗಿ ದಕ್ಷಿಣ ತಾಲೂಕಿನ ಸಾವಳಗಿ(ಬಿ) ಸರಕಾರಿ ಮಾದರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ ಮಧುಕುಮಾರ ಕೆ.ಜಿ., ಜೋಗೂರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಸಹ ಶಿಕ್ಷಕಿ ಅನುಸೂಯಾಬಾಯಿ ಎಸ್. ನಾಗನಹಳ್ಳಿ ಮತ್ತು ಕೊಳ್ಳೂರು ಸರಕಾರಿ ಮಾದರಿಯ ಪ್ರಾಥಮಿಕ ಶಾಲೆ ಸಹ ಶಿಕ್ಷಕಿ ಶಶಿಕಲಾ ನರೋಣಕರ.

ಅಫಜಲಪೂರ ತಾಲೂಕಿನ ಬೈರಾಮಡಗಿ ಸರಕಾರಿ ಮಾದರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ ಅಶೋಕ ಸಿತಾಳೆ ಮತ್ತು ಬಂಕಲಗಾ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ರೇಷ್ಮಾ ವಿಶ್ವನಾಥ ಗೋಪಗೊಂಡ ಹಾಗೂ ಚಿತ್ತಾಪುರ ತಾಲೂಕಿನ ಇಂಗಳಗಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ಸರಸ್ವತಿ, ಹೊಸ ಹೆಬ್ಬಾಳ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ತಾಯಮ್ಮ ಮತ್ತು ಹೊಸೂರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಸಹ ಶಿಕ್ಷಕ ಹಾಜಿ ಸಾಬ.

ಜೇವರ್ಗಿ ತಾಲೂಕಿನ ಜಂಬೇರಾಳ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ ಮಲ್ಲಿಕಾರ್ಜುನ ಚಂದ್ರಾಮಪ್ಪ ಮತ್ತು ಯಡ್ರಾಮಿ ಸರಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ ನೂರಮಹ್ಮದ ಬಡೇಘರ ಮತ್ತು ಹರವಾಳ ಇಂದಿರಾನಗರ ತಾಂಡಾದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಸಹ ಶಿಕ್ಷಕಿ ಕವಿತಾ.

ಪ್ರೌಢ ವಿಭಾಗ: ಆಳಂದ ತಾಲೂಕಿನ ಶ್ರೀ ದಿಗಂಬರ ಜೈನ ಪ್ರೌಢಶಾಲೆಯ ಸಹ ಶಿಕ್ಷಕಿ ವೈಶಾಲಿ ತಂ/ಶ.ಹಿಪ್ಪರ್ಗಿ. ಸೇಡಂ ತಾಲೂಕಿನ ಮೋತಕಪಲ್ಲಿ ಸರಕಾರಿ ಪ್ರೌಢ ಶಾಲೆಯ ಸಹ ಶಿಕ್ಷಕ ಬಷಿರ ಅಹ್ಮದ್, ಚಿಂಚೋಳಿ ತಾಲೂಕಿನ ದೇಗಲ್ಮಡಿ ಸರಕಾರಿ ಪ್ರೌಢ ಶಾಲೆಯ ಸಹ ಶಿಕ್ಷಕಿ ಕನ್ಯಾಕುಮಾರಿ. ಕಲಬುರಗಿ (ದ.ವ) ತಾಲೂಕಿನ ಫರಹತಾಬಾದ ಸರಕಾರಿ ಉರ್ದು ಪ್ರೌಢ ಶಾಲೆಯ ಸಹ ಶಿಕ್ಷಕಿ ಫರ್ಹಾನಾ ನಸ್ರೀಮ, ಚಿತ್ತಾಪೂರ ತಾಲೂಕಿನ ನಾಲವಾರ ಸರಕಾರಿ ಉರ್ದು ಪ್ರೌಢ ಶಾಲೆಯ ಸಹ ಶಿಕ್ಷಕ ಎಜಾಜ್ ಅಹ್ಮದ ನರಗುಂದ, ಜೇವರ್ಗಿ ತಾಲೂಕಿನ ಬಿರಾಳ(ಬಿ) ಸರಕಾರಿ ಪ್ರೌಢ ಶಾಲೆಯ ಸಹ ಶಿಕ್ಷಕ ಸುಬ್ಬರಾಯಪ್ಪ ಜಿ.ಎನ್. ಮತ್ತು ಕೂಡಿ ದರ್ಗಾ ಸರಕಾರಿ ಪ್ರೌಢ ಶಾಲೆಯ ದೈಹಿಕ ಶಿಕ್ಷಕಿ ಕಸ್ತೂರಿಬಾಯಿ.

ವಿಧಾನ ಪರಿಷತ್ತಿನ ಸದಸ್ಯರಾದ ಶಶೀಲ್ ಜಿ ನಮೋಶಿ ಮಾತನಾಡಿ ದೇಶದ ಮೊದಲ ಶಿಕ್ಷಕಿ ಸಾವಿತ್ರಿಬಾಯಿ ಪುಲೆ, ರಾಜ್ಯದಲ್ಲಿ 60% ಮಹಿಳಾ ಶಿಕ್ಷಕಿಯರಿದ್ದಾರೆ, ತಾಯಿ ಮೊದಲ ಗುರುವಾದರೆ ಶಿಕ್ಷಕಿ ಎರಡನೆ ಗುರು ಆಗಿರುತ್ತಾರೆ ಎಂದು ಹೇಳಿದರು.

ರಂಗ ಮಂದಿರವನ್ನು ಆಡಿಟೋ–ರಿಯಂ ನಾಲ್ಕು ಕೋಟಿ ರೂ ವೆಚ್ಚದಲ್ಲಿ ನವೀಕರಣ ಮಾಡಿ ಸುಸಜ್ಜಿತ ಮೂಲ ಸೌಕರ್ಯಗಳನ್ನು ಕಲ್ಪಿಸುವುದರ ಮುಖಾಂತರ ಅಭಿವೃದ್ಧಿ ಕೆಲಸಗಳಲ್ಲಿ ಯಾವುದೇ ರೀತಿಯಾ ರಾಜಕೀಯ ಮಾಡದೆ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಎಲ್ಲಾ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಪರಸ್ಪರ ಸಹಕಾರದಿಂದ ಕಾರ್ಯಾ ನಿರ್ವಹಿಸುತ್ತಿದ್ದು, ನಮ್ಮ ದೇಶದಲ್ಲಿ ಹೆಚ್ಚಿನ ಗೌರಯುತವಾದ ಸ್ಥಾನಮಾನ ನೀಡಲಾಗಿದೆ.

ತಂದೆ ತಾಯಿಯೆ ಮೊದಲ ಗುರುಗಳು ನಂತರ ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸಲು ಶಿಕ್ಷಕರು ಪ್ರಾಮಾಣಿಕತೆಯಿಂದ ಶ್ರಮವಹಿಸಿ ಕಾರ್ಯನಿರ್ವಹಿಸುತ್ತಿದ್ದಾರೆ, ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಇಲಾಖೆಯ ಒಂದು ಅಂಗವಾಗಿ ಪಿಡಿಎ ಇಂಜಿನೀಯರಿಂಗ್ ಕಾಲೇಜಿನ ಆವರಣದಲ್ಲಿ ಇನ್ ಕ್ಯೂಬೇಷನ್ ಸೇಂಟರ ಸ್ಥಾಪನೆ ಮಾಡಲು ಸಚಿವರೊಂದಿಗೆ ಈಗಾಗಲೆ ಚರ್ಚಿಸಲಾಗಿದ್ದು, ಸರ್ಕಾರದಿಂದ 50% ಮತ್ತು ಸಂಸ್ಥೆಯಿಂದ 50% ಹಣದಲ್ಲಿ ಇನ್ ಕ್ಯೂಬೇಷನ್ ಸೇಂಟರ ಸ್ಥಾಪಿಸಲಾಗುವುದು ಎಂದು ಹೇಳಿದರು

ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಸೂರ್ಯಕಾಂತ ಮದಾನೆ, ಪ್ರಾಸ್ತವಿಕವಾಗಿ ಮಾತನಾಡಿದರು.

ಕನ್ನಡ ಮತ್ತು ಸಂಸ್ಕೃತಿಯ ಇಲಾಖೆಯ ಉಪನಿರ್ದೇಶಕಿ ಜಗದೀಶ್ವರಿ ನಾಶಿ ಸ್ವಾಗತಿಸಿದರು.

ರಂಗಮಂದಿರ ನವೀಕರಣಕ್ಕಾಗಿ ಕೆಕೆಆರ್ ಡಿಬಿ ಯಿಂದ ರೂ 4.80 ಕೋಟಿ ಅನುದಾನ ಬಿಡುಗಡೆ.

ಉನ್ನತಗುಣಮಟ್ಟದ ಆಸನ, ಸೌಂಡ್ ಸಿಸ್ಟಂ, ಬಗೆಬಗೆ ಬಣ್ಣದ ಲೈಟಿಂಗ್ ಅಳವಡಿಕೆ, ಪ್ರೇಕ್ಷಕರಿಗೆ ಕುಡಿಯುವ ನೀರು ಸೇರಿದಂತೆ ಮೂಲಭೂತ ಸೌಲಭ್ಯ, ನೆಲಮಹಡಿಯಲ್ಲಿ 552 ಆಸನಗಳನ್ನು ಹಾಗೂ ಮೊದಲ ಮಹಡಿಯಲ್ಲಿ 303 ಆಸನಗಳನ್ನು ಸೇರಿಸಿ ಒಟ್ಟು 855 ಆಸನಗಳನ್ನು ಹೊಂದಿದೆ. ನೂತನ ಮಾದರಿಯ ಪುಷ್ ಬ್ಯಾಕ್ ( ಹಿಂದಕ್ಕೆ ತಳ್ಳುವ ) ಉತ್ತಮ ಗುಣಮಟ್ಟದ ಆಸನಗಳನ್ನು ಅಳವಡಿಸಲಾಗಿದೆ.

ವೇದಿಕೆಯ ಮೇಲೆ ಮಹಾನಗರ ಪಾಲಿಕೆಯ ಪೂಜ್ಯ ಮಹಾಪೌರರಾದ ಶ್ರೀಮತಿ ವರ್ಷ ರಾಜೀವ ಜಾನೆ, ಶಾಸಕರಾದ ಬಿ.ಜಿ. ಪಾಟೀಲ, ಬೆಂಗಳೂರು ಕರ್ನಾಟಕ ಕುರಿತು ಮತ್ತು ಉಣ್ಣೆ ಅಭಿವೃದ್ಧಿ ನಿಗಮ ಬೆಂಗಳೂರು ದೇವೇಂದ್ರಪ್ಪ ಮರತೂತರ, ಅಚ್ಚುಕಟ್ಟು ಪ್ರದೇಶದ ಅಭಿವೃದ್ಧಿ ಪ್ರಾಧಿಕಾರಿದ ಅಬ್ದುಲ್ ರಶೀದ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಜಹರ್ ಆಲ ಖಾನೆನ ಮಹಾನಗರ ಪಾಲಿಕೆ ಮಹಾಪೌರ ವರ್ಷಾ ರಾಜೀವ್ ಜಾನೆ, ಕುಡಾ ಅಧ್ಯಕ್ಷ ಮಜರ್ ಆಲಂಖಾನ್, ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್, ಪೊಲೀಸ್ ಕಮೀಷನರ್ ಡಾ. ಶರಣಪ್ಪ ಎಸ್.ಡಿ. ಕೆಕೆಆರ್ ಟಿಸಿ ಎಂಡಿ ಬಿ.ಸುಶೀಲಾ, ಕೆಕೆಆರ್‌ಡಿಬಿ ಕಾರ್ಯದರ್ಶಿ ನಲಿನ್ ಅತುಲ್, ಎಸ್ ಪಿ ಅಡ್ಡೂರು ಶ್ರೀನಿವಾಸಲು, ಪಾಲಿಕೆ ಆಯುಕ್ತ ಅವಿನಾಶ್ ಶಿಂಧೆ, ಸೇರಿದಂತೆ ಡಯಟ್, ಉಪನಿರ್ದೇಶಕರು ಬಸವರಾಜ ಎಂ.ಶೆಟ್ಟಿ, ಪದವಿ ಪೂರ್ವ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಸುರೇಶ ಅಕ್ಕಣ್ಣ, ಶಿಕ್ಷಣಾಧಿಕಾರಿ ಶಂಕ್ರಮ ಬೀ ಡವಳಗಿ, ಸೇರಿದಂತೆ ಹಾಗೂ ಕರ್ನಾಟಕ ರಾಜ್ಯ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಬಸವರಾಜ ಬಳೂಂಡಗಿ, ಪ್ರೌಢ ಶಾಲಾ ಶಿಕ್ಷಕರ ಸಂಘದ ಸಹ ಶಿಕ್ಷಕರಾದ ಮಹೇಶ ಹೂಗಾರ ಸಂಘಾದ ಪಧಾಧಿಕಾರಿಗಳು ಮತ್ತಿತರಿದ್ದರು.

# ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜನಲ್ಲಿ ಶಿಕ್ಷಕರ ದಿನಾಚರಣೆ

ಕಲಬುರಗಿ:ಸೆ.10:ನಗರದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿಯಲ್ಲಿ ಶಿಕ್ಷಕರ ದಿನಾಚರಣೆಯನ್ನು ಬಿಎ ಅಂತಿಮ ವರ್ಷದ ವಿದ್ಯಾರ್ಥಿಗಳು ಆಚರಿಸಿದರು.



ಸಮಾರಂಭದ ಅಧ್ಯಕ್ಷತೆ ವಹಿಸಿಕೊಂಡ ಪ್ರಾಂಶುಪಾಲರಾದ ಡಾ. ಮೊರಗೆ ಪ್ರಕಾಶ್ ರವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಗುರು ಮತ್ತು ಶಿಷ್ಯರ ಸಂಬಂಧ ಶಿಕ್ಷಣದ ಮಹತ್ವವನ್ನು ಕುರಿತು ಮತ್ತು ಡಾ. ರಾಧಾಕೃಷ್ಣನ್ ಅವರ ಸಾಧನೆ ಮತ್ತು ಶಿಕ್ಷಣಕ್ಕೆ ಅವರು ಕೊಟ್ಟಂತಹ ಕೊಡುಗೆ ಶಿಕ್ಷಣದ ಮಹತ್ವ ವಿದ್ಯಾರ್ಥಿಗಳಿಗೆ ತಿಳಿಸಿ ಹೇಳಿದರು.

ವೇದಿಕೆ ಮೇಲೆ ಉಪಸ್ಥಿತ ಇದ್ದಂತಹ ಹಿಂದಿ ವಿಭಾಗದ ಮುಖ್ಯಸ್ಥರಾದ ಡಾ. ರಾಮಲಿಂಗ ಭೋಸ್ಲೆ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಗುರು ಶಿಷ್ಯರ ಪರಂಪರೆಯನ್ನು ಮಹತ್ವವನ್ನು ಕುರಿತು ಹೇಳಿದರು.

ಡಾ. ಪದ್ಮಣ್ಣ ರಾಸಣಿಗಿ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ವಿದ್ಯಾರ್ಥಿಗಳು ಸರಿಯಾಗಿ ಓದಬೇಕು ಮತ್ತು ಪರೀಕ್ಷೆಯನ್ನು ಉತ್ತಮವಾಗಿ ಬರೆದು ಅಂಕಗಳನ್ನು ಗಳಿಸಿ ಮುಂದೆ ಉನ್ನತ ಹುದ್ದೆಯನ್ನು ಅಲಂಕರಿಸಬೇಕೆಂದು ಮಾತನಾಡಿದರು.

ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರು ಹಾಗೂ ಸಾಂಸ್ಕೃತಿಕ ಸಂಚಾಲಕರು ಆದಂತಹ ಡಾ. ಜ್ಯೋತಿ ಕೆ .ಎಸ್ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮುಂದಿನ ಭವಿಷ್ಯವನ್ನು ಕಟ್ಟಿಕೊಳ್ಳಲು ಈಗಿನ ತಯಾರಿ ಅತಿ ಅವಶ್ಯಕ ಎಂದು ತಿಳಿಸಿದರು. ಡಾ. ಭಾಗ್ಯ ಜ್ಯೋತಿ ಸಹ ಪ್ರಾಧ್ಯಾಪಕರು ಕನ್ನಡ ವಿಭಾಗ ಇವರು ಕೂಡ ಗುರು ಶಿಷ್ಯರ ಪರಂಪರೆಯನ್ನು ಕುರಿತು ಮಹತ್ವವನ್ನು ಕುರಿತು ಹಾಗೂ ಗುರು ಆದವರು ಹೇಗಿದ್ದರು ಈಗಿನ ಒಂದು ಸಂದರ್ಭದಲ್ಲಿ ಗುರು–ಶಿಷ್ಯರು ಹೇಗಿದ್ದಾರೆ ಎನ್ನುವುದನ್ನು ಅನೇಕ ರೀತಿಯ ಗುರು–ಶಿಷ್ಯರನ್ನು ಸ್ಮರಿಸುತ್ತಾ ಪ್ಲೇಟೋ ಅರಿಸ್ಟಾಟಲ್, ದ್ರೋಣಾಚಾರ್ಯ ಅರ್ಜುನ, ಏಕಲವ್ಯ, ಗುರು ಗೋವಿಂದ ಭಟ್ಟರು ಮತ್ತು ಶಿಶುನಾಳ ಶರೀಫ ಹಾಗೂ ಅಲ್ಲಮನ ವಚನವನ್ನು ಕುರಿತು ಮಾತನಾಡಿದರು. ಡಾ. ಸುನಂದ ಅರ್ಥಶಾಸ್ತ್ರದ ಸಹಾಯಕ ಪ್ರಾಧ್ಯಾಪಕರು ಅಚ್ಚುಕಟ್ಟಾಗಿ ಕಾರ್ಯಕ್ರಮವನ್ನು ನೆರವೇರಿಸುವಲ್ಲಿ ವಿದ್ಯಾರ್ಥಿಗಳಿಗೆ ಎಲ್ಲಾ ರೀತಿಯಿಂದ ಮಾರ್ಗದರ್ಶನವನ್ನು ತೋರಿಸಿದರು ಹಾಗೂ ಈ ಕಾರ್ಯಕ್ರಮವನ್ನು ಪೂಜಾ ಸ್ವಾಗತಿಸಿದರು, ವೈಶಾಲಿ ವಂದನಾರ್ಪಣೆ ಮಾಡಿದರೆ ಭೂಮಿಕಾ ನಿರೂಪಣೆಯನ್ನು ಮಾಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ಕಲ್ಯಾಣ ಕರ್ನಾಟಕ ಪ್ರಥಮ ಪತ್ರಕರ್ತರ ಸಮ್ಮೇಳನ ಸೆ.20ರಂದು ಅಧ್ಯಕ್ಷರಾಗಿ ಶಿವರಂಜನ ಸತ್ಯಂಪೇಟೆ




ಕಲಬುರಗಿ: ಸೆ.10:ಪ್ರಜಾ ಸುದ್ದಿ ಕನ್ನಡ ದಿನಪತ್ರಿಕೆಯ 15ನೇ ವರ್ಷದ ಸಂಭ್ರಮ ಪ್ರಯುಕ್ತ ಕಲ್ಯಾಣ ಕರ್ನಾಟಕ ಪ್ರಥಮ ಪತ್ರಕರ್ತರ ಸಮ್ಮೇಳನವನ್ನು ಸೆ.20ರಂದು ಬೆಳಗ್ಗೆ 10.30ಕ್ಕೆ ನಗರದ ಪತ್ರಿಕಾ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪತ್ರಿಕೆಯ ಸಂಪಾದಕ ಶರಣಬಸಪ್ಪ ಸೂಗೂರು ಹೇಳಿದರು.

ಪತ್ರಕರ್ತ, ಸಾಹಿತಿ ಡಾ. ಶಿವರಂಜನ ಸತ್ಯಂಪೇಟೆ ಸಮ್ಮೇಳನಾಧ್ಯಕ್ಷರಾಗಿದ್ದು, ಶಾಸಕ ಬಸವರಾಜ ಮತ್ತಿಮಡು ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದಾರೆ. ಸುಲಫಲ ಮಠದ ಡಾ. ಸಾರಂಗಧರ ದೇಶಿಕೇಂದ್ರ ಸ್ವಾಮೀಜಿ, ಕಡಗಂಚಿ ಮಠದ ಪಂಪಾಪತಿ ದೇವರು ಸಾನ್ನಿಧ್ಯ ವಹಿಸಲಿದ್ದಾರೆ ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಂಸದ ರಾಧಾಕೃಷ್ಣ ದೊಡ್ಡಮನಿ ಸಮ್ಮೇಳನ ಉದ್ಘಾಟಿಸಲಿದ್ದು, ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಆಶಯ ನುಡಿಗಳನ್ನಾಡಲಿದ್ದಾರೆ ಎಂದು ಅವರು ತಿಳಿಸಿದರು. ಮಧ್ಯಾಹ್ನ 3ಕ್ಕೆ ಪತ್ರಕರ್ತ ಬಿ.ವಿ.ಚಕ್ರವರ್ತಿ ನೇತೃತ್ವದ ಗೋಷ್ಠಿಯಲ್ಲಿ ಪತ್ರಕರ್ತ ಪ್ರಭಾಕರ ಜೋಶಿ ಆಶಯ ನುಡಿಗಳನ್ನಾಡಲಿದ್ದಾರೆ. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಬಾಬುರಾವ ಯಡ್ರಾಮಿ ಅಧ್ಯಕ್ಷತೆ ವಹಿಸುವರು. ಜತೆಗೆ ಕವಿಗೋಷ್ಠಿ ನಡೆಯಲಿದೆ. ಸಂಜೆ 4ಕ್ಕೆ ಸಮಾರೋಪ ಸಮಾರಂಭ ಜರುಗಲಿದ್ದು, ವರಜ್ಯೋತಿ ಬಂತೇಜಿ, ಜಯದೇವಿ ಗಾಯಕವಾಡ, ಮಾವಳ್ಳಿ ಶಂಕರ ಪಾಲ್ಗೊಳ್ಳುವರು. ಪತ್ರಕರ್ತರ ಸನ್ಮಾನ ಕೂಡ ನಡೆಯಲಿದೆ ಎಂದರು.

ಸಿದ್ದರಾಮೇಶ್ವರ ಕಣ್ಣಿನ ಆಸ್ಪತ್ರೆ ವತಿಯಿಂದ ಪತ್ರಕರ್ತರ ಕಣ್ಣಿನ ಉಚಿತ ತಪಾಸಣೆ ಮತ್ತು ಔಷಧ ವಿತರಣಾ ಶಿಬಿರ ನಡೆಯಲಿದೆ ಎಂದು ತಿಳಿಸಿದರು. ಸಂಜೀವಕುಮಾರ ಸಂಗನ್, ಮಲ್ಲಿಕಾರ್ಜುನ ಸಂಗೊಳಗಿ ಇದ್ದರು.



**ಸಮ್ಮೇಳನಾಧ್ಯಕ್ಷರ ಪರಿಚಯ:**

ಕಳೆದ 25 ವರ್ಷಗಳಿಂದ ಪತ್ರಿಕಾ ವ್ಯವಸಹಾಯ ಮಾಡುತ್ತಿರುವ ಶಿವರಂಜನ ಸತ್ಯಂಪೇಟೆಯವರು, ಕನ್ನಡ ಎಂ.ಎ., ಎಂ.ಫಿಲ್ ಹಾಗೂ ಪಿಎಚ್.ಡಿ ಪದವಿ ಪಡೆದಿದ್ದಾರೆ. ಪತ್ರಕರ್ತ ಡಾ. ಪಾಟೀಲ ಪುಟ್ಟಪ್ಪನವರ ಕುರಿತು ಎಂ.ಫಿಲ್ ಪದವಿ ಪಡೆದಿರುವ ಇವರು ಒಂದು ಮುಂಜಾವು, ಎಲೆಮರೆಯ ಸಿಹಿ, ವಚನ ಹೃದಯ, ಮುಖಾಮುಖಿ, ಮತ್ತೆ ಕಲ್ಯಾಣ ಹಾಗೆಂದರೇನು? ಸೇರಿದಂತೆ 16ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಉಷಾಕಿರಣ, ಪ್ರಜಾವಾಣಿ, ವಿಜಯವಾಣಿ ಪತ್ರಿಕೆಯಲ್ಲಿ ಹಿರಿಯ ವರದಿಗಾರರಾಗಿ, ದಿ ಡೈಲಿ ನ್ಯೂಸ್ ಪತ್ರಿಕೆಯ ಬ್ಯೂರೊ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿದ್ದಾರೆ. ಕಳೆದ ಎರಡು ವರ್ಷಗಳಿಂದ ಪ್ರಜಾಪ್ರಗತಿ ಪತ್ರಿಕೆಯ ಕಲಬುರಗಿ ಜಿಲ್ಲೆಯ ಹಿರಿಯ ವರದಿಗಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

# ವಸುಧೈವ ಕುಟುಂಬಕಂ ನ ಜ್ವಲಂತ ಉದಾಹರಣೆ ಮೋಹನ್ ಭಾಗವತ್ ಜೀ –ನರೇಂದ್ರ ಮೋದಿ, ಪ್ರಧಾನಮಂತ್ರಿ

ಇಂದು ಸೆಪ್ಟೆಂಬರ್ 11. ಈ ದಿನ ನನಗೆ ಎರಡು ವ್ಯತಿರಿಕ್ತ ನೆನಪುಗಳು ಮರುಕಳಿಸುತ್ತವೆ. ಮೊದಲನೆಯದು, 1893 ರಲ್ಲಿ ಸ್ವಾಮಿ ವಿವೇಕಾನಂದರು ತಮ್ಮ ಐತಿಹಾಸಿಕ ಚಿಕಾಗೋ ಭಾಷಣ ಮಾಡಿದ್ದು."ಅಮೇರಿಕದ ಸಹೋದರಿ ಮತ್ತು ಸಹೋದರರೇ" ಎಂಬ ಕೆಲವೇ ಪದಗಳೊಂದಿಗೆ ಅವರು ಸಭಾಂಗಣದಲ್ಲಿದ್ದ ಸಾವಿರಾರು ಜನರ ಹೃದಯಗಳನ್ನು ಗೆದ್ದರು. ಅವರು ಭಾರತದ ಅನಾದಿ ಆಧ್ಯಾತ್ಮಿಕ ಪರಂಪರೆಯನ್ನು ಮತ್ತು ಜಾಗತಿಕ ಭ್ರಾತೃತ್ವದ ಮಹತ್ವವನ್ನು ವಿಶ್ವ ವೇದಿಕೆಗೆ ಪರಿಚಯಿಸಿದರು. ಎರಡನೆಯ ನೆನಪು ಭಯಾನಕ 9/11 ದಾಳಿಯದ್ದು, ಭಯೋತ್ಪಾದನೆ ಮತ್ತು ಮೂಲಭೂತವಾದದ ಬೆದರಿಕೆಯಿಂದಾಗಿ ವಿವೇಕಾನಂದರ ತತ್ವವು ದಾಳಿಗೆ ಒಳಗಾಯಿತು.

ಈ ದಿನದ ಬಗ್ಗೆ ಇನ್ನೂ ಒಂದು ಗಮನಾರ್ಹ ವಿಷಯವಿದೆ. ವಸುಧೈವ ಕುಟುಂಬಕಂ ತತ್ವದಿಂದ ಪ್ರೇರಿತರಾಗಿ, ತಮ್ಮ ಇಡೀ ಜೀವನವನ್ನು ಸಾಮಾಜಿಕ ಪರಿವರ್ತನೆ ಮತ್ತು ಸಾಮರಸ್ಯ ಮತ್ತು ಸಹೋದರತ್ವದ ಮನೋಭಾವವನ್ನು ಬಲಪಡಿಸಲು ಮುಡಿಪಾಗಿಟ್ಟ ವ್ಯಕ್ತಿತ್ವದ ಜನ್ಮದಿನ ಇಂದು. ರಾಷ್ಟ್ರೀಯ ಸ್ವಯಂಸೇವಕ ಸಂಘದೊಂದಿಗೆ ಸಂಬಂಧ ಹೊಂದಿರುವ ಲಕ್ಷಾಂತರ ಜನರು ಅವರನ್ನು ಗೌರವದಿಂದ ಪೂಜನೀಯ ಸರಸಂಘಚಾಲಕ್ ಎಂದು ಕರೆಯುತ್ತಾರೆ. ಹೌದು, ನಾನು ಶ್ರೀ ಮೋಹನ್ ಭಾಗವತ್ ಜೀ ಅವರ ಬಗ್ಗೆ ಮಾತನಾಡುತ್ತಿದ್ದೇನೆ, ಅವರ 75 ನೇ ಹುಟ್ಟುಹಬ್ಬವು ಕಾಕತಾಳೀಯವಾಗಿ, ರಾಷ್ಟ್ರೀಯ ಸ್ವಯಂಸೇವಕ ಸಂಘವು ತನ್ನ ಶತಮಾನೋತ್ಸವವನ್ನು ಆಚರಿಸುತ್ತಿರುವ ಇದೇ ವರ್ಷದಲ್ಲಿ ಬರುತ್ತದೆ. ನಾನು ಅವರಿಗೆ ನನ್ನ ಶುಭಾಶಯಗಳನ್ನು ಕೋರುತ್ತೇನೆ ಮತ್ತು ಅವರ ಸುದೀರ್ಘ ಮತ್ತು ಆರೋಗ್ಯಕರ ಜೀವನಕ್ಕಾಗಿ ಪ್ರಾರ್ಥಿಸುತ್ತೇನೆ.

ಮೋಹನ್ ಜೀ ಅವರ ಕುಟುಂಬದೊಂದಿಗೆ ನನಗೆ ಗಾಢವಾದ ಬಾಂಧವ್ಯವಿದೆ. ಮೋಹನ್ ಜೀ ಅವರ ತಂದೆ ದಿವಂಗತ ಮಧುಕರ್ ರಾವ್ ಭಾಗವತ್ ಜೀ ಅವರೊಂದಿಗೆ ನಿಕಟವಾಗಿ ಕೆಲಸ ಮಾಡುವ ಸೌಭಾಗ್ಯ ನನಗೆ ದೊರಕಿತು. ನನ್ನ "ಜ್ಯೋತಿಪುಂಜ್" ಪುಸ್ತಕದಲ್ಲಿ ಅವರ ಬಗ್ಗೆ ವಿವರವಾಗಿ ಬರೆದಿದ್ದೇನೆ. ಕಾನೂನು ಜಗತ್ತಿನೊಂದಿಗೆ ಒಡನಾಟದ ಜೊತೆಗೆ, ಅವರು ರಾಷ್ಟ್ರನಿರ್ಮಾಣಕ್ಕೂ ತಮ್ಮನ್ನು ಅರ್ಪಿಸಿಕೊಂಡರು. ಗುಜರಾತಿನಾದ್ಯಂತ ಆರ್ ಎಸ್ ಎಸ್ ಅನ್ನು ಬಲಪಡಿಸುವಲ್ಲಿ ಅವರು ಪ್ರಮುಖ ಪಾತ್ರವಹಿಸಿದರು. ರಾಷ್ಟ್ರ ನಿರ್ಮಾಣದ ಬಗ್ಗೆ ಮಧುಕರ್ ರಾವ್ ಜೀ ಅವರ ಉತ್ಸಾಹ ಎಷ್ಟು ಆಳವಾಗಿತ್ತೆಂದರೆ ಅವರ ಮಗ ಮೋಹನ್ ಜೀ ಅವರನ್ನು ಭಾರತದ ಪುನರುತ್ಥಾನಕ್ಕಾಗಿ ಕೆಲಸ ಮಾಡುವಂತೆ ಪ್ರೇರೇಪಿಸಿತು. ಇದು ಪರಸಮಣಿ ಮಧುಕರ್ ರಾವ್ ಅವರು ಮೋಹನ್ ರಾವ್ ಅವರಲ್ಲಿ ಮತ್ತೊಂದು ಪರಸಮಣಿಯನ್ನು ಸೃಷ್ಟಿಸಿದಂತಿದೆ.

ಮೋಹನ್ ಜೀ 1970 ರ ದಶಕದ ಮಧ್ಯಭಾಗದಲ್ಲಿ ಪ್ರಚಾರಕರಾದರು. 'ಪ್ರಚಾರಕ' ಎಂಬ ಪದವನ್ನು ಕೇಳಿದ ತಕ್ಷಣ, ಅದು ಕೇವಲ ಪ್ರಚಾರ ಮಾಡುವ ಅಥವಾ ವಿಚಾರಗಳನ್ನು ಪ್ರಚುರಪಡಿಸುವ ವ್ಯಕ್ತಿ ಎಂದು ತಪ್ಪು ತಿಳಿಯಬಹುದು. ಆದರೆ, ಆರ್ ಎಸ್ ಎಸ್ ಕಾರ್ಯವೈಖರಿಯ ಬಗ್ಗೆ ತಿಳಿದಿರುವವರಿಗೆ ಪ್ರಚಾರಕ ಪರಂಪರೆಯು ಸಂಘಟನೆ ಕೆಲಸದ ಮೂಲವಾಗಿದೆ ಎಂದು ತಿಳಿದಿದೆ. ಕಳೆದ ನೂರು ವರ್ಷಗಳಲ್ಲಿ, ದೇಶಭಕ್ತಿಯ ಉತ್ಸಾಹದಿಂದ ಪ್ರೇರಿತರಾಗಿ, ಸಾವಿರಾರು



ಯುವಜನರು ತಮ್ಮ ಮನೆ ಮತ್ತು ಕುಟುಂಬಗಳನ್ನು ತೊರೆದು–ಭಾರತ ಮೊದಲು–ಎಂಬ ಧ್ಯೇಯವನ್ನು ನನಸಾಗಿಸಲು ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದಾರೆ.

ಆರ್ ಎಸ್ ಎಸ್ ನಲ್ಲಿ ಅವರ ಆರಂಭಿಕ ವರ್ಷಗಳು ಭಾರತೀಯ ಇತಿಹಾಸದಲ್ಲಿನ ಅತ್ಯಂತ ಕರಾಳ ಅವಧಿಯಾಗಿದ್ದವು. ಆಗಿನ ಕಾಂಗ್ರೆಸ್ ಸರ್ಕಾರವು ಕಠಿಣ ತುರ್ತು ಪರಿಸ್ಥಿತಿಯನ್ನು ಹೇರಿದ್ದ ಸಮಯ ಅದು. ಪ್ರಜಾಪ್ರಭುತ್ವ ತತ್ವಗಳನ್ನು ಗೌರವಿಸುವ ಮತ್ತು ಭಾರತವು ಅಭಿವೃದ್ಧಿ ಹೊಂದಬೇಕೆಂದು ಬಯಸುವ ಯಾರಾದರೂ ತುರ್ತು ಪರಿಸ್ಥಿತಿ ವಿರೋಧಿ ಚಳವಳಿಗೆ ಸೇರುವುದು ಸಹಜ. ಮೋಹನ್ ಜೀ ಮತ್ತು ಅಸಂಖ್ಯಾತ ಆರ್ ಎಸ್ ಎಸ್ ಸ್ವಯಂಸೇವಕರು ಅದನ್ನೇ ಮಾಡಿದರು. ಅವರು ಮಹಾರಾಷ್ಟ್ರದ ಗ್ರಾಮೀಣ ಮತ್ತು ಹಿಂದುಳಿದ ಪ್ರದೇಶಗಳಲ್ಲಿ, ವಿಶೇಷವಾಗಿ ವಿದರ್ಭದಲ್ಲಿ ವ್ಯಾಪಕವಾಗಿ ಕೆಲಸ ಮಾಡಿದರು. ಇದು ಬಡವರು ಮತ್ತು ದೀನದಲಿತರು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಅವರ ತಿಳುವಳಿಕೆಯನ್ನು ರೂಪಿಸಿತು.

ಹಲವು ವರ್ಷಗಳಲ್ಲಿ, ಭಾಗವತ್ ಜೀ ಆರ್ ಎಸ್ ಎಸ್ ನಲ್ಲಿ ವಿವಿಧ ಹುದ್ದೆಗಳನ್ನು ಅಲಂಕರಿಸಿದರು. ಅವರು ಪ್ರತಿಯೊಂದು ಜವಾಬ್ದಾರಿಯನ್ನು ಬಹಳ ದಕ್ಷತೆಯಿಂದ ನಿರ್ವಹಿಸಿದರು. 1990 ರ ದಶಕದಲ್ಲಿ ಅಖಿಲ ಭಾರತೀಯ ಶಾರೀರಿಕ್ ಪ್ರಮುಖ್ ಆಗಿ ಮೋಹನ್ ಜೀ ಅವರ ಅಧಿಕಾರಾವಧಿಯನ್ನು ಇನ್ನೂ ಅನೇಕ ಸ್ವಯಂಸೇವಕರು ಪ್ರೀತಿಯಿಂದ ನೆನಪಿಸಿಕೊಳ್ಳುತ್ತಾರೆ. ಈ ಸಮಯದಲ್ಲಿ, ಅವರು ಬಿಹಾರದ ಹಳ್ಳಿಗಳಲ್ಲಿ ಕೆಲಸ ಮಾಡುವುದರಲ್ಲಿ ಸಾಕಷ್ಟು ಸಮಯವನ್ನು ಕಳೆದರು. ಈ ಅನುಭವಗಳು ಅವರ ತಳಮಟ್ಟದ ಸಮಸ್ಯೆಗಳೊಂದಿಗಿನ ಸಂಪರ್ಕವನ್ನು ಮತ್ತಷ್ಟು ಗಾಢಗೊಳಿಸಿದವು. 2000 ರಲ್ಲಿ, ಅವರು ಸರಕಾರ್ಯವಾಹ ಆದರು ಮತ್ತು ಇಲ್ಲಿಯೂ ಸಹ ಅವರು ತಮ್ಮ ವಿಶಿಷ್ಟ ಕಾರ್ಯ ಶೈಲಿಯನ್ನು ತೋರಿಸಿದರು, ಅತ್ಯಂತ ಸಂಕೀರ್ಣ ಸಂದರ್ಭಗಳನ್ನು ಸುಲಭವಾಗಿ ಮತ್ತು ನಿಖರತೆಯಿಂದ ನಿಭಾಯಿಸಿದರು. 2009 ರಲ್ಲಿ, ಅವರು ಸರಸಂಘಚಾಲಕ್ ಆದರು ಮತ್ತು ಇನ್ನೂ ಹೆಚ್ಚಿನ ಚೈತನ್ಯದಿಂದ ಕೆಲಸ ಮಾಡುತ್ತಿದ್ದಾರೆ.

ಸರಸಂಘಚಾಲಕ್ ಆಗಿರುವುದು ಕೇವಲ ಒಂದು ಸಂಘಟನೆಯ ಜವಾಬ್ದಾರಿಗಿಂತ ಹೆಚ್ಚಿನದು. ಅಸಾಧಾರಣ ವ್ಯಕ್ತಿಗಳು ವೈಯಕ್ತಿಕ ತ್ಯಾಗ, ಸ್ಪಷ್ಟ ಉದ್ದೇಶ ಮತ್ತು ಭಾರತಮಾತೆಗೆ ಅಚಲವಾದ ಬದ್ಧತೆಯ ಮೂಲಕ ಈ ಪಾತ್ರವನ್ನು ವ್ಯಾಖ್ಯಾನಿಸಿದ್ದಾರೆ. ಮೋಹನ್ ಜೀ ಅವರು ಈ ಜವಾಬ್ದಾರಿಯ ಅಗಾಧತೆಗೆ ಸಂಪೂರ್ಣ ನ್ಯಾಯ ಒದಗಿಸಿದ್ದಾರೆ, ತಮ್ಮ ಶಕ್ತಿ, ಬೌದ್ಧಿಕ ಆಳ ಮತ್ತು ಸಹಾನುಭೂತಿಯ ನಾಯಕತ್ವದ ಸಾಮರ್ಥ್ಯಗಳನ್ನು ಪ್ರದರ್ಶಿಸಿದ್ದಾರೆ, ಇವೆಲ್ಲವೂ ರಾಷ್ಟ್ರ ಮೊದಲು ಎಂಬ ತತ್ವದಿಂದ ಪ್ರೇರಿತವಾಗಿವೆ.

ಮೋಹನ್ ಜೀ ಅವರು ತಮ್ಮ ಹೃದಯಕ್ಕೆ ಹತ್ತಿರವಾದ ಮತ್ತು ತಮ್ಮ ಕಾರ್ಯಶೈಲಿಯಲ್ಲಿ ಅಳವಡಿಸಿಕೊಂಡಿರುವ ಎರಡು ವಿಶಿಷ್ಟತೆಗಳ ಬಗ್ಗೆ ನಾನು ನೆನಪಿಸಿಕೊಳ್ಳಬಹುದಾದರೆ, ಅವು ಸ್ಥಿರತೆ ಮತ್ತು ಹೊಂದಾಣಿಕೆ. ಅವರು ಅತ್ಯಂತ ಸಂಕೀರ್ಣ ಸಂದರ್ಭಗಳಲ್ಲಿಯೂ ಸಹ ಸಂಘಟನೆಯನ್ನು ಮುನ್ನಡೆಸಿದ್ದಾರೆ. ನಾವೆಲ್ಲರೂ ಹೆಮ್ಮೆಪಡುವ ಮೂಲ ಸಿದ್ಧಾಂತದ ಮೇಲೆ ಎಂದಿಗೂ ರಾಜೀ ಮಾಡಿಕೊಳ್ಳಲಿಲ್ಲ ಮತ್ತು ಅದೇ ಸಮಯದಲ್ಲಿ ಸಮಾಜದ ಬದಲಾಗುತ್ತಿರುವ ಅಗತ್ಯಗಳನ್ನು ಪೂರೈಸಿದ್ದಾರೆ. ಅವರು ಯುವಕರೊಂದಿಗೆ ಸಹಜ ಸಂಪರ್ಕವನ್ನು ಹೊಂದಿದ್ದಾರೆ ಮತ್ತು ಆದ್ದರಿಂದ, ಅವರು ಯಾವಾಗಲೂ ಹೆಚ್ಚು ಹೆಚ್ಚು ಯುವಜನರನ್ನು ಸಂಘ ಪರಿವಾರಕ್ಕೆ ತರುವತ್ತ ಗಮನಹರಿಸಿದ್ದಾರೆ. ಅವರು ಸಾರ್ವಜನಿಕ ಸಂವಾದಗಳಲ್ಲಿ ಭಾಗವಹಿಸುವುದು ಮತ್ತು ಜನರೊಂದಿಗೆ ಸಂವಹನ ನಡೆಸುವುದನ್ನು ಹೆಚ್ಚಾಗಿ ಕಾಣಬಹುದು, ಇದು ಇಂದಿನ ಕ್ರಿಯಾತ್ಮಕ ಮತ್ತು ಡಿಜಿಟಲ್ ಜಗತ್ತಿನಲ್ಲಿ ಬಹಳ ಉಪಯುಕ್ತವಾಗಿದೆ ಎಂದು ಸಾಬೀತಾಗಿದೆ.

ವಿಶಾಲವಾಗಿ ಹೇಳುವುದಾದರೆ, ಭಾಗವತ್ ಜೀ ಅವರ ಅಧಿಕಾರಾವಧಿಯನ್ನು ಆರ್ ಎಸ್ ಎಸ್ ನ 100 ವರ್ಷಗಳ ಪಯಣದಲ್ಲಿ ಅತ್ಯಂತ ಪರಿವರ್ತನಾಶೀಲ ಅವಧಿ ಎಂದು ಪರಿಗಣಿಸಲಾಗುತ್ತದೆ. ಸಮವಸ್ತ್ರದಲ್ಲಿನ ಬದಲಾವಣೆಗಳಿಂದ ಹಿಡಿದು ಶಿಕ್ಷಾ ವರ್ಗ (ತರಬೇತಿ ಶಿಬಿರ) ಗಳಲ್ಲಿನ ಬದಲಾವಣೆಗಳವರೆಗೆ, ಅವರ ನಾಯಕತ್ವದಲ್ಲಿ ಅನೇಕ ಪ್ರಮುಖ ಬದಲಾವಣೆಗಳಾದವು.

ಮನುಕುಲವು ಶತಮಾನದ ಸಾಂಕ್ರಾಮಿಕ ರೋಗದೊಂದಿಗೆ ಹೋರಾಡುತ್ತಿದ್ದ ಕೋವಿಡ್ ಅವಧಿಯಲ್ಲಿ ಮೋಹನ್ ಜೀ ಅವರ ಪ್ರಯತ್ನಗಳನ್ನು ನಾನು ವಿಶೇಷವಾಗಿ ನೆನಪಿಸಿಕೊಳ್ಳುತ್ತೇನೆ. ಆ ಸಮಯದಲ್ಲಿ, ಆರ್ ಎಸ್ ಎಸ್ ನ ಸಾಂಪ್ರದಾಯಿಕ ಚಟುವಟಿಕೆಗಳನ್ನು ಮುಂದುವರಿಸುವುದು ಸವಾಲಿನ ಸಂಗತಿಯಾಗಿತ್ತು. ತಂತ್ರಜ್ಞಾನದ ಬಳಕೆಯನ್ನು ಹೆಚ್ಚಿಸುವಂತೆ ಮೋಹನ್ ಜೀ ಸೂಚಿಸಿದರು. ಜಾಗತಿಕ ಸವಾಲುಗಳ ಸಂದರ್ಭದಲ್ಲಿ, ಸಾಂಸ್ಥಿಕ ರಚನೆಗಳನ್ನು ಅಭಿವೃದ್ಧಿಪಡಿಸುವಾಗ ಅವರು ಜಾಗತಿಕ ದೃಷ್ಟಿಕೋನದೊಂದಿಗೆ ಸಂಪರ್ಕ ಹೊಂದಿದ್ದರು.

ಆ ಸಮಯದಲ್ಲಿ, ಎಲ್ಲಾ ಸ್ವಯಂಸೇವಕರು ತಮ್ಮ ಮತ್ತು ಇತರರ ಸುರಕ್ಷತೆಯನ್ನು ಖಚಿತಪಡಿಸಿಕೊಂಡು, ಅಗತ್ಯವಿರುವವರನ್ನು ತಲುಪಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡಿದರು. ಅನೇಕ ಸ್ಥಳಗಳಲ್ಲಿ ವೈದ್ಯಕೀಯ ಶಿಬಿರಗಳನ್ನು ಆಯೋಜಿಸಲಾಗಿತ್ತು. ನಾವು ನಮ್ಮ ಅನೇಕ ಶ್ರಮಶೀಲ ಸ್ವಯಂಸೇವಕರನ್ನು ಕಳೆದುಕೊಂಡೆವು, ಆದರೆ ಮೋಹನ್ ಜೀ ಅವರ ಸ್ಫೂರ್ತಿ ಅವರ ದೃಢಸಂಕಲ್ಪ ಎಂದಿಗೂ ಅಲುಗಾಡಲಿಲ್ಲ.

ಈ ವರ್ಷದ ಆರಂಭದಲ್ಲಿ, ನಾಗಪುರದಲ್ಲಿ ಮಾಧವ ನೇತ್ರ ಚಿಕಿತ್ಸಾಲಯದ ಉದ್ಘಾಟನಾ ಸಮಾರಂಭದಲ್ಲಿ, ಆರ್ ಎಸ್ ಎಸ್ ಅಕ್ಷಯವತ್ ಇದ್ದಂತೆ, ನಮ್ಮ ರಾಷ್ಟ್ರದ ರಾಷ್ಟ್ರೀಯ ಸಂಸ್ಕೃತಿ ಮತ್ತು ಸಾಮೂಹಿಕ ಪ್ರಜ್ಞೆಯನ್ನು ಚೈತನ್ಯಗೊಳಿಸುವ ಶಾಶ್ವತ ಆಲದ ಮರ ಎಂದು ನಾನು ಹೇಳಿದ್ದೆ. ಈ ಅಕ್ಷಯವತ್ ಬೇರುಗಳು ಆಳವಾದವು ಮತ್ತು ಬಲವಾದವು. ಏಕೆಂದರೆ ಅವು ಮೌಲ್ಯಗಳಲ್ಲಿ ಬೇರೂರಿವೆ. ಮೋಹನ್ ಭಾಗವತ್ ಜೀ ಈ ಮೌಲ್ಯಗಳನ್ನು ಪೋಷಿಸಲು ಮತ್ತು ಮುನ್ನಡೆಸಲು ತಮ್ಮನ್ನು ಸಮರ್ಪಿಸಿಕೊಂಡಿರುವುದು ನಿಜವಾಗಿಯೂ ಸ್ಫೂರ್ತಿದಾಯಕವಾಗಿದೆ.

ಮೋಹನ್ ಜೀ ಅವರ ವ್ಯಕ್ತಿತ್ವದ ಮತ್ತೊಂದು ಪ್ರಶಂಸನೀಯ ಗುಣವೆಂದರೆ ಅವರ ಮೃದು–ಮಾತಿನ ಸ್ವಭಾವ. ಅವರು ಅಸಾಧಾರಣವಾದ ಆಲಿಸುವ ಸಾಮರ್ಥ್ಯವನ್ನು ಹೊಂದಿದ್ದಾರೆ. ಈ ಗುಣವು ಆಳವಾದ ದೃಷ್ಟಿಕೋನವನ್ನು ಖಾತ್ರಿಗೊಳಿಸಿದೆ ಮತ್ತು ಅವರ ವ್ಯಕ್ತಿತ್ವ ಮತ್ತು ನಾಯಕತ್ವಕ್ಕೆ ಸೂಕ್ಷ್ಮತೆ ಮತ್ತು ಘನತೆಯನ್ನು ತಂದಿದೆ.

ಇಲ್ಲಿ, ವಿವಿಧ ಜನಾಂದೋಲನಗಳಲ್ಲಿ ಅವರ ತೀವ್ರ ಆಸಕ್ತಿಯ ಬಗ್ಗೆಯೂ ನಾನು ಬರೆಯಲು ಬಯಸುತ್ತೇನೆ. ಸ್ವಚ್ಛ ಭಾರತ ಮಿಷನ್ ನಿಂದ ಬೇಟಿ ಬಚಾವೋ–ಬೇಟಿ ಪಡಾವೋವರೆಗೆ, ಅವರು ಇಡೀ ಆರ್ ಎಸ್ ಎಸ್ ಪರಿವಾರವನ್ನು ಈ ಆಂದೋಲನಗಳಿಗೆ ಶಕ್ತಿ ನೀಡುವಂತೆ ಕರೆ ನೀಡಿದ್ದಾ–ರೆ. ಸಾಮಾಜಿಕ ಕಲ್ಯಾಣವನ್ನು ಉತ್ತೇಜಿಸಲು, ಮೋಹನ್ ಜೀ ಅವರು ಸಾಮಾಜಿಕ ಸಾಮರಸ್ಯ, ಕುಟುಂಬ ಮೌಲ್ಯಗಳು, ಪರಿಸರ ಜಾಗೃತಿ, ರಾಷ್ಟ್ರೀಯ ಅಸ್ಮಿತೆ ಮತ್ತು ನಾಗರಿಕ ಕರ್ತವ್ಯವನ್ನು ಒಳಗೊಂಡಿರುವ 'ಪಂಚ ಪರಿವರ್ತನ'ವನ್ನು ನೀಡಿದ್ದಾರೆ. ಇವು ಎಲ್ಲಾ ವರ್ಗದ ಭಾರತೀಯರಿಗೆ ಸ್ಫೂರ್ತಿ ನೀಡಬಲ್ಲವು. ಪ್ರತಿಯೊಬ್ಬ ಸ್ವಯಂಸೇವಕನು ಬಲಿಷ್ಠ ಮತ್ತು ಸಮೃದ್ಧ ರಾಷ್ಟ್ರದ ಕನಸು ಕಾಣುತ್ತಾನೆ. ಈ ಕನಸನ್ನು ನನಸಾಗಿಸಲು, ಸ್ಪಷ್ಟ ದೃಷ್ಟಿಕೋನ ಮತ್ತು ನಿರ್ಣಾಯಕ ಕ್ರಮ ಎರಡೂ ಅಗತ್ಯವಿದೆ. ಮೋಹನ್ ಜೀ ಅವರಲ್ಲಿ ಈ ಎರಡೂ ಗುಣಗಳು ಅಪಾರವಾಗಿವೆ.

ಭಾಗವತ್ ಜೀ ಯಾವಾಗಲೂ 'ಏಕ್ ಭಾರತ್ ಶ್ರೇಷ್ಠ ಭಾರತ್' ನ ಪ್ರಬಲ ಪ್ರತಿಪಾದಕರಾಗಿದ್ದಾರೆ, ಅವರು ಭಾರತದ ವೈವಿಧ್ಯತೆ ಮತ್ತು ನಮ್ಮ ನೆಲದ ಭಾಗವಾಗಿರುವ ವಿವಿಧ ಸಂಸ್ಕೃತಿಗಳು ಮತ್ತು ಸಂಪ್ರದಾಯಗಳ ಆಚರಣೆಯಲ್ಲಿ ದೃಢ ನಂಬಿಕೆಯುಳ್ಳವರಾಗಿದ್ದಾರೆ.

ತಮ್ಮ ಬಿಡುವಿಲ್ಲದ ಕೆಲಸಗಳ ನಡುವೆಯೂ, ಮೋಹನ್ ಜೀ ಯಾವಾಗಲೂ ಸಂಗೀತ ಮತ್ತು ಹಾಡುಗಾರಿಕೆಯಂತಹ ಹವ್ಯಾಸಗಳಿಗೆ ಸಮಯವನ್ನು ಮೀಸಲಿಟ್ಟಿದ್ದಾರೆ. ಅವರು ವಿವಿಧ ಭಾರತೀಯ ಸಂಗೀತ ವಾದ್ಯಗಳಲ್ಲಿ ಪರಿಣಿತರು ಎಂದು ಹಲವರಿಗೆ ತಿಳಿದಿಲ್ಲ. ಓದುವ ಅವರ ಉತ್ಸಾಹವನ್ನು ಅವರ ಹಲವಾರು ಭಾಷಣಗಳು ಮತ್ತು ಸಂವಾದಗಳಲ್ಲಿ ಕಾಣಬಹುದು.

ಈ ವರ್ಷ, ಇನ್ನು ಕೆಲವೇ ದಿನಗಳಲ್ಲಿ, ಆರ್ ಎಸ್ ಎಸ್ ಸ್ಥಾಪನೆಯಾಗಿ 100 ವರ್ಷಗಳನ್ನು ಪೂರೈಸಲಿದೆ. ಈ ವರ್ಷ ವಿಜಯದಶಮಿ, ಗಾಂಧಿ ಜಯಂತಿ, ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಮತ್ತು ಆರ್ ಎಸ್ ಎಸ್ ಶತಾಬ್ದಿ ಆಚರಣೆಗಳು ಒಂದೇ ದಿನ ಬರುತ್ತಿರುವುದು ಸಂತೋಷದ ವಿಷಯವಾಗಿದೆ. ಭಾರತ ಮತ್ತು ಪ್ರಪಂಚದಾದ್ಯಂತ ಆರ್ ಎಸ್ ಎಸ್ ನೊಂದಿಗೆ ಸಂಬಂಧ ಹೊಂದಿರುವ ಲಕ್ಷಾಂತರ ಜನರಿಗೆ ಇದೊಂದು ಐತಿಹಾಸಿಕ ಮೈಲಿಗಲ್ಲಾಗಲಿದೆ ಮತ್ತು ಈ ಸಂದರ್ಭದಲ್ಲಿ ಸಂಘಟನೆಯನ್ನು ಮುನ್ನಡೆಸುತ್ತಿರುವ ಮೋಹನ್ ಜೀ ಅವರಲ್ಲಿ ಅತ್ಯಂತ ತಿಳುವಳಿಕೆ ಮತ್ತು ಕಠಿಣ ಪರಿಶ್ರಮಿ ಸರಸಂಘಚಾಲಕ್ ಇದ್ದಾರೆ. ನಾವು ಎಲ್ಲೆಗಳನ್ನು ಮೀರಿ ಎಲ್ಲರನ್ನೂ ನಮ್ಮವರೆಂದು ಪರಿಗಣಿಸಿದಾಗ, ಅದು ಸಮಾಜದಲ್ಲಿ ನಂಬಿಕೆ, ಸಹೋದರತ್ವ ಮತ್ತು ಸಮಾನತೆಯನ್ನು ಬಲಪಡಿಸುತ್ತದೆ. ಇಂತಹ ವಸುಧೈವ ಕುಟುಂಬಕಂ ನ ಜ್ವಲಂತ ಉದಾಹರಣೆ ಮೋಹನ್ ಜೀ ಅವರು ಎಂದು ಹೇಳುವ ಮೂಲಕ ನಾನು ಈ ಬರಹವನ್ನು ಮುಕ್ತಾಯಗೊಳಿಸುತ್ತೇನೆ. ಭಾರತಮಾತೆಯ ಸೇವೆಯಲ್ಲಿ ಮೋಹನ್ ಜೀ ಅವರಿಗೆ ಸುದೀರ್ಘ ಮತ್ತು ಆರೋಗ್ಯಕರ ಜೀವನವನ್ನು ನಾನು ಮತ್ತೊಮ್ಮೆ ಹಾರೈಸುತ್ತೇನೆ.

## ಅಪರಿಚಿತ ಮೃತ ಮಗು ವಾರಸುದಾರರ ಪತ್ತೆಗೆ ಮನವಿ

**ಮಲ್ಲಮ್ಮ ನುಡಿ ವಾರ್ತೆ**
**ಯಾದಗಿರಿ :**

ಸೆಪ್ಟೆಂಬರ್ 10–: 2025ರ ಆಗಸ್ಟ್ 26 ರಂದು ರಾಯಚೂರು ರೈಲ್ವೆಗಾಡಿಯ ಉದ್ಯನ್ ಎಕ್ಸ್‌ಸ್ ರೈಲ್ವೆಯಲ್ಲಿ ಜನರಲ್ ಭೋಗಿಯಲ್ಲಿ ಟಾಯಲೆಟ್ ರೂಮ್ ಒಳಗಡೆ 2 ರಿಂದ 3 ದಿನದ ನವಜಾತ ಹೆಣ್ಣು ಶಿಶುವನ್ನು ಈ ಕುರಿತು ರಾಯಚೂರು ರೈಲ್ವೇ ಪೊಲೀಸ್ ಠಾಣೆಯಲ್ಲಿ ಯು.ಡಿ.ಆರ್ ಬಿ.ಎನ್.ಎಸ್.ಎಸ್ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿದಿದೆ ಎಂದು ರಾಯಚೂರು ರೈಲ್ವೆ ಆರಕ್ಷಕ ಉಪ ನಿರೀಕ್ಷಕರು ಅವರು ತಿಳಿಸಿದ್ದಾರೆ.

ಉದ್ಯನ್ ಎಕ್ಸ್‌ಸ್ ಹಿಂದಿನ ಜನರಲ್ ಭೋಗಿಯ ಟಾಯಲೆಟ್ ರೂಮ್ ಒಳಗಡೆ ಸುಮಾರು 2 ರಿಂದ 3 ದಿನದ ನವಜಾತ ಹೆಣ್ಣು ಶಿಶುವನ್ನು ಬಿಟ್ಟು ಹೋಗಿ ಮಗುವನ್ನು ಮರೆಮಾಚಿರುತ್ತಾರೆ, ಮಗುವನ್ನು ನೋಡಿದ ದೂರುದಾರರು ಚಿಕಿತ್ಸೆ ಕುರಿತು ರಾಯಚೂರು ರೀಮ್ಸ್ ಆಸ್ಪತ್ರೆಯಲ್ಲಿ ದಾಖಲಿಸಿದ್ದು, ಚಿಕಿತ್ಸೆ ಫಲಕಾರಿಯಾಗದೇ ಮೃತ ಹೊಂದಿರುತ್ತದೆ.

ಮೃತದೇಹ ದೊರೆತ ಘಟನಾ ಸ್ಥಳಗಳಲ್ಲಿ ಮೃತ ಹೆಣ್ಣು ಮಗುವಿನ ವಾರಸುದಾರರು ಯಾರು ಪತ್ತೆಯಾಗಿರುವುದಿಲ್ಲ, ಈ ಮೃತ ಮಗುವಿನ ವಾರಸುದಾರರ ಪತ್ತೆ ಹಾಗೂ ಪಿ.ಎಂ.ಇ ಸಲುವಾಗಿ ಮೃತದೇಹಗಳನ್ನು ಸರಕಾರಿ ರಿಮ್ಸ್ ಆಸ್ಪತ್ರೆಯ ಶೀತಲಶವಗಾರದಲ್ಲಿಟ್ಟಿರುತ್ತದೆ.

ಮೃತ ಮಗುವಿನ ಚಹರೆ ಪಟ್ಟಿಯ ವಿವರ: ಮೃತ ಮಗು ಸುಮಾರು 2 ರಿಂದ 3 ದಿನಗಳು, ಎತ್ತರ ಸುಮಾರು 18 ಇಂಚು, ಸಾದಾ ಕೆಂಪು ಮೈ ಬಣ್ಣ, ತಲೆಯಲ್ಲಿ 1 ಇಂಚು ಕಪ್ಪು ಕೂದಲು, ಮಂಡ ಮೂಗು, ಕಣ್ಣುಗಳು ಮುಚ್ಚಿರುತ್ತದೆ. ಈ ಮೃತ ಹೆಣ್ಣು ಮಗುವಿನ ವಾರಸುದಾರರ ಪತ್ತೆಯ ಕುರಿತು ಸಾರ್ವಜನಿಕರಲ್ಲಿ ಸಮೂಹ ಮಾಧ್ಯಮಗಳಲ್ಲಿ, ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಿಗೆ ಕೋರಿದ್ದು, ಮೃತ ಮಗುವಿನ ವಾರಸುದಾರರು ಪತ್ತೆಯಾದಲ್ಲಿ ಅಥವಾ ಈ ಮೃತ ಮಗುವಿನ ಹೋಲಿಕೆಯ ಮಗು ಕಾಣೆಯಾದ ಪ್ರಕರಣ ದಾಖಲಾಗಿದ್ದಲ್ಲಿ ರಾಯಚೂರು ರೈಲ್ವೇ ಪೊಲೀಸ್ ಠಾಣೆಯ ದೂ.ನಂ.08532,231716 ಅಥವಾ ಮೊ.ನಂ.9480802111, ರೈಲ್ವೇ ಪೊಲೀಸ್ ಕಂಟ್ರೋಲ್ ರೂ.ಸಂ.080 22871291ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಭ್ರಷ್ಟಾಚಾರ ಆರೋಪ:69 ಕಡೆ ಲೋಕಾ ದಾಳಿ

ಮಲ್ಲಮ್ಮ ನುಡಿ ವಾರ್ತೆ; ಬೀದರ್, ಸೆ.10– ನಗರದ ಪಶುವೈದ್ಯಕೀಯ ಮೀನುಗಾರಿಕೆ ವಿಜ್ಞಾನಿಗಳ ವಿವಿಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಆರೋಪ ಸಂಬಂಧ ಲೋಕಾಯುಕ್ತ ಅಧಿಕಾರಿಗಳು ಇಂದು ಬೆಳಗ್ಗೆ ಏಕಕಾಲದಲ್ಲಿ ರಾಜ್ಯದ 69 ಕಡೆಗಳಲ್ಲಿ ದಾಳಿ ನಡೆಸಿದ್ದಾರೆ. ವಿವಿಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಆರೋಪ ಸಂಬಂಧ ಬೀದರ್ ಲೋಕಾಯುಕ್ತ ಕಚೇರಿಯಲ್ಲಿ ಬೆಂಗಳೂರಿನ ವೆಂಕಟ್ ರೆಡ್ಡಿ ನೀಡಿದ್ದ ದೂರು ಹಿನ್ನಲೆಯಲ್ಲಿ ವಿವಿಯ ಅಧಿಕಾರಿಗಳು, ಸಿಬ್ಬಂದಿ ಮನೆಗಳು, ಕಚೇರಿಗಳ ಮೇಲೆ ದಾಳಿ ನಡೆಸಲಾಗಿದೆ.

## ಮೊಹಮ್ಮದ್ ಅರ್ಮಾನ್ ಅಲಿ ಪತ್ತೆಗೆ ಆಗ್ರಹಿಸಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಮನವಿ.




ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ನಗರದ ಮಿಟ್ಟಿ–ಕೇರಿ ಬಡಾವಣೆಯ ನಿವಾಸಿಯಾದ ರುಬಿಯಾ ಬಾನು ಗಂಡ ಸಾಧಿಕ್ ಅಲಿ ಅಳವಂಡಿ ಇವರ ಮಗನಾದ ಮೊಹಮ್ಮದ್ ಅರ್ಮಾನ್ ಅಲಿ ಕಾಣೆ ಆಗಿರುವುದನ್ನು ತೀವ್ರದಲ್ಲಿ ಪತ್ತೆ ಹಚ್ಚಲು ಆಗ್ರಹಿಸಿ ಕರೀಮ್ ಪಾಷಾ ಎಂ.ಗಚ್ಚಿನ ಮನಿ ಅವರ ನೇತೃತ್ವದಲ್ಲಿ ಬುಧವಾರ ವಿವಿಧ ಸಂಘಟನೆಗಳಿಂದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ:ರಾಮ್ ಎಲ್. ಅರಸಿದ್ದಿ ಅವರಿಗೆ ಮನವಿ ಸಲ್ಲಿಸಿದರು.

ಮನವಿಯಲ್ಲಿ ಕೊಪ್ಪಳ ನಗರದ ಮಿಟ್ಟಿಕೇರಿ ಬಡಾವಣೆಯ ನಿವಾಸಿಯಾದ ರುಬಿಯಾ ಬಾನು ಗಂಡ ಸಾಧಿಕ್ ಅಲಿ ಅಳವಂಡಿ ಇವರ ಮಗನಾದ ಮೊಹಮ್ಮದ್ ಅರ್ಮಾನ್ ಅಲಿ 04 ವರ್ಷದ ಬಾಲಕ ದಿನಾಂಕ, 02–09–2025 ರಂದು ಕಾಣೆಯಾಗಿರುವ ಕಾರಣ ನಗರದ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು. ಸದರಿ ಬಾಲಕ ಸುಮಾರು ಎಂಟು ದಿವಸ ಕಳೆದರೂ ಇಲ್ಲಿಯವರೆಗೆ ಪತ್ತೆ ಆಗದೆ ಇರುವ ಕಾರಣ ದಿನನಿತ್ಯ ಕೂಲಿ ಕೆಲಸ ಮಾಡಿ ಕುಟುಂಬದ ನಿರ್ವಹಣೆ ಮಾಡುತ್ತಿರುವ ಬಡ ಕುಟುಂಬದ ಮಗನ ಪತ್ತೆಗಾಗಿ ಸಂಬಂಧಪಟ್ಟ ಠಾಣೆಗೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಆದೇಶಿಸಲು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ ಎಂದು ಅಹಿಂದ ಮುಖಂಡ ಕರೀಮ್ ಪಾಷಾ ಎಂ.ಗಚ್ಚಿಮನಿ ತಿಳಿಸಿದರು.

ಈ ವೇಳೆಯಲ್ಲಿ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಸಂಚಾಲಕ ಬಸವರಾಜ್ ಶೀಲವಂತರ್. ಜನಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಸ್.ಎ.ಗಫಾರ್. ಪಾಸ್ಪರ್ಸ್ ಅಸೋಸಿಯೇಷನ್ ಜಿಲ್ಲಾ ಅಧ್ಯಕ್ಷ ಚನ್ನಬಸಪ್ಪ ಅಪ್ಪಣವರ್. ಎಂ.ಎಸ್. ಕೆ.ಶಫಿಕ್. ಕಾಣೆಯಾದ ಮೊಹಮ್ಮದ್ ಅರ್ಮಾನ್ ಅಲಿಯ ತಂದೆ ಸಾಧಿಕ್ ಅಲಿ ಅಳವಂಡಿ. ಆಟೋರಿಕ್ಷಾ ಚಾಲಕರ ಹಾಗೂ ಮಾಲಿಕರ ಸಂಘದ ಅಧ್ಯಕ್ಷ ಗವಿಸಿದ್ದಪ್ಪ ಚಾಕ್ರಿ. ಸೈಯ್ಯದ್ ಅಬ್ದುಲ್ ಖಾದರ್ ಪೀರಝಾದೆ. ಮೌಲಾ ಹುಸೇನ್ ಕೋಲ್ಕಾರ್. ಮಹೆಬೂಬ್ ಅರಗಂಜಿ. ಜಮಾಲ್ ದಫೇದಾರ್. ಮಾನವಿ ಪಾಷಾ ಮುಂತಾದವರು ಇದ್ದರು.

## ಉದ್ಯಾನವನ ಜಾಗವನ್ನು ಪ್ಲಾಟ್‌ಗಳಾಗಿ ಮಾರಾಟ ಮಾಡಲಾಗಿದೆ - ಕರ್ನಾಟಕ ಸೇನೆಯ ತೀವ್ರ ಆಕ್ರೋಶ



**ಮಲ್ಲಮ್ಮ ನುಡಿವಾರ್ತೆ**
**ಲಿಂಗಸುಗೂರು:**

ಕರ್ನಾಟಕ ಸೇನೆ ಲಿಂಗಸುಗೂರು ತಾಲೂಕು ಘಟಕವು ಜಿಲ್ಲೆ ಸಂಬಂಧಿತ ಪುರಸಭೆ ಪ್ರಾಧಿಕಾರಿಗಳ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. ನಗರದ ವಿವಿಧ ಲೇಔಟ್‌ಗಳಲ್ಲಿ ಉದ್ಯಾನವನ ನಿರ್ಮಿಸಲು ಮೀಸಲಿಟ್ಟಿದ್ದ ಜಾಗವನ್ನು ಪ್ಲಾಟ್‌ಗಳಾಗಿ ಪರಿವರ್ತಿಸಿ "ಬಿ" ಖಾತೆ ಮಾಡಿ ಮಾರಾಟ ಮಾಡಲಾಗುತ್ತಿದೆ ಎಂಬ ಗಂಭೀರ ಆರೋಪವನ್ನು ಕರ್ನಾಟಕ ಸೇನೆ ಮಂಡಿಸಿದೆ.

ಪ್ರಧಾನವಾಗಿ, ಲಿಂಗಸುಗೂರ ಪಟ್ಟಣದ ಬ್ಲಾಕ್ ಕಾಂಗ್ರೆಸ್ ಕಛೇರಿ ಬಳಿಯಲ್ಲಿ ಉದ್ಯಾನವನಕ್ಕಾಗಿ ಮೀಸಲಿಟ್ಟ ಜಾಗದಲ್ಲಿ 9 ಪ್ಲಾಟ್‌ಗಳನ್ನು ಮಾಡಿಸಿ ಮಾರಾಟ ಮಾಡಿ, ಕಟ್ಟಡ ನಿರ್ಮಿಸಲು ಸಹ ಪರವಾನಿಗೆ ನೀಡಲಾಗಿದೆ ಎಂದು ದೂರು ನೀಡಲಾಗಿದೆ. ಈ ಅನ್ಯಾಯದ ಹಿಂದೆ ಲೇಔಟ್ ಮಾಲೀಕರು ಹಾಗೂ ಪುರಸಭೆ ಅಧಿಕಾರಿಗಳು ಒಗ್ಗಟ್ಟಾಗಿ ಕೆಲಸ ಮಾಡುತ್ತಿದ್ದಾರೆ ಎಂಬದನ್ನು ಕರ್ನಾಟಕ ಸೇನೆ ಪುರಸಭೆ ಮುಖ್ಯಾಧಿಕಾರಿ ಮತ್ತು ಸಂಬಂಧಪಟ್ಟ ಸಿಬ್ಬಂದಿಗಳನ್ನು ಅಮಾನತು ಮಾಡುವಂತೆ ಮನವಿ ಮಾಡಿದ್ದು, ತಕ್ಷಣ ಈ ಕ್ರಮವನ್ನು ಕೈಗೊಳ್ಳುವಂತೆ ಎಚ್ಚರಿಕೆ ನೀಡಿದೆ.

ಕರ್ನಾಟಕ ಸೇನೆ ಅಧ್ಯಕ್ಷರು ನಿರೂಪಾದಿ ಹಿರೇಮಠ, ಚಂದ್ರಕಾಂತ ಭೋವಿ, ಬಸವರಾಜ ನಾಯಕ ಮತ್ತು ಇತರರು ಒಕ್ಕೂಟವಾಗಿ ಪುರಸಭೆ ಮುಂದೆ ಪ್ರತಿಭಟನೆ ನಡೆಸುವ ಹಕ್ಕನ್ನು ಹಿಂಪಡೆಯುವಂತೆ ಮುಕ್ತಾಯ ಸೂಚಿಸಿದ್ದಾರೆ.

“ಉದ್ಯಾನವನಕ್ಕೆ ಮೀಸಲಿಟ್ಟ ಜಾಗದಲ್ಲಿ ಈ ರೀತಿಯ ಅಕ್ರಮ ಪ್ಲಾಟ್ಗಳ ಮಾರಾಟಕ್ಕೆ ಅನುಮತಿ ನೀಡುವುದು ಸರ್ವಜನ ಹಿತದ ಪರಸ್ಪರ ವಿರೋಧಿ ಮತ್ತು ಕಾನೂನಿಗೆ ವಿರುದ್ಧ” ಎಂದು ಸಂಘದ ನಾಯಕರು ಸ್ಪಷ್ಟಪಡಿಸಿದ್ದಾರೆ.

# ವಿಶೇಷವಾಗಿ ಆಚರಣೆ ಮಾಡಿದ ಪಾಲಕರ ಸಭೆ, ಅಲ್ಪಸಂಖ್ಯಾತರ ಮುರಾರ್ಜಿ ದೇಸಾಯಿ ವಸತಿ ಶಾಲೆ ತಳಕಲ್

**ಮಲ್ಲಮ್ಮ ನುಡಿವಾರ್ತೆ**
**ಕೊಪ್ಪಳ :**

ತಳಕಲ್ ಅಲ್ಪಸಂಖ್ಯಾತರ ಮುರಾರ್ಜಿ ದೇಸಾಯಿ ವಸತಿ ಶಾಲೆಯ ಪಾಲಕರ ಸಭೆ ಏರ್ಪಡಿಸಲಾಗಿತ್ತು.

ಈ ಸಭೆಯಲ್ಲಿ ಅಧ್ಯಕ್ಷತೆಯ ಸ್ಥಾನವನ್ನು ಶಾಲೆಯ ಪ್ರಭಾರಿ ಪ್ರಂಶಪಾಲರಾದ ಮಂಜುನಾಥ್ ವರ್ತಟ್ಟನಾಳ್ ವಹಿಸಿದ್ದು ಮುಖ್ಯ ಅತಿಥಿಗಳು ಸಿರಾಜುದ್ದೀನ್ ಕೊಪ್ಪಳ ಜಾಕಿರ್ ಹುಸೇನ್ ಕೊಪ್ಪಳ ವಹಿಸಿದ್ದರು ಮತ್ತು ಶಾಲೆಯ ಎಲ್ಲಾ ಶಿಕ್ಷಕ ಮತ್ತು ಶಿಕ್ಷಕಿಯರು ಡಿ ದರ್ಜೆ ನೌಕರರು ಪಾಲಕ ಪೋಷಕರು ಭಾಗವಹಿಸಿದ್ದರು. ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ಪಾಲಕರ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಪ್ರಭಾರಿ ಪ್ರಿನ್ಸಿಪಾಲರಾದ ಮಂಜುನಾಥ್ ವರ್ತಟ್ನಾಳ್ ಮಕ್ಕಳಿಗೆ ಪೌಷ್ಟಿಕ ಆಹಾರ ವಿತರಣೆ ಮತ್ತು ಆಹಾರ ರಕ್ಷಣೆ ಮೂಲಭೂತ ಸೌಕರ್ಯಗಳು ಎಲ್ಲಾ ಅಚ್ಚುಕಟ್ಟಾಗಿ ಮಾಡಲಾಗುತ್ತಿದ್ದು ಪಾಲಕರು ಯಾವುದೇ ಭಯಪಡುವ ಅಗತ್ಯವಿಲ್ಲ ಮತ್ತು ವಿದ್ಯಾಭ್ಯಾಸದ ಕಡೆ ಮಕ್ಕಳಿಗೆ ಹೆಚ್ಚು ಹೊತ್ತು ಕೊಡಲಾಗುತ್ತಿದೆ ಎಂದು ಹೇಳಿದರು. ಮುಖ್ಯ ಅತಿಥಿಗಳಾದ ಶಿರಾಜುದ್ದೀನ್ ಕೊಪ್ಪಳ ಮಾತನಾಡುತ್ತಾ ಅಲ್ಪಸಂಖ್ಯಾತರ ಮುರಾರ್ಜಿ ವಸತಿ ಶಾಲೆಯ ತಳಕಲ್ಲಿನಲ್ಲಿ ಇರುವ ಶಿಕ್ಷಕರು ಯಾವುದೇ




ಭೇದಭಾವ ಮತ್ತು ತಾರತಮ್ಯ ಮಾಡಲಾರದೆ ತಮ್ಮ ಮನೆಯ ಮಕ್ಕಳಂತೆ ಮಕ್ಕಳನ್ನು ಲಾಲನೆ ಪಾಲನೆ ಮಾಡುತ್ತಾರೆ ಪಾಲಕರು ಪದೇಪದೇ ಶಾಲೆ ಹತ್ತಿರ ಬಂದು ಮಕ್ಕಳನ್ನು ನೋಡುವುದಕ್ಕೆ ಬಂದರೆ ಶಿಕ್ಷಕರಿಗೆ ತೊಂದರೆಯಾಗುತ್ತದೆ ಅದಕ್ಕಾಗಿಯೇ ವಸತಿ ಶಾಲೆಯ ನಿಯಮನುಸಾರ ಪ್ರಕಾರವಾಗಿ ತಿಂಗಳಿಗೆ ಕೊನೆಯ ವಾರದಲ್ಲಿ ಮಕ್ಕಳನ್ನು ಮಾತನಾಡಿಸುವುದಾಗಲಿ ಏನಾದರೂ ಕುಂದು ಕೊರತೆಗಳು ಕೇಳುವದಿದ್ದರೆ ಒಂದು ದಿನ ರವಿವಾರ ಅವಕಾಶ ಕೊಟ್ಟಿರುತ್ತಾರೆ ದಯವಿಟ್ಟು ಎಲ್ಲಾ ಪಾಲಕರು ಸಹಕರಿಸಬೇಕು ಎಂದು ಮನವಿ ಮಾಡಿದರು ಮತ್ತು ಶೈಕ್ಷಣಿಕ ವಿಚಾರವಾಗಿ ಈ ಶಾಲೆಯ ವರ್ಷದಿಂದ ವರ್ಷಕ್ಕೆ ಮಕ್ಕಳು ಒಳ್ಳೆ ಪರ್ಸೆಂಟೇಜ್ ತೆಗೆದುಕೊಂಡು ಶಾಲೆಗೂ ಮತ್ತು ಊರಿಗೂ ಒಳ್ಳೆಯ ಕೀರ್ತಿ ತರುತ್ತಿದ್ದಾರೆ ಇದರಿಂದ ನಮಗೂ ಹೆಮ್ಮೆಯಾಗುತ್ತಿದೆ ಮತ್ತು ಮಕ್ಕಳ ಸರ್ವತೋಮುಖ ಅಭಿವೃದ್ಧಿ ಅವರ ಶೈಕ್ಷಣಿಕ ಪ್ರಗತಿ ಆಟೋಟಗಳಲ್ಲಿ ಅವರ ಸಾಧನೆ ಮತ್ತು ಬಹುಮಾನ ವಿತರಣೆಯನ್ನು ಮಾಡಿದರು.

ಪ್ರಾಸ್ತಾವಿಕ ನುಡಿಯನ್ನು ರಾಮಪ್ಪ ನಿಲಯ ಪಾಲಕರು ನೆರವೇರಿಸಿ ಕೊಟ್ಟರು ನಿರೂಪಣೆಯನ್ನು ರಮೇಶ್ ಕೆ ಮಾಡಿದರು ಸ್ವಾಗತ ಭಾಷಣವನ್ನು ರಾಜ್ಯಶ್ವರಿ ಯಂಕಮ್ಮ ಮಾಡಿದರು ವಂದನಾರ್ಪಣೆಯನ್ನು ಸಂತೋಷ ರಾಥೋಡ್ ಮಾಡಿದರು ಈ ಸಂದರ್ಭದಲ್ಲಿ ಬಂದಂತ ಎಲ್ಲಾ ಪಾಲಕರಿಗೂ ಸಿಹಿ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು ಸಭೆಗೆ ಆಗಮಿಸಿದ್ದ ಪಾಲಕರು ಶ್ರೀದೇವಿ ಹಿರೇಮಠ ಇರಕಲ್ ಗಡ ಮಾತನಾಡಿ ನಾವು ಸುಮಾರು ವಸತಿ ಶಾಲೆಗಳನ್ನು ನೋಡಿದ್ದೇವೆ ತಳಕಲ್ ನಲ್ಲಿರುವ ಅಲ್ಪಸಂಖ್ಯಾತರ ಮುರಾರ್ಜಿ ವಸತಿ ದೇಸಾಯಿ ಶಾಲೆಯ ಬಗ್ಗೆ ಹೇಳುವುದಾದರೆ ನಮ್ಮ ಮಕ್ಕಳು ಈ ವಸತಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕೆ ನಾಲ್ಕು ವರ್ಷಗಳಾಯಿತು ಮೊದಲಿನಲ್ಲಿ ನನ್ನ ಮಕ್ಕಳು ವಿದ್ಯಾಭ್ಯಾಸ ಮತ್ತು ಚಾಣಕ್ಯತನದ ಕೊರತೆ ಇತ್ತು ಇಲ್ಲಿಗೆ ಬಂದ ಮೇಲೆ ನನ್ನ ಮಗಳು ಶೇಕಡ 95 ರಷ್ಟು ಅಂಕಗಳನ್ನು ತೆಗೆದುಕೊಳ್ಳುತ್ತಿದ್ದಾಳೆ ನಮಗೆ ಈ ಸ್ಕೂಲಿನ ಬಗ್ಗೆ ಮತ್ತು ಇಲ್ಲಿ ಶಿಕ್ಷಕರ ಬಗ್ಗೆ ತುಂಬಾ ಹೆಮ್ಮೆ ಅನಿಸುತ್ತಿದೆ ಎಂದು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಈ ಸಂದರ್ಭದಲ್ಲಿ ಎಲ್ಲಾ ವಿದ್ಯಾರ್ಥಿಗಳ ಪಾಲಕರು ಮತ್ತು ಎಲ್ಲಾ ಶಿಕ್ಷಕರು ಅಡುಗೆ ಸಹಾಯಕರು ಎಲ್ಲರೂ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಸಿರಿಗೇರಿ: ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ ಕಾರ್ಯಕ್ರಮ ಪರಿಶೀಲನೆ

## ಗಂಡಾಂತರ ಗರ್ಭಿಣಿ ಮಹಿಳೆಯರ ತಪಾಸಣೆ ನಿರಂತರವಾಗಿರಲಿ: ಡಿಹೆಚ್‌ಒ ಡಾ.ಯಲ್ಲಾ ರಮೇಶ್ ಬಾಬು




**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ,**

ಸೆ.10–ಜಿಲ್ಲೆಯಾದ್ಯಂತ ಪ್ರತಿ ತಿಂಗಳು 09 ಮತ್ತು 24ನೇ ತಾರೀಖಿನಂದು ಗಂಡಾಂತರ ಗರ್ಭಿಣಿ ಮಹಿಳೆಯರ ಆರೋಗ್ಯ ತಪಾಸಣೆ ಕೈಗೊಳ್ಳುವ ಕಾರ್ಯ ಜರುಗುತ್ತಿದ್ದು, ಇದು ನಿರಂತರವಾಗಿರಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಹೇಳಿದರು.

ಮಂಗಳವಾರ, ಸಿರುಗುಪ್ಪ ತಾಲ್ಲೂಕಿನ ಸಿರಿಗೇರಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರ–ಕ್ಕೆ ಭೇಟಿ ನೀಡಿ ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ ಕಾರ್ಯಕ್ರಮ ಕುರಿತು ಪರಿಶೀಲನೆ ನಡೆಸಿ ಅವರು ಮಾತನಾಡಿದರು.

ಗಂಡಾಂತರ ಗರ್ಭಿಣಿ ಮಹಿಳೆಯರು ಎಂದು ಗುರುತಿಸಿಕೊಳ್ಳುವ ಚೊಚ್ಚಲು ಗರ್ಭಿಣಿ, ಎತ್ತರ ಕಡಿಮೆ, ಅಧಿಕ ರಕ್ತದೊತ್ತಡ, ರಕ್ತದಲ್ಲಿ ಕಬ್ಬಿಣಾಂಶ ಕೊರತೆ, ಅವಳಿ–ಜವಳಿ ಗರ್ಭಿಣಿ, ವಿವಾಹವಾಗಿ ಐದಕ್ಕಿಂತ ಹೆಚ್ಚು ವರ್ಷಗಳ ನಂತರ ಗರ್ಭಿಣಿಯಾಗುವುದು, ಮೊದಲ ಹೆರಿಗೆ ಸಿಸೇರಿಯನ್ ಮುಂತಾದ ಕಾರಣಗಳಿದ್ದರೆ ಅವರನ್ನು ನಿರ್ಲ್ಯಕ್ಷಿಸದೇ ನಿರಂತರ ನಿಗಾವಹಿಸಬೇಕು. ಗರ್ಭಿಣಿ ಮಹಿಳೆಯರ ತಾಯಿ ಕಾರ್ಡ್ ಪರಿಶೀಲಿಸಿ ಗೆಸ್ಟೋಸಿಸ್ ಸ್ಕೋರ್ ಬಗ್ಗೆ ಪರಿಶೀಲಿಸಬೇಕು ಎಂದು ವೈದ್ಯಾಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಾಮಾನ್ಯವಾಗಿ 12 ವಾರದೊಳಗೆ ಗರ್ಭಿಣಿ ಎಂದು ತಿಳಿದ ನಂತರ ಹತ್ತಿರದ ಆಸ್ಪತ್ರೆಗೆ ಭೇಟಿ ನೀಡಿ ತಪಾಸಣೆ ಕೈಗೊಳ್ಳಲು ಸೂಚಿಸಬೇಕು. ಆರೋಗ್ಯ ಇಲಾಖೆಯಿಂದ ನೀಡುವ ತಾಯಿ ಕಾರ್ಡ್ನಲ್ಲಿ ಮಹಿಳೆಯ ಎಲ್ಲಾ ಮಾಹಿತಿಗಳನ್ನು ಭರ್ತಿ ಮಾಡಬೇಕು. ವೈದ್ಯರ ಸೂಚನೆಯಂತೆ ಪ್ರತಿ ತಿಂಗಳು ತೂಕ, ರಕ್ತದ ಪ್ರಮಾಣ ಹಾಗೂ ಇತರೆ ಅಗತ್ಯ ಪರೀಕ್ಷೆಗಳನ್ನು ಮಾಡಿಸಬೇಕು. ಇದರಿಂದ ಹೆರಿಗೆ ಸಮಯದಲ್ಲಿ ಅನುಕೂಲವಾಗುತ್ತದೆ ಎಂದು ಆಶಾಕಾರ್ಯಕರ್ತೆಯರಿಗೆ ಸೂಚಿಸಿದರು.

ತೀವ್ರ ರಕ್ತಹೀನತೆಯ ಸನ್ನಿವೇಶದಲ್ಲಿ ಸ್ಥಳೀಯವಾಗಿ ನೀಡುವ ಐಎಫ್ಎ ಮಾತ್ರೆ, ಐರನ್ ಸುಕ್ರೋಸ್, ರಕ್ತ ಹಾಕಿಸುವಿಕೆ ವಿಧಾನ ಕೈಗೊಳ್ಳಬೇಕು. ಅಗತ್ಯವಿದ್ದಲ್ಲಿ ಸ್ಕ್ಯಾನ್ ಮಾಡಿಸಲು ತಿಳಿಸಬೇಕು. ಮೊದಲ ಹೆರಿಗೆ ಶಸ್ತ್ರಚಿಕಿತ್ಸೆ ಮೂಲಕವಾದಲ್ಲಿ ಪುನಃ ಗರ್ಭಿಣಿಯಾಗುವ ಅವಧಿಯನ್ನು ಕನಿಷ್ಠ 3 ವರ್ಷಕ್ಕೆ ಕಡ್ಡಾಯವಾಗಿ ಮುಂದೂಡುವುದು, ಇದಕ್ಕಾಗಿ ಅಂತರ ಚುಚ್ಚುಮದ್ದು, ಕಾಪರ–ಟಿ, ನೀರೊಧ ಬಳಸುವಂತೆ ಜಾಗೃತಿ ಮೂಡಿಸಬೇಕು ಎಂದರು.

ಗರ್ಭಿಣಿ ಮಹಿಳೆಯರು ಗುಣಮಟ್ಟದ ಪೌಷ್ಠಿಕ ಆಹಾರ ಸೇವಿಸುವುದರ ಜೊತೆಗೆ ವೈದ್ಯರ ಸಲಹೆಯಂತೆ ಉಚಿತವಾಗಿ ನೀಡುವ ಕಬ್ಬಿಣಾಂಶ ಮಾತ್ರೆಗಳನ್ನು ಪ್ರತಿದಿನ ಒಂದರಂತೆ ಕನಿಷ್ಠ 180 ಮತ್ತು ಒಂದು ವೇಳೆ ರಕ್ತಹೀನತೆಯ ಪ್ರಮಾಣ ತೀವ್ರವಾಗಿದ್ದಲ್ಲಿ ದಿನಕ್ಕೆ 2 ರಂತೆ 360 ಮಾತ್ರೆಗಳನ್ನು 6 ತಿಂಗಳ ಅವಧಿಯಲ್ಲಿ ಸೇವಿಸಬೇಕು. ಜೊತೆಗೆ ದೈಹಿಕವಾಗಿ ಸದೃಢರಾಗಿರಲು ಕ್ಯಾಲ್ಸಿಯಂ ಮಾತ್ರೆಗಳನ್ನು ಸಹ ನುಂಗಬೇಕು ಎಂದು ವಿನಂತಿಸಿದರು.

ಬಳಿಕ ಡಿಹೆಚ್‌ಒ ಡಾ.ಯಲ್ಲಾ ರಮೇಶ್ ಬಾಬು ಅವರು ಗರ್ಭಿಣಿ ಮಹಿಳೆಯರ ಸಾಮಾನ್ಯ ಆರೋಗ್ಯ ತಪಾಸಣೆ ಕೈಗೊಂಡರು.

ಈ ಸಂದರ್ಭದಲ್ಲಿ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಆರ್.ಅಬ್ದುಲ್ಲಾ, ವೈದ್ಯಾಧಿಕಾರಿಗಳಾದ ಡಾ.ತಿಪ್ಪಾರೆಡ್ಡಿ, ಡಿವಿಬಿಡಿಸಿಪಿ ಜಿಲ್ಲಾ ಸಲಹೆಗಾರ ಪ್ರತಾಪ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಚಿದಾನಂದ, ಪಿಹೆಚ್‌ಸಿಒ ಗಂಗಮ್ಮ, ನರ್ಸಿಂಗ್ ಅಧಿಕಾರಿ ಈರಮ್ಮ ಸೇರಿದಂತೆ ಆಶಾ ಕಾರ್ಯಕರ್ತೆಯರು, ತಾಯಂದಿರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ಶಾಲಾ ಮಕ್ಕಳಿಗೆ ನೋಟ್ ಪುಸ್ತಕ ವಿತರಣೆ :ಡಾ.ಕೆ ಎಮ್ ಸೈಯದ್



**ಮಲ್ಲಮ್ಮ ನುಡಿವಾರ್ತೆ ಕೊಪ್ಪಳ :**

ಜಿಲ್ಲೆಯ ಬಂಡಿಹರ್ಲಾಪುರ ಗ್ರಾಮ ಪಂಚಾಯತ್ ವ್ಯಾಪ್ತಿಯ ಸರ್ಕಾರಿ ಹಿರಿಯ ಪ್ರಾಥಮಿಕ ಹೊಸ ಬಂಡಿ ಹರ್ಲಾಪುರ ಶಾಲೆಯಲ್ಲಿ ಮುದ್ದು ಮಕ್ಕಳಿಗೆ 800 ನೋಟ್ ಪುಸ್ತಕಗಳನ್ನು ಸಮಾಜ ಸೇವಕರು ಡಾ. ಕೆ ಎಮ್ ಸೈಯದ್, ಅಧ್ಯಕ್ಷರು ಕೆ ಎಮ್ ಎಸ್ ಸಮೂಹ ಸಂಸ್ಥೆಯ ವತಿಯಿಂದ ವಿತರಿಸಿದರು.

ನಂತರ ಮಾತನಾಡಿದ ಕೆ ಎಮ್ ಸೈಯದ್ ಸಂಪಾದನೆ ಎಂದರೆ ಕೇವಲ ದುಡಿದ ಹಣ ಮಾತ್ರ ಸಂಪಾದನೆಯಲ್ಲ. ಅನುಭವ, ಸಂಬಂಧ, ಗೌರವ, ಪ್ರೀತಿ, ವಾತ್ಸಲ್ಯ ಸೇವೆ ಇವೂ ಕೂಡ ಒಂದು ರೀತಿಯ ಸಂಪಾದನೆಯೇ. ಹಣದ ಜೊತೆಗೆ ಇವು ಕೂಡ ತುಂಬಾನೇ ಮೌಲ್ಯಯುತವಾದ ಸಂಪಾದನೆಯಾಗಿವೆ ಮತ್ತು ಪ್ರಪಂಚದಲ್ಲಿ ಯಾವುದೇ ವಸ್ತು ಎಷ್ಟೇ ದುಬಾರಿ ಬೆಲೆ ಇರಬಹುದು, ಆದರೆ ಜೀವನ ಸಾಗಿಸುವಾಗ ನಮ್ಮ ನಿದ್ರೆ, ನೆಮ್ಮದಿ ಹಾಗೂ ಸಮಾಜ ಸಂತೋಷಕ್ಕೆ ಇರುವಷ್ಟು ಬೆಲೆ ಬೇರೆ ಯಾವುದೇ ವಸ್ತುವಿಗೂ ಇರೋದಿಲ್ಲ. ಆದುದರಿಂದ ನಾನು ಒಂದಲ್ಲ ಒಂದು ರೀತಿಯಲ್ಲಿ ಸಮಾಜದಲ್ಲಿ ತೊಡಗಿಸಿಕೊಳ್ಳುತ್ತಾ ಬಂದಿದ್ದೇನೆ.

ತದನಂತರ ಮಾತನಾಡಿದ ಸಮೀರ್ ಬಂಡಿಹರ್ಲಾಪುರ, ಸಮಾಜ ಸೇವೆಯಲ್ಲಿ ಸೈ ಎಂದವರ ಅಥಿತಿಗಳಿಗೆ ಪರಿಚಯಿಸುವ ಮೂಲಕ, ಕೊಪ್ಪಳ ತಾಲೂಕಿನ ವಿವಿಧ ಹಳ್ಳಿಗಳಲ್ಲಿ ನಮ್ಮ ಭಾಗಕ್ಕೆ 5000 ನೋಟ್ ಪುಸ್ತಕಗಳನ್ನು ಕೊಡುಗೆ ನೀಡಿದ್ದಾರೆ, ಶಿಕ್ಷಣದ ಒಲವಿನ ಬಡ ಮಕ್ಕಳಿಗೆ ಅನುಕೂಲವಾಗಲಿ ಎಂದು ಡಾ. ಕೆ.ಎಮ್ ಸೈಯದ್ ಸರ್ ಅವರು ನೋಟ್ ಪುಸ್ತಕಗಳನ್ನು ನೀಡಿದ್ದಕ್ಕೆ ಕೃತಜ್ಞತೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಲೆಯ ಮುಖ್ಯೋಪಾಧ್ಯಾಯರಾದ ಪದ್ಮಾವತಿ ಶಾಲೆಯ ಸುಸ್ಥಿರ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ವಿವಿಧ ರೀತಿಯಲ್ಲಿ ದಾನಿಗಳು ಕೊಡುಗೆ ನೀಡುತ್ತಾ ಬಂದಿದ್ದಾರೆ ಅದರಲ್ಲಿ ಡಾಕ್ಟರ್ ಕೆ. ಎಮ್ ಸೈಯದ್ ಸರ್ ರವರಿಗೆ ಹೃತ್ಪೂರ್ವಕವಾಗಿ ಶಾಲೆಯ ಎಸ್ ಡಿ ಎಂ ಸಿ ಮತ್ತು ಊರಿನ ಪರವಾಗಿ ಧನ್ಯವಾದಗಳು ಅರ್ಪಿಸಿದರು. ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಏಕಾಗ್ರತೆ ಮತ್ತು ಶಿಸ್ತನ್ನು ಕಲಿತು ಅವರನ್ನು ಮುಂದೊಂದು ದಿನ ಸಮಾಜಕ್ಕೆ ಗೌರವಿಸಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಲೆಯ ಎಸ್ ಡಿ ಎಮ್ ಸಿ ಅಧ್ಯಕ್ಷರಾದ ಜಿ. ಸಿದ್ದಿ ಭಾಷಾ ಗೊರೆಬಾಳ್, ಮಾಜಿ ತಾಲೂಕ್ ಪಂಚಾಯತಿ ಸದಸ್ಯರಾದ ಅಬುಲಿಗೆಪ್ಪ, ಗ್ರಾಮ ಪಂಚಾಯತ ಸದಸ್ಯರಾದ ಹುಲುಗಪ್ಪ, ಅಥಿತಿಗಳಾದ ಇಮಾಮ್ ಹುಸೇನ್ ಗಿಣಿಗೇರಾ, ಊರಿನ ಮುಖಂಡರಾದ ಬಾಬು, ಸಮಾಜ ಸೇವಕರು ಜಹಾಂಗೀರ್ ಗೊರೇಬಾಳ್, ಶಿಕ್ಷಣ ಪ್ರೇಮಿಗಳು ಸಮೀರ್ ಬಂಡಿಹರಲಾಪುರ್, ಶಾಲೆಯ ಬೋಧಕ ಮತ್ತು ಬೋಧಕಿಯರು, ಮತ್ತು ಮುದ್ದು ಮಕ್ಕಳು ಮಧ್ಯಾಹ್ನದ ಶುಭ ಕಾರ್ಯಕ್ರಮದಲ್ಲಿ ಭಾಗಿಯಾಗಿ ವಂದಿಸಿ ಯಶಸ್ವಿಗೊಳಿಸಿದರು.

## ಕರ್ನಾಟಕ ಪ್ರಾಂತ ರೈತ ಸಂಘ ತಾಲೂಕ ಸಮಿತಿ ವತಿಯಿಂದ ಪ್ರತಿಭಟನೆ.

ಅತಿ ಮಳೆಯಿಂದ ಬೆಳೆ ನಷ್ಟವಾದ ರೈತರಿಗೆ ಕೂಡಲೇ ಪ್ರತಿಎಕರೆಗೆ 50,000 ಕೊಡಬೇಕೆಂದು ಒತ್ತಾಯಿಸಿ.

ರೈತರ ಆತ್ಮಹತ್ಯೆ ತಡೆಗಟ್ಟಲು ರೈತರ ಸಂಪೂರ್ಣ ಸಾಲ ಮನ್ನಾ ಮಾಡಬೇಕು.

ಕಾಂಗ್ರೆಸ್ ಪಕ್ಷದ ಎಐಸಿಸಿ ಅಧ್ಯಕ್ಷರಾದ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆ ಅವರು ರೈತರ ಬೆಳೆ ನಷ್ಟಕ್ಕೆ ಕೀಳುಮಟ್ಟದ ಮಾತನಾಡಿರುವುದು ಕೂಡಲೇ ರೈತರಿಗೆ ಕ್ಷಮೆ ಕೇಳಬೇಕು ಮತ್ತು ರೈತರ ಬೆಳೆ ಪರಿಹಾರಕ್ಕೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕು. ಕರ್ನಾಟಕ ಸರ್ಕಾರದ ಉಪಮುಖ್ಯಮಂತ್ರಿಗಳಾದ ಹಾಗೂ ಕಾಂಗ್ರೆಸ್ನ ರಾಜ್ಯ ಅಧ್ಯಕ್ಷರಾದ ಡಿಕೆ ಶಿವಕುಮಾರ್ ಅವರು ದೇವನಹಳ್ಳಿ ರೈತರ ಭೂಸ್ವಾಧೀನ ಬಗ್ಗೆ ಉಡಾಫೆ ಮಾತಾಡಿರುವುದನ್ನು ಕರ್ನಾಟಕ ಪ್ರಾಂತ ರೈತ ಸಂಘ ಖಂಡಿಸುತ್ತದೆ. ಕೂಡಲೇ ರೈತರಿಗೆ ಕ್ಷಮೆ ಕೇಳಬೇಕು ಎಂದು ಒತ್ತಾಯಿಸುತ್ತದೆ. ಮುಂಗಾರು ಬೆಳಗ್ಗೆ ರೈತರಿಗೆ ಅನುಕೂಲವಾಗುವಂತೆ ಬ್ಯಾಂಕ್ ಸಾಲ ಒದಗಿಸಬೇಕು.

ಹೋರಾಟದಲ್ಲಿ ಭಾಗವಹಿಸಿದ ಮುಖಂಡರ ಹೆಸರು. ಎಸ್ ಎಂ ಸಾಗರ್. ಭೀಮಣ್ಣತಪ್ಪಿದಾರ. ಭೀಮರಾಯ ಪೂಜಾರಿ. ತಮ್ಮಣ್ಣ ಜಾಗಿರ್ದಾರ್. ಕಾರ್ಮಿಕ ಮುಖಂಡ ದೇವೇಂದ್ರ ಕುಮಾರ್ ಇದ್ದರು.

## ದೂರ ಶಿಕ್ಷಣ ಪಡೆಯುವ ಪ.ಜಾತಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ,**

ಸೆ.10–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯಗಳಲ್ಲಿ ದೂರ ಶಿಕ್ಷಣದ ಮೂಲಕ ಪದವೀಧರ, ಸ್ನಾತಕೋತ್ತರ ಶಿಕ್ಷಣ ಪಡೆಯುವ ಜಿಲ್ಲೆಯ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನೀಡಲು ಉದ್ದೇಶಿಸಲಾಗಿದ್ದು, ಅರ್ಹ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಠಿಯಿಂದ ಹಾಗೂ ಶೈಕ್ಷಣಿಕವಾಗಿ ಪ್ರೋತ್ಸಾಹಿಸಲಾಗುತ್ತಿದ್ದು, ದೂರ ಶಿಕ್ಷಣದ ಮೂಲಕ ಪದವೀಧರ, ಸ್ನಾತಕೋತ್ತರ ಹಾಗೂ ಪಿಹೆಚ್.ಡಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಆನ್ ಲೈನ್ ವೆಬ್‌ಸೈಟ್ www.sw.kar.nic.inಗೆ ಭೇಟಿ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ನಗರದ ಕೋಟೆ ಪ್ರದೇಶದ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರ ಕಚೇರಿ–ಮೊ.9480843023, ಕೌಲ್ ಬಜಾರ್ 1ನೇ ಗೇಟ್ ಹತ್ತಿರದ ಡಾ.ಬಿ.ಆರ್.ಅಂಬೇಡ್ಕರ್ ಭವನದ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ–ಮೊ.9480843073, ಸಂಡೂರಿನ ಸಿಡಿಪಿಒ ಕಚೇರಿ ಹತ್ತಿರದ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ–ಮೊ.9480843079 ಮತ್ತು ಸಿರುಗುಪ್ಪದ ವಿನಾಯಕ ನಗರದ ಈಡಿಗರ ಶೀನಪ್ಪ ಲೇಔಟ್ ನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ–ಮೊ.9480843078 ಗೆ ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಚಿದಾನಂದಪ್ಪ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸೆ.16 ರಂದು ಹಿರಿಯ ನಾಗರಿಕರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ,**

ಸೆ.10–ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಅಂಗವಾಗಿ ಜಿಲ್ಲೆಯಲ್ಲಿ ಹಿರಿಯ ನಾಗರಿಕರಿಗೆ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸೆ.16 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಕಂಟೋನ್‌ಮೆಂಟ್‌ನ ಎನ್‌ಸಿಸಿ ಆಫೀಸ್ ಹಿಂಭಾಗದ ಬಳ್ಳಾರಿ ವೈದ್ಯಕೀಯ ಸಂಸ್ಥೆ ಹಾಗೂ ಸಂಶೋಧನಾ ಕೇಂದ್ರ (ಬಿಎಂಸಿಆರ್‌ಸಿ) ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಹೆಚ್. ಗೋವಿಂದಪ್ಪ ಅವರು ತಿಳಿಸಿದ್ದಾರೆ.

*ಕ್ರೀಡಾ ಸ್ಪರ್ಧೆಗಳು:*

60 ರಿಂದ 70 ವರ್ಷದವರಿಗೆ ಮ್ಯೂಜಿಕಲ್ ಚೇರ್, 60 ರಿಂದ 69 ವರ್ಷ ಮತ್ತು 70 ವರ್ಷ ಮೇಲ್ಪಟ್ಟವರಿಗೆ ಬಿರುಸಿನ ನಡಿಗೆ, 60 ರಿಂದ 69 ವರ್ಷ ಮತ್ತು 70 ವರ್ಷ ಮೇಲ್ಪಟ್ಟವರಿಗೆ ಬಕೆಟ್‌ನಲ್ಲಿ ಬಾಲ್ ಎಸೆಯುವುದು. ಇದರಲ್ಲಿ ಪುರುಷರು ಮತ್ತು ಮಹಿಳೆಯರು ಭಾಗವಹಿಸಬಹುದು.

*ಸಾಂಸ್ಕೃತಿಕ ಸ್ಪರ್ಧೆಗಳು:*

60 ರಿಂದ 69 ವರ್ಷ ಮತ್ತು 70 ವರ್ಷ ಮೇಲ್ಪಟ್ಟವರಿಗೆ ಗಾಯನ ಸ್ಪರ್ಧೆ ಮತ್ತು 60 ರಿಂದ 69 ವರ್ಷ ಮತ್ತು 70 ವರ್ಷ ಮೇಲ್ಪಟ್ಟವರಿಗೆ ಏಕಪಾತ್ರಾಭಿನಯ. ಇದರಲ್ಲಿ ಪುರುಷರು ಮತ್ತು ಮಹಿಳೆಯರು ಭಾಗವಹಿಸಬಹುದು.

ಸೂಚನೆ:

ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸುವ ಹಿರಿಯ ನಾಗರಿಕರು ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ ಮತ್ತು ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಗವಹಿಸುವ ಹಿರಿಯ ನಾಗರಿಕರು ಕ್ರೀಡಾಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ. ಯಾವುದಾದರೂ ಒಂದು ಸ್ಪರ್ಧೆಗೆ ಮಾತ್ರ ಅವಕಾಶ ಇರುತ್ತದೆ. ಆಸಕ್ತ ಹಿರಿಯ ನಾಗರಿಕರು ತಮ್ಮ ವಯಸ್ಸಿನ ದೃಢೀಕರಣಕ್ಕಾಗಿ ಆಧಾರ್ ಕಾರ್ಡ್ ಪ್ರತಿ ತರಬೇಕು.

ಹೆಚ್ಚಿನ ಮಾಹಿತಿಗಾಗಿ ತಾಲೂಕು ಮಟ್ಟದ ಎಂಆರ್‌ಡಬ್ಲ್ಯೂ ಸಿ.ರಾಣಿ (ಬಳ್ಳಾರಿ/ಕಂಪ್ಲಿ) ಮೊ.8880875620, ಸಾಬೇಶ್ (ಸಿರುಗುಪ್ಪ) ಮೊ.9743509698, ಸಿ.ಕರಿಬಸಜ್ಜ (ಸಂಡೂರು) ಮೊ.9632052270, ಆರ್.ರೇವಣ್ಣ (ಕುರುಗೋಡು) ಮೊ.9538000887 ಹಾಗೂ ಕಚೇರಿ ದೂ.08392–267886 ಮತ್ತು ಯೋಜನಾ ಸಹಾಯಕ ಜಿ.ಚಿದಾನಂದ ಮೊ.9972813152 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರತಿಭೆ ಅನಾವರಣಗೊಳ್ಳಲು ಉತ್ತಮ ವೇದಿಕೆಯ ಅವಶ್ಯಕ : ಅಭಿನವ ಪಂಚಾಕ್ಷರ ಶ್ರೀಗಳು



**ಮಲ್ಲಮ್ಮ ನುಡಿವಾರ್ತೆ ಕೊಪ್ಪಳ :**

ಯಾವುದೇ ಸ್ಪರ್ಧೆಗಳಿರಲಿ ತೀರ್ಪುಗಾರರು ಅಚ್ಚುಕಟ್ಟಾದ ನ್ಯಾಯಯುತ ತೀರ್ಪು ನೀಡುವುದರೊಂದಿಗೆ ಪ್ರತಿಭಾವಂತರಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ ಎಂದು ರಾಜೂರು ಅಡ್ನೂರು ಬೃಹನ್ಮಠದ ಪೂಜ್ಯರಾದ ಶ್ರೀ ಅಭಿನವ ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಕುಕನೂರ ತಾಲೂಕಿನ ರಾಜೂರು ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ ಯಲಬುರ್ಗಾ ಕುಕನೂರು ಉಭಯ ತಾಲೂಕ ಮಟ್ಟದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ 2025 26 ನೇ ಸಾಲಿನ ಕ್ರೀಡಾಕೂಟದ ದಿವ್ಯ ಸಾನಿಧ್ಯವನ್ನು ವಹಿಸಿದ್ದ ಶ್ರೀ ಅಭಿನವ ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡುತ್ತಾ ಶಾಲ ಕ್ರೀಡಾಕೂಟದಲ್ಲಿ ಅನೇಕ ಅದ್ಭುತ ಕ್ರೀಡಾ ಪ್ರತಿಭಾವಂತರನ್ನು ಹೊಂದಿದ್ದು ಅವರ ಪ್ರತಿಭೆ ಅನಾವರಣಗೊಳ್ಳಲು ಉತ್ತಮ ವೇದಿಕೆಯ ಅವಶ್ಯಕತೆ ಆಗಿರುತ್ತದೆ ಆದ್ದರಿಂದ ತೀರ್ಪುಗಾರರು ಎಲ್ಲಾ ಸ್ಪರ್ಧಾಳಗಳನ್ನು ನಿಮ್ಮ ಮನೆಯ ಮಕ್ಕಳು ಎಂದು ಭಾವಿಸಿ ಮಕ್ಕಳ ಭವಿಷ್ಯಕ್ಕೆ ಹಾಕದಂತೆ ನ್ಯಾಯಯುತವಾದ ತೀರ್ಪು ನೀಡಬೇಕು ಎಂದು ಹೇಳಿದರು.

ಕ್ರೀಡಾ ಧ್ವಜಾರೋಹಣ ನೆರವೇರಿಸಿದ ಕುಕನೂರು ಯಲಬುರ್ಗಾ ಉಭಯ ತಾಲೂಕುಗಳ ಪ್ರಭಾರಿ ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕ ಗೌಡ ಮಾತನಾಡುತ್ತಾ ಗೊಂದಲ ಹಾಗೂ ವಂಚನೆ ಇಲ್ಲದೆ ಕ್ರೀಡಾ ಸ್ಪರ್ಧಿಗಳು ತಮ್ಮ ಪ್ರತಿಭೆಯನ್ನು ಹೊರ ಹಾಕಬೇಕು ತೀರ್ಪುಗಾರರು ನಿಷ್ಪಕ್ಷಪಾತವಾಗಿ ನಡೆದುಕೊಳ್ಳಬೇಕು ಉತ್ತಮ ಪ್ರತಿಭೆಗಳಿಗೆ ಪ್ರೋತ್ಸಾಹ ಅವಶ್ಯಕತೆವಾಗಿದ್ದು ಸೋಲು ಗೆಲುವುಗಳ ಲೆಕ್ಕಾಚಾರವಿಲ್ಲದೆ ಕ್ರೀಡಾ ಸ್ಪೂರ್ತಿಯಿಂದ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಿ ಎಂದು ಹೇಳಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮಂಜುಳಾ ಮಾಲಗಿತ್ತಿ ಗುಂಡು ಎಸೆಯುವುದರೊಂದಿಗೆ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು. ಕರ್ನಾಟಕ ರಾಜ್ಯ ದೈಹಿಕ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಉಮೇಶ್ ಕಂಬಳಿ ಸ್ಪರ್ದಾಳುಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

ತಾಲೂಕ ದೈಹಿಕ ಶಿಕ್ಷಣ ಪರಿವೀಕ್ಷಕ ವೀರಭದ್ರಪ್ಪ ಅಂಗಡಿ, ಶಾಲಾ ಮುಖ್ಯೋಪಾಧ್ಯಾಯ ವೀರಣ್ಣ ಮೆಣಸಿನಕಾಯಿ, ಪ್ರಮುಖರಾದ ಮಹೇಶ್ ಸಬರದ, ಎಸ್ ವಿ ಧರಣ, ಮಾರುತಿ ತಳವಾರ, ಪೀರ್ ಸಾಬ್ ದಫೆದಾರ್, ಪ್ರಭು ಶಿವನಗೌಡ, ಭೀಮರೆಡ್ಡಿಪ್ಪ ಮಾದೇನೂರ್, ದೇವೇಂದ್ರಪ್ಪ ಬಡಿಗೇರ, ಪಕೀರಸಾಬ ರಾಜೂರ, ಶೇಖಪ್ಪ ಮೂಲಿಮನಿ, ವಿರುಪಾಕ್ಷಪ್ಪ ದೊಡ್ಮನಿ, ಪ್ರಕಾಶ್ ಹಿರೇಮನಿ, ಶಿವರಾಜ್ ದೊಡ್ಮನಿ, ಪಂಚಾಯಿತಿ ಸದಸ್ಯರು ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

## ಸಂತ ಶ್ರೀ ಸೇವಾಲಾಲ್ ಮಹಾರಾಜರ ಭಾವ ಚಿತ್ರಕ್ಕೆ ವಿಕೃತಿ ಮೆರೆದ ಕಿಡಗೇಡಿಗಳು!!



**ಮಲ್ಲಮ್ಮ ನುಡಿ ವಾರ್ತೆ ಕುಕನೂರ :**

ಸೋಮವಾರ ಬೆಳಗ್ಗೆ ಈ ಘಟನೆ ತಿಳಿಯುತ್ತಿದ್ದಂತೆ, ಬಂಜಾರ ಸಮಾಜದ ಯುವಕರು, ಹಿರಿಯರು, ಸರಿಸುಮಾರು ನೂರಾರು ಜನ ಜಮಾಯಿಸಿ ಧರ್ಮ ಗುರುಗಳಿಗೆ ಆದ ಅವಮಾನವನ್ನು ಖಂಡಿಸಿದರು, ಪರಿಸ್ಥಿತಿಯ ಸೂಕ್ಷ್ಮತೆಯನ್ನು ಅರಿತ ಯಲಬುರ್ಗಾ ಪೊಲೀಸ್ ವೃತ್ತದ ಸಿಪಿಐ ಮೌನೇಶ್ ಪಾಟೀಲ್ ಭೇಟಿ ನೀಡಿ, ಸ್ಥಳ ಪರಿಶೀಲಿಸಿ ಬಳಿಕ ಸಮಾಜದ ಮುಖಂಡರೊಂದಿಗೆ ಮಾತನಾಡಿ, 'ಈ ಹೇಯ ಕೃತ್ಯವನ್ನು ವಿಕೃತ ಮನಸ್ಸುಳ್ಳವರು ಮಾಡಿದ್ದಾರೆ ಎಂದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ, ಈ ಕಿಡಗೇಡಿಗಳನ್ನು ಪತ್ತೆ ಹಚ್ಚಿ ಸೂಕ್ತ ಕಾನೂನು ಕ್ರಮ ಕೈಗೊಳ್ಳುತ್ತೇವೆ' ಈ ಘಟನೆ ಖಂಡನೀಯ ಎಂದು ಬಂಜಾರ ಸಮಾಜದ ಮುಖಂಡರಿಗೆ ಸಮಜಾಯಿಸಿ ನೀಡಿದರು.

ಈ ವೇಳೆಯಲ್ಲಿ ಮಾಧ್ಯಮದೊಂದಿಗೆ ಬಂಜಾರ ಸಮಾಜದ ಮುಖಂಡ ಸುರೇಶ್ ಬಳೂಟಗಿ ಮಾತನಾಡಿ ನಾವು ನಿನ್ನೆ ಒಳಮಿಸಲಾತಿಯಲ್ಲಿ ನಮಗಾದ ಅನ್ಯಾಯದ ವಿರುದ್ಧ ಪ್ರತಿಭಟನೆ ಹಮ್ಮಿಕೊಂಡಿದ್ದೆವು, ಇದನ್ನು ಸಹಿಸದ ಅನ್ಯಜಾತಿಯವರು ಈ ಕೃತ್ಯ ಮಾಡಿದ್ದಾರೆ ಎಂದು ನಮಗೆ ಅನುಮಾನವಿದೆ, ಹಾಗಾಗಿ ಪೊಲೀಸ್ ಇಲಾಖೆ ಕುಲಂಕುಶವಾಗಿ ತನಿಖೆ ಮಾಡಿ ತಪ್ಪಿತಸ್ಥರನ್ನು ತಕ್ಕ ಶಿಕ್ಷೆ ನೀಡಬೇಕು. ನಮ್ಮ ಧರ್ಮಗುರುಗಳನ್ನು ಅವಮಾನಿಸಿದ ಕಿಡಿಗೇಡಿಗಳಿಗೆ ಗಂಭೀರ ಶಿಕ್ಷೆ ಆಗಬೇಕು, ಒಂದು ವೇಳೆ ಕಿಡಗೇಡಿಗಳು ಸಿಗದೇ ಇದ್ದ ಪಕ್ಷದಲ್ಲಿ ಈ ಘಟನೆಯನ್ನು ಖಂಡಿಸಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಿದ್ದೇವೆ' ಎಂದರು.

ಈ ಘಟನೆಗೆ ಸಂಬಂಧಿಸಿದಂತೆ ಈಗಾಗಲೇ ಕುಕನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು. ಪೊಲೀಸರು ತನಿಖೆಯನ್ನು ಆರಂಭಿಸಿದ್ದಾರೆ.

ಇದೇ ತರಹದ ಘಟನೆ ಇದೇ ದಿನ ರಾತ್ರಿ ಇದೇ ಗುದ್ನೆಪ್ಪನ ಮಠ ಪ್ರದೇಶದಲ್ಲಿರುವ ಶ್ರೀ ರೇಣುಕಾಚಾರ್ಯರ ವೃತ್ತದಲ್ಲಿ ನಡೆದಿರುವ ಮಾಹಿತಿ ಲಭ್ಯವಾಗಿದೆ.

ಈ ಸಂದರ್ಭದಲ್ಲಿ ಮುಖಂಡರಾದ ಮೇಘರಾಜ್ ಬಳಗೇರಿ, ಹಂಪಣ್ಣ ಕಟ್ಟಿಮನಿ, ಕುಮಾರ್ ಬಳಗೇರಿ, ಜಿತು ನಾಯಕ್, ಯಮನೂರ ಭಾನಪೂರ್, ಪ್ರಕಾಶ್ ಬಳಗೇರಿ, ಮಹೇಶ್ ಕಾರಭಾರಿ, ತಿರುಪತಿ ತಲ್ಲೂರು, ಕಿರಣ್ ರಾಥೋಡ್, ನಾಗರಾಜ್ ಭಾನಾಪುರ್, ಸೋಮಪ್ಪ ಚಿಕೇನಕೊಪ್ಪ, ಅರ್ಜುನ್ ಕಾರಭಾರಿ, ದುರ್ಗೇಶ್ ಕಟ್ಟಿಮನಿ, ಹನುಮಂತಪ್ಪ ಚವ್ಹಾಣ್, ತಿರುಪತಿ ಕಟ್ಟಿಮನಿ ಇನ್ನುಳಿದಂತೆ ಬಂಜಾರ ಸಮುದಾಯದ ಪ್ರಮುಖ ಯುವಕರು ಹಾಗೂ

> ನಮ್ಮ ಧರ್ಮ ಗುರುಗಳಾದ ಸಂತ ಶ್ರೀ ಸೇವಾಲಾಲ್ ಮಹಾರಾಜ್ ರ ವೃತ್ತದಲ್ಲಿ ಪೂಜ್ಯರ ಭಾವಚಿತ್ರವಿರುವ ಪೋಸ್ಟರ್ ಅನ್ನು ಒಂದು ಮಾರಕಾಸ್ತದಿಂದ ಹರಿದು ಹಾಕಲಾಗಿದೆ. ಈ ಕೃತ್ಯ ಮಾಡಿದಂಥ ಕಿಡಿಗೇಡಿಗಳಿಗೆ ಪೊಲೀಸ್ ಲಾಟಿಯ ರುಚಿ ತೋರಿಸಬೇಕು, ಇಂತಹ ಘಟನೆಗಳು ಇನ್ಯಾವುದೇ ಸಮಾಜದ ಗುರುಗಳಿಗೆ ಅವಮಾನವಾಗುವಂತಹ ಪ್ರಸಂಗ ನಡೆಯಬಾರದು.
>
> ಈ ಘಟನೆಯನ್ನು ಪೊಲೀಸ್ ಇಲಾಖೆ ಗಂಭೀರವಾಗಿ ತೆಗೆದುಕೊಂಡು ತಪ್ಪಿದಸ್ಥರಾಗಿರುದ್ಧ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಬೇಕು'
>
> –ಯಮನೂರಪ್ಪ ಕಟ್ಟಿಮನಿ
>
> ಬಳಗೇರಿ ಗ್ರಾಮ ಪಂಚಾಯತ್ ಸದಸ್ಯ, ಕಕ್ಕಿಹಳ್ಳಿ ತಾಂಡ

## ಶಾಲಾ ಕೌಂಪೌಂಡ ನಿರ್ಮಾಣಕ್ಕೆ ದೇಣಿಗೆ ನೀಡಿದ ವಿದ್ಯಾರ್ಥಿನಿ

**ಮಲ್ಲಮ್ಮ ನುಡಿವಾರ್ತೆ ಕೊಪ್ಪಳ :**

ತಾಲೂಕಿನ ಬಹದ್ದೂರಬಂಡಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 7ನೇ ತರಗತಿ ಅಧ್ಯಾಯನ ಮಾಡುತ್ತಿರುವ ವಿದ್ಯಾರ್ಥಿನಿ ಪೀಜಾ ಸಣ್ಣಮಸೂತಿ ಶಾಲಾ ಕೌಂಪೌಂಡ್ ಎತ್ತರ ಮಾಡಲು ಹಮ್ಮಿಕೊಂಡಿರುವ ಅಭಿಯಾನಕ್ಕೆ ರೂ.5001ಗಳನ್ನು ದೇಣಿಗೆ ನೀಡಿದ್ದಾಳೆ.

ವಿದ್ಯಾರ್ಥಿನಿಯಾದ ಪೀಜಾ ಸಣ್ಣ ಮಸೂತಿ ತಮ್ಮ ತಾಯಿಯು ಸಂಗ್ರಹಿಸಲು ನೀಡುತ್ತಿದ್ದ ಹಣವನ್ನು ಶಾಲೆಗೆ ದೇಣಿಗೆ ನೀಡಿದ್ದಾಳೆ. ಶಾಲಾ ಕೌಂಪೌಂಡ್ ಎತ್ತರ ಕಡಿಮೆಯಾಗಿರುವ ಪ್ರಯುಕ್ತ ಅದನ್ನು ಎತ್ತರ ಮಾಡುವ ನಿಟ್ಟಿನಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು, ಶಾಲೆಯ ಹಳೆಯ ವಿದ್ಯಾರ್ಥಿಗಳ ಹಾಗೂ ದಾನಿಗಳ ಸಭೆಯನ್ನು ಕರೆದಿದ್ದರು. ಈ ಸಭೆಯ ವಿಚಾರ ವಿದ್ಯಾರ್ಥಿಗೆ ಗೊತ್ತಾದ ಪ್ರಯುಕ್ತ ತಾನು ಕಲಿಯುತ್ತಿರುವ ಶಾಲೆಗೆ ಅಳಿಲು ಸೇವೆ ಇರಲಿ ಎಂಬ ಉದ್ದೇಶದಿಂದ ಕೂಡಿಟ್ಟ ರೂ.5001 ಹಣ ದೇಣಿಗೆ ನೀಡಿ ಎಲ್ಲರಿಗೂ ಮಾದರಿಯಾಗಿದ್ದಾಳೆ.

**ವಿದ್ಯಾರ್ಥಿನಿಗೆ ಸನ್ಮಾನ :**

ಶಾಲಾ ಕೌಂಪೌಂಡ್ ಎತ್ತರ ಮಾಡುವ ಕಾರ್ಯಕ್ಕೆ ದೇಣಿಗೆ ನೀಡಿದ ಪೀಜಾ ಸಣ್ಣಮಸೂತಿ ಅವರನ್ನು ಶಾಲಾ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಮಂಜುನಾಥ ಕುರಿ, ಸದಸ್ಯ ಬಾಬಾ ಕಿಲ್ಲೇದಾರ, ಮಾಜಿ ಅಧ್ಯಕ್ಷ ಪ್ರಭು ಹೊಸಮನಿ, ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ಮೈಬೂಬ ಮಣ್ಣೂರು, ಸಿ.ಆರ್.ಪಿ. ಹನುಮಂತಪ್ಪ ಕುರಿ, ಶಾಲೆಯ ಮುಖ್ಯೋಪಾಧ್ಯಾಯ ಬೀರಪ್ಪ ಅಂಡಗಿ, ಶಿಕ್ಷಕರಾದ ಶರಣಪ್ಪಗೌಡ, ಭಾರತಿ ಉಪಾಧ್ಯಯ, ಜ್ಯೋತಿಲಕ್ಷ್ಮೀ, ಪೂರ್ಣಿಮಾ ತುಪ್ಪದ, ಮಮತಾ, ಗಂಗಮ್ಮ, ಮಾಧವಿ, ಹನುಮಪ್ಪ ಕಬ್ಬೇರ, ರಾಜಾ ಹುಸೇನ, ಗೀತಾ ಕುರಿ, ನಗ್ಮಾ, ಜಲಜಾಕ್ಷಿ, ರುಬೀನಾ, ವೀಣಾ, ಸಲೀಮಾಬೇಗಂ, ಮುಖಂಡರಾದ ಖಲಂದರಪಾಷಾ, ನಭೀಸಾಬ ಮುಂತಾದವರು ಸೇರಿ ಸನ್ಮಾನಿಸಿದ್ದಾರೆ.

## ಅಕ್ರಮ ಮರಳು ದಂಧೆ ಕೋರರ ವಿರುದ್ಧ ಪ್ರಕರಣ ದಾಖಲಿಸಿ–ಹೇಮಲತಾ ನಾಯಕ್



**ಮಲ್ಲಮ್ಮನುಡಿವಾರ್ತೆ ಕೊಪ್ಪಳ :**

ತಾಲೂಕಿನ ಹಿರೇಸಿಂದೋಗಿ ಬಳಿಯ ಹಿರೇಹಳ್ಳ ಪ್ರದೇಶದಲ್ಲಿ ಅಕ್ರಮ ಮರಳು ಗಣಿಗಾರಿಕೆ ಮಾಡುವ ಕೃತ್ಯವು ಮರುಕಳಿಸಿದ್ದು, ಅಕ್ರಮ ದಂದೆಕೋರರ ವಿರುದ್ಧ ಪ್ರಕರಣ ದಾಖಲಿಸಬೇಕೆಂದು ವಿಧಾನ ಪರಿಷತ್ ಸದಸ್ಯ ಹೇಮಲತಾ ನಾಯಕ್ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳನ್ನು ಒತ್ತಾಯಪಡಿಸಿ ಮನವಿ ನೀಡಿದರು.

ನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿಗಳಿಗೆ ಹಾಗೂ ಪೊಲೀಸ್ ಅಧಿಕಾರಿಗಳ ಕಾರ್ಯಾಲಯದಲ್ಲಿ ಪೊಲೀಸ್ ಇಲಾಖೆಗೆ ಮನವಿ ಸಲ್ಲಿಸಿ ವರದಿಗಾರರೊಂದಿಗೆ ಹೇಮಲತಾ ನಾಯಕ ಮಾತನಾಡುತ್ತ ಕಳೆದ ಜೂನ್ 20ನೇ ತಾರೀಕಿನಂದು ಸರ್ಕಾರದಿಂದ ಯಾವುದೇ ಪರವಾನಿಗೆ ಪಡೆಯದೆ ಅಕ್ರಮ ಮರಳು ಸಾಗಾಣಿಕೆ ಮಾಡುವವರ ವಿರುದ್ಧ ತಾಲೂಕ ಮರಳು ಮಾನಿಟರಿಂಗ್ ಸಮಿತಿ ದಾಳಿ ನಡೆಸಿ ಕೆಲ ಬೋಟಗಳನ್ನು ಹಾಗೂ ಸಲಕರಣೆಗಳನ್ನು ವಶಪಡಿಸಿಕೊಂಡಿದ್ದು ಚಟುವಟಿಕೆಯಲ್ಲಿ ತೊಡಗಿದವರ ವಿರುದ್ಧ ಕ್ರಮ ಕೈಗೊಳ್ಳಲಾಗಿತ್ತು. ಆದರೆ ಆಕ್ರಮ ಮರಳು ದಂಧೆ ಮತ್ತೆ ತಲೆಯೆತ್ತಿಕೊಂಡಿದ್ದು ಇದರ ಜೊತೆಗೆ ತಾಲೂಕಿನ ಕಾಸನಕಂಡಿ ಗ್ರಾಮದ ಇಂಡಿಯನ್ ರಿಸರ್ವ್ ಬಟಾಲಿಯನ್ ಹತ್ತಿರ ತುಂಗಭದ್ರಾ ನದಿಯ ಇನ್ನೀರಿನ ಪಾತ್ರದಲ್ಲಿ ಸರಕಾರಕ್ಕೆ ಸಲ್ಲಿಕೆಯಾಗಬೇಕಾದುದ್ದನ್ನು ಸಹ ಪಾವತಿಸದೆ ಖಾಸಗಿ ಗುತ್ತಿಗೆದಾರನು ಅಕ್ರಮವಾಗಿ ತುಂಗಭದ್ರಾ ಒಡಲಿನ ಊಳನ್ನು ಅಕ್ರಮವಾಗಿ ಸಾಗಿಸುತ್ತಿದ್ದರು ಸಹ ಸಂಬಂಧ ಪಟ್ಟ ಅಧಿಕಾರಿಗಳು ಕಣ್ಣು ಮುಚ್ಚಿ ಕುಳಿತಿದ್ದಾರೆ ಇಂತಹ ಅಕ್ರಮದ ವಿರುದ್ಧ ಇಲ್ಲಿಯವರೆಗೂ ಯಾವುದೇ ಪ್ರಕರಣ ದಾಖಲಾಗದೆ ಇರುವುದು ವಿಪರ್ಯಾಸದ ಸಂಗತಿಯಾಗಿದೆ.

ಕಳೆದ ಎರಡು ಮೂರು ತಿಂಗಳ ಗಳಿಂದ ಜಿಲ್ಲೆಯಲ್ಲಿ ಅಕ್ರಮ ಮರಳು ಸಾಗಣಿಕೆಗೆ ಕಡಿವಾಣ ಬಿದ್ದಿದ್ದು ಈಗ ತಾಲೂಕಿನ ಹಿರೇಸಿಂದೋಗಿ, ಕೋಳೂರು ತುಂಗಭದ್ರಾ ನದಿ ಪಾತ್ರದಲ್ಲಿ ಅಕ್ರಮ ಮರಳು ಹಾಗೂ ಹೋಳು ಮಾಫಿಯಾ ಪ್ರಾರಂಭವಾಗಿದ್ದು ಇಂತಹ ಸಮಾಜಘಾತಕ ಕೃತ್ಯಗಳ ಹಿಂದೆ ಕೆಲ ಪ್ರಭಾವಿ ವ್ಯಕ್ತಿಗಳ ಬೆಂಬಲ ಇರುವುದರಿಂದ ಸಂಬಂಧಿಸಿದ ಅಧಿಕಾರಿಗಳು ಕ್ರಮ ಕೈಗೊಳ್ಳಲು ಮೀನಾ ಮೇಷ ಎಣಿಸುತ್ತಿರುವುದು ಸ್ಪಷ್ಟವಾಗಿ ಕಂಡು ಬರುತ್ತಿದೆ ಆದ್ದರಿಂದ ಜಿಲ್ಲೆಯ ಪ್ರಕೃತಿ ಸಂಪತ್ತನ್ನು ಉಳಿಸಿ ಈ ಪ್ರದೇಶದ ಭೂಗರ್ಭದಲ್ಲಿ ಲಭ್ಯವಿರುವ ಖನಿಜಗಳು ಮತ್ತು ನದಿಗಳಿಂದ ದೊರೆಯುವ ಮರಳು ಶಾಶ್ವತವಾಗಿ ಅಭಿವೃದ್ಧಿಗೆ ಹಿತವಾಗಬೇಕು ಆದ್ದರಿಂದ ದುರುಪಯೋಗ ಹಾಗೂ ಅಕ್ರಮ ಸಾಗಣೆ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಒತ್ತಾಯಿಸಿ ಮನವಿ ಸಲ್ಲಿಸಲಾಗಿದೆ ಎಂದು ಹೇಳಿದರು.

ಈ ವೇಳೆಯಲ್ಲಿ ಪ್ರಮುಖರಾದ ಡಾ. ಬಸವರಾಜ್ ಕ್ಯಾವಟರ್, ಗಣೇಶ್ ಹೊರತಟ್ನಾಳ ಹಾಗೂ ಇನ್ನಿತರರು ಇದ್ದರು.

ಜಾಹಿರಾತಿಗಾಗಿ ಇಂದೇ ಸಂಪರ್ಕಿಸಿ:9449732000

# ಪ್ರಧಾನಮಂತ್ರಿ ಸುರಕ್ಷಾ ಭೀಮಾ ಯೋಜನೆ ನೋಂದಣಿ ಅಭಿಯಾನಕ್ಕೆ ಸಿಇಓ ಕುರೇರ ಚಾಲನೆ




ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನಿಂದ ಕಟಗೇರಿ ಗ್ರಾಮದ ಇಂದಿರಾಗಾಂಧಿ ಸ್ವ-ಸಹಾಯ ಸಂಘಕ್ಕೆ 5.5 ಲಕ್ಷ ರೂ.ಗಳ ಸಾಲದ ಚೆಕ್‌ನ್ನು ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ್ ವಿತರಿಸಿದರು. ಈ ಸಂದರ್ಭದಲ್ಲಿ ಬಿಡಿಸಿಸಿ ಬ್ಯಾಂಕ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಿದ್ದನಗೌಡ ನೀಲಪ್ಪನವರ ಸೇರಿದಂತೆ ಇತರರು ಇದ್ದರು.

**ಮಲ್ಲಮ್ಮ ನುಡಿ ವಾರ್ತೆ**
**ಬಾಗಲಕೋಟೆ:**

ಸೆ.10–ಗುಳೇದಗುಡ್ಡ ತಾಲೂಕಿನ ಕಟಗೇರಿ ಗ್ರಾಮ ಪಂಚಾಯತ ಸಭಾಭವನದಲ್ಲಿ ಹಮ್ಮಿಕೊಂಡ ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಮತ್ತು ಜೀವನ ಜ್ಯೋತಿ ಬಿಮಾ ಯೋಜನೆಗಳ ನೋಂದಣಿ ಅಭಿಯಾನಕ್ಕೆ ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಚಾಲನೆ ನೀಡಿದರು.

ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಹಾಗೂ ಎನ್.ಆರ್.ಎಲ್.ಎಂ ಸಹಯೋಗದಲ್ಲಿ ಹಮ್ಮಿಕೊಂಡ ನೋಂದಣಿ ಅಭಿಯಾನ ಪ್ರಾರಂಭಗೊಳಿಸಿ ಮಾತನಾಡಿದ ಅವರು, ಪ್ರಧಾನಮಂತ್ರಿ ಸುರಕ್ಷಾ ಬಿಮಾ ಯೋಜನೆಯಡಿ ನೋಂದಾಯಿಸಿದಲ್ಲಿ ಆಕಸ್ಮಿಕ ಮರಣ ಅಥವಾ ಅಂಗವೈಕಲ್ಯಕ್ಕೆ ಒಳಗಾದವರಿಗೆ 2 ಲಕ್ಷ ರೂ.ಗಳವರೆಗೆ ವಿಮಾ ರಕ್ಷಣೆಯನ್ನು ಪಡೆಯಬಹುದಾಗಿದೆ. ವರ್ಷಕ್ಕೆ ಕೇವಲ 20 ರೂ.ಗಳನ್ನು ಮಾತ್ರ ಹಣ ತುಂಬಬೇಕು ಎಂದರು.

ಪ್ರಧಾನಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ ಕೂಡಾ ಒಂದು ವಿಮೆ ಯೋಜನೆಯಾಗಿದ್ದು, ಇದು ಒಂದು ವರ್ಷದ ಅವಧಿಗೆ ಮಾತ್ರ ಇರುತ್ತದೆ. ಯೋಜನೆ ಮುಂದುವರಿಸಲು ಪ್ರತಿ ವರ್ಷ ನವೀಕರಿಸಿಕೊಳ್ಳಬೇಕಾಗುತ್ತದೆ. ಎರಡೂ ಯೋಜನೆಗಳ ಸದುಪಯೋಗವನ್ನು ಜನರು ಪಡೆದುಕೊಂಡು ತಮ್ಮ ಕುಟುಂಬದ ಭವಿಷ್ಯವನ್ನು ಭದ್ರಗೊಳಿಸಲು ಸಲಹೆ ನೀಡಿದರು.

ಕಟಗೇರಿ ಗ್ರಾಮ ಪಂಚಾಯತಿ ಅಧ್ಯಕ್ಷೆ ಸುಮಿತ್ರ ಹುಚ್ಚಪ್ಪ ದ್ಯಾವನ್ನವರ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಬಾಗಲಕೋಟೆ ಜಿಲ್ಲಾ ಸಹಕಾರಿ ಬ್ಯಾಂಕ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಿದ್ದನಗೌಡ ನೀಲಪ್ಪನವರ, ಜಿ.ಪಂ ಪ್ರಭಾರಿ ಯೋಜನಾ ನಿರ್ದೇಶಕ ಶ್ಯಾಮಸುಂದರ ಕಾಂಬಳೆ, ಜಿಲ್ಲಾ ಪಂಚಾಯತ ಸಹಾಯಕ ಯೋಜನಾಧಿಕಾರಿ ಭೀಮಪ್ಪ ತಳವಾರ, ಗುಳೇದಗುಡ್ಡ ತಾಲೂಕಾ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಿಕಾರ್ಜುನ ಬಡಿಗೇರ, ನಬಾರ್ಡ ಜಿಲ್ಲಾ ವ್ಯವಸ್ಥಾಪಕ ಎನ್.ಎಸ್.ಸಾರಂಗಿ, ಜಿಲ್ಲಾ ಅಗ್ರಣಿ ಬ್ಯಾಂಕಿನ ವ್ಯವಸ್ಥಾಪಕ ರಾಜಶೇಖರ ಹೂಗಾರ, ಬಿಡಿಸಿಸಿ ಬ್ಯಾಂಕ್ ಕಟಗೇರಿ ಶಾಖೆಯ ಮ್ಯಾನೇಜರ ಸುಮಂಗಲಾ ಟಿ.ಎ., ಮಂಜುನಾಥ ರೆಡ್ಡಿ, ರಾಮನಗೌಡ ಗೌಡರ ಉಪಸ್ಥಿತರಿದ್ದರು.

# ಸೆ.16 ಮುಧೋಳದಲ್ಲಿ ಉದ್ಯೋಗ ಮೇಳ



**ಮಲ್ಲಮ್ಮ ನುಡಿ ವಾರ್ತೆ**
**ಬಾಗಲಕೋಟೆ:**

ಸೆ.10–ಜಿಲ್ಲೆಯ ಮುಧೋಳ ನಗರದ ದಾನಮ್ಮದೇವಿ ದೇವಸ್ಥಾನದ ಆವರಣದಲ್ಲಿ ಸೆಪ್ಟೆಂಬರ 16 ರಂದು ವಸ್ತು ಪ್ರದರ್ಶನ ಮತ್ತು ಉದ್ಯೋಗ ಮೇಳವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇತ್ತೀಚೆಗೆ ಜರುಗಿದ ಜಿಲ್ಲಾ ಕೌಶಲ್ಯ ಮಿಷನ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಆರ್.ಬಿ.ತಿಮ್ಮಾಪೂರ ಫೌಂಡೇಶನ್ ಸಹಯೋಗದೊಂದಿಗೆ ಉದ್ಯೋಗ ಮೇಳ ಆಯೋಜಿಸಲಾಗುತ್ತಿದ್ದು, ಈ ಮೇಳದಲ್ಲಿ 30ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿವೆ. ಮೇಳದಲ್ಲಿ ವಿವಿಧ ಇಲಾಖೆಗಳ ಸೇವೆ ಹಾಗೂ ಪಂಚ ಗ್ಯಾರಂಟಿ ಯೋಜನೆಗಳ ಕುರಿತ ಮಾಹಿತಿ ಮತ್ತು ವಸ್ತು ಪ್ರದರ್ಶನ ಸಹ ಏರ್ಪಡಿಸಲಾಗುತ್ತಿದೆ ಎಂದರು.

ಉದ್ಯೋಗ ಮೇಳ ಅಂದು ಬೆಳಿಗ್ಗೆ 9.30ರಿಂದ ಸಂಜೆ 4 ಗಂಟೆವರೆಗೆ ನಡೆಯಲಿದ್ದು, ಎಸ್.ಎಸ್.ಎಲ್.ಸಿ, ಪಿಯುಸಿ, ಐಟಿಐ, ಡಿಪ್ಲೋಮಾ, ಪದವಿಧರರು, ಸ್ನಾತಕೋತ್ತರ ಹಾಗೂ ವೃತ್ತಿಪರ ಪದವೀಧರರು ಭಾಗವಹಿಸಬಹುದಾಗಿದೆ.

ಅಭ್ಯರ್ಥಿಗಳು ನೋಂದಣಿ ಸಹ ಮಾಡಿಕೊಳ್ಳಬಹುದು. ಮೇಳದಲ್ಲಿ 18 ರಿಂದ 35 ವರ್ಷದೊಳಗಿನ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಪಾಲ್ಗೊಳ್ಳಬಹುದಾಗಿದೆ. ಅಭ್ಯರ್ಥಿಗಳು ಮೇಳಕ್ಕೆ ಬರುವಾಗ ಅಂಕಪಟ್ಟಿ, ಆಧಾರ ಕಾರ್ಡ ಮತ್ತು ಕನಿಷ್ಠ 10 ಬಯೋಡಾಟಾಗಳೊಂದಿಗೆ ಹಾಜರಾಗಬೇಕೆಂದು ತಿಳಿಸಿದರು.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಮಾತನಾಡಿ, ನಲ್‌ಜಲ್ ಮಿತ್ರ ಯೋಜನೆಯಡಿ ಗ್ರಾಮ ಪಂಚಾಯತಿಗಳಿಂದ ಗ್ರಾಮೀಣ ಭಾಗದ ಸ್ವ-ಸಹಾಯ ಸಂಘದ ಇಬ್ಬರು ಮಹಿಳಾ ಅಭ್ಯರ್ಥಿಗಳಿಗೆ ತರಬೇತಿಯನ್ನು ನೀಡಲು ಉದ್ದೇಶಿಸಲಾಗಿದೆ. ಅದರಂತೆ ಈಗಾಗಲೇ ಬಾಗಲಕೋಟೆಯಲ್ಲಿ ಒಂದು ತಂಡದ ತರಬೇತಿ ಪ್ರಾರಂಭವಾಗಿದ್ದು, ಮುಂದಿನ ತಂಡವನ್ನು ಹುನಗುಂದ ತಾಲೂಕಿನ ಜಿಟಿಟಿಸಿಯಲ್ಲಿ ಹಮ್ಮಿಕೊಳ್ಳಲು ಕ್ರಮವಹಿಸಲು ಕೌಶಲ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಜಿಲ್ಲಾ ಕೌಶಲ್ಯ ಅಭಿವೃದ್ಧಿ ಅಧಿಕಾರಿ ಗುರುಪಾದಯ್ಯ ಹಿರೇಮಠ, ಜಂಟಿ ಕೈಗಾರಿಕೆ ನಿರ್ದೇಶಕ ಪ್ರಶಾಂತ ಬಾರಿಗಿಡದ, ಸರಕಾರಿ ಐಟಿಐ ಕಾಲೇಜಿನ ಪ್ರಾಚಾರ್ಯ ಎಸ್.ಎಸ್.ಹಿರೇಮಠ ಸೇರಿದಂತೆ ಇತರೆ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಜಿಲ್ಲೆಯ ನಿರುದ್ಯೋಗ ಯುವಕ ಯುವತಿಯರು ಉದ್ಯೋಗ ಮೇಳದಲ್ಲಿ ಭಾಗವಹಿಸಿ, ಇದರ ಸದುಪಯೋಗ ಪಡಿಸಿಕೊಳ್ಳಬೇಕು. ವಿಶ್ವ ಕೌಶಲ್ಯ ಮತ್ತು ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಿಂದ ವಿಶ್ವ ಕೌಶಲ್ಯ ಸ್ಪರ್ಧೆಯನ್ನು ಪ್ರತಿ 2 ವರ್ಷಗಳಿಗೊಮ್ಮೆ ಆಯೋಜಿಸಲಾಗುತ್ತಿದ್ದು, 2026ನೇ ಸಾಲಿನ ಕೌಶಲ್ಯ ಸ್ಪರ್ಧೆಯು ಚೀನಾದ ಶ್ಯಾಂಘೈನಲ್ಲಿ ನಡೆಯಲಿದೆ. ಈ ಸ್ಪರ್ಧೆಯಲ್ಲಿ ಭಾಗವಹಿಸಲು ಸೆಪ್ಟೆಂಬರ 30 ಕೊನೆಯ ದಿನವಾಗಿರುತ್ತದೆ. ಆಸಕ್ತ ಅಭ್ಯರ್ಥಿಗಳು ವೆಬ್‌ಸೈಟ್ ತಿತಿತಿ. ಇುಟಟುಟಿಜುಚಿಜುರುಣಚಿಟ.ರಠತ. ಟಿ ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ಯುವನಿಧಿ ಯೋಜನೆಯಡಿ ನೋಂದಾಯಿಸಿ ನೇರ ನಗದು ವರ್ಗಾವಣೆ ಮೂಲಕ ನಿರಂತರವಾಗಿ 6 ತಿಂಗಳು ನಿರುದ್ಯೋಗ ಭತ್ಯೆ ಪಡೆದಿರುವ ಫಲಾನುಭವಿಗಳ ಕೌಶಲ್ಯ ತರಬೇತಿ ಮತ್ತು ಉದ್ಯಮಶೀಲತೆ ತರಬೇತಿಯನ್ನು ಪಡೆಯಲು ಪೋರ್ಟಲ್ http://kaushalkar.karnataka.gov.in/ ನಲ್ಲಿ ಕಡ್ಡಾಯವಾಗಿ ನೋಂದಾಯಿಸುವಂತೆ ಹಾಗೂ ಸಮೀಪದ ಸರ್ಕಾರಿ ಐಟಿಐಗಳಲ್ಲಿ ತರಬೇತಿ ಪಡೆಯಬಹುದಾಗಿದೆ.

# ಸೆ.22 ರಿಂದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ



**ಮಲ್ಲಮ್ಮ ನುಡಿ ವಾರ್ತೆ**
**ಬಾಗಲಕೋಟೆ:**

ಸೆ.10–ಜಿಲ್ಲೆಯಾದ್ಯಂತ ಸೆಪ್ಟೆಂಬರ 22 ರಿಂದ ಅಕ್ಟೋಬರ 7ರ ವರೆಗೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಯಲಿದೆ ಎಂದು ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರಾಜ್ಯದ ಎಲ್ಲ ವರ್ಗಗಳ, ಜಾತಿಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಕುರಿತು ಸಮೀಕ್ಷೆ ಮುಖಾಂತರ ಸಮಗ್ರ ಅಂಕಿ ಅಂಶಗಳನ್ನು ಸಂಗ್ರಹಿಸಿ ಅವರ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ರೂಪಿಸುವ ಸಲುವಾಗಿ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ರಾಜ್ಯಾದ್ಯಂತ ಸಮೀಕ್ಷೆ ಕಾರ್ಯ ಕೈಗೊಂಡಿದೆ ಎಂದರು.

ಸಮೀಕ್ಷೆ ಕಾರ್ಯಕ್ಕೆ ಜಿಲ್ಲಾ ಮತ್ತು ತಾಲೂಕಾ ಮಟ್ಟದಲ್ಲಿ ಸಮನ್ವಯ ಸಮಿತಿಯನ್ನು ರಚಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದರೆ, ತಾಲೂಕಾ ಮಟ್ಟದಲ್ಲಿ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯನ್ನು ಸಮನ್ವಯ ಸಮಿತಿ ರಚಿಸಲಾಗಿದೆ ಎಂದು ತಿಳಿಸಿದರು. ಸಮೀಕ್ಷೆ ಕುರಿತು ಕೈಪಿಡಿಗಳನ್ನು ಮನೆ ಮನೆಗೆ ವಿತರಿಸುವ ಹಾಗೂ ಅರಿವು ಮೂಡಿಸಲು ಸಂಬಂಧಿಸಿದ ಅಧಿಕಾರಿಗಳು ಕ್ರಮಕೈಗೊಳ್ಳಲು ಸೂಚಿಸಿದರು.

ಈಗಾಗಲೇ ಜಿಲ್ಲೆಯಿಂದ 5 ಜನ ಮಾಸ್ಟರ ಟ್ರೈನರ್‌ಗಳು ತರಬೇತಿ ಪಡೆದು–ಕೊಂಡಿದ್ದು, ಪ್ರತಿ 10 ಬ್ಲಾಕ್‌ಗಳಿಗೆ ಒಬ್ಬ ಮೇಲ್ವಿಚಾರಕರನ್ನು ನೇಮಿಸಲಾಗುತ್ತಿದೆ. 50 ಸಮೀಕ್ಷೆದಾರರಿಗೆ ಒಬ್ಬ ಮಾಸ್ಟರ ಟ್ರೈನರ್ ತರಬೇತಿ ನೀಡಲು ಕ್ರಮವಹಿಸಲು ಉದ್ದೇಶಿಸಲಾಗಿದೆ. ಸಮೀಕ್ಷೆದಾರರಿಗೆ ಎರಡು ಬಾರಿ ತರಬೇತಿಯನ್ನು ನೀಡಲಾಗುತ್ತದೆ. ತರಬೇತಿಯನ್ನು ಶೈಕ್ಷಣಿಕ ಕ್ಲಸ್ಟರ ಮಟ್ಟಗಳಲ್ಲಿ ಶಾಲಾ ಅವಧಿಯ ಬಳಿಕ ಆಯೋಜಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ಜಿಲ್ಲೆಯಲ್ಲಿ ಸಮೀಕ್ಷೆ ಕಾರ್ಯಕ್ಕೆ 7688 ಶಿಕ್ಷಕರು ಹಾಗೂ ಇತರೆ ಇಲಾಖೆಯ 2126 ನೌಕರರನ್ನು ಸಹ ಬಳಸಿಕೊಳ್ಳಲಾಗುತ್ತಿದೆ ಎಂದರು.

ಈಗಾಗಲೇ ಪ್ರತಿ ಮನೆಗಳಿಗೆ ಯುಎಚ್‌ಐಡಿ ವಿವರದೊಂದಿಗೆ ಸ್ಟಿಕರ್ ಅಂಟಿಸುವ ಕಾರ್ಯ ನಡೆದಿದೆ. ಆ್ಯಪ್ ಮೂಲಕವೇ ಸಮೀಕ್ಷೆದಾರರು ಸಮೀಕ್ಷೆ ಕಾರ್ಯ ಕೈಗೊಳ್ಳುತ್ತಿದ್ದು, ಸಮೀಕ್ಷೆದಾರರು ಮನೆ ಮನೆಗೆ ಬಂದಾಗ ಅಗತ್ಯ ಮಾಹಿತಿ ನೀಡಿ ಸಹಕರಿಸಲು ಅಪರ ಜಿಲ್ಲಾಧಿಕಾರಿಗಳು ಮನವಿ ಮಾಡಿಕೊಂಡರು. ಸಮೀಕ್ಷೆ ವೇಳೆ ಆಧಾರ ಕಾರ್ಡ ಅಗತ್ಯವಾಗಿದ್ದು, ಆಧಾರ ಕಾರ್ಡಗೆ ಜೋಡಣೆಯಾದ ಮೊಬೈಲ್ ನಂಬರಗೆ ಓಟಿಪಿ ಬರಲಿದೆ. ಆಧಾರ ಕಾರ್ಡಗೆ ಮೊಬೈಲ್ ಸಂಖ್ಯೆ ಲಿಂಕ್ ಇರದಿದ್ದರೆ ಕೂಡಲೇ ಮೊಬೈಲ್ ನಂಬರ ಲಿಂಕ್ ಮಾಡಿಸಿಕೊಳ್ಳಲು ತಿಳಿಸಿದರು.

ಉಪವಿಭಾಗಾಧಿಕಾರಿಗಳಾದ ಸಂತೋಷ ಜಗಲಾಸರ, ಶ್ವೇತಾ ಬೀಡಿಕರ ಹಾಗೂ ಆಯಾ ತಾಲೂಕಿನ ತಹಶೀಲ್ದಾರರು ವಿಡಿಯೋ ಸಂವಾದದ ಮೂಲಕ ಸಭೆಯಲ್ಲಿ ಪಾಲ್ಗೊಂಡಿದ್ದರೆ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಈರಪ್ಪ ಆಶಾಪೂರ, ಜಿಲ್ಲಾ ಸಾಂಖ್ಯಿಕ ಅಧಿಕಾರಿ ಗೌರಮ್ಮ ಸಂಕೀನ, ಕ್ಷೇತ್ರ ಶಿಕ್ಷಣಾಧಿಕಾರಿ ಜಾಸ್ಮಿನ್ ಕಿಲ್ಲೇದಾರ ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

# ನ್ಯಾಯಬೆಲೆ ಅಂಗಡಿ ಮಂಜೂರಿಗೆ ಅರ್ಜಿ

**ಮಲ್ಲಮ್ಮ ನುಡಿ ವಾರ್ತೆ**
**ಬಾಗಲಕೋಟೆ:**

ಸೆ.10–ಬಾಗಲಕೋಟೆ ತಾಲೂಕಿನ ಮುಗಳೊಳ್ಳಿ, ಬೇವೂರ, ಹೊನ್ನಾಕಟ್ಟಿ ಹಾಗೂ ಬಾದಾಮಿ ತಾಲೂಕಿನ ಬೇಲೂರ ಗ್ರಾಮಗಳಲ್ಲಿ ಹೊಸದಾಗಿ ನ್ಯಾಯಬೆಲೆ ಅಂಗಡಿ ಸ್ಥಾಪಿಸಲು ಮಂಜೂರಾತಿ ನೀಡುವ ಸಲುವಾಗಿ ಅರ್ಹ ಸಂಘ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸುವ ಸಹಕಾರಿ ಸಂಘವು ಕನಿಷ್ಟ 3 ವರ್ಷಗಳಿಂದ ಚಾಲನೆಯಲ್ಲಿದ್ದು, ಹಿಂದಿನ ಎರಡು ವರ್ಷಗಳಲ್ಲಿ ಕನಿಷ್ಟ 2 ಲಕ್ಷ ರೂ.ಗಳ ನಿರಂತರ ಬ್ಯಾಂಕ್ ಬ್ಯಾಲೆನ್ಸ್ ಹೊಂದಿರಬೇಕು. ವಿಕಲಚೇತನ ಹಾಗೂ ತೃತೀಯ ಲಿಂಗದ ವ್ಯಕ್ತಿಗಳನ್ನು ಹೊರತುಪಡಿಸಿ ಖಾಸಗಿ ವ್ಯಕ್ತಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವದಿಲ್ಲ.

ಕನಿಷ್ಟ ಎಸ್.ಎಸ್.ಎಲ್.ಸಿ ಪಾಸಾಗಿರಬೇಕು. ಅರ್ಜಿಗಳನ್ನು ಆಯಾ ತಾಲೂಕಾ ತಹಶೀಲ್ದಾರರಿಂದ ಪಡೆದುಕೊಂಡು ಭರ್ತಿ ಮಾಡಿದ ನಮೂನೆ ಎ ರಲ್ಲಿ ನಿಗದಿಪಡಿಸಿದ ದಾಖಲೆಗಳೊಂದಿಗೆ ಅಕ್ಟೋಬರ 8 ರೊಳಗಾಗಿ ಆಯಾ ತಾಲೂಕಾ ತಹಶೀಲ್ದಾರ ಕಚೇರಿಗೆ ಸಲ್ಲಿಸುವಂತೆ ಆಹಾರ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಯಚೂರು ಓಪೆಕ್ ಆಸ್ಪತ್ರೆಗೆ ನ್ಯಾ. ಹೆಚ್.ಎ.ಸಾತ್ವಿಕ್ ದಿಢೀರ್ ಭೇಟಿ; ಪರಿಶೀಲನೆ

**ಮಲ್ಲಮ್ಮ ನುಡಿ ವಾರ್ತೆ**
**ರಾಯಚೂರು:**

ಸೆಪ್ಟೆಂಬರ್ 10 (ಕರ್ನಾಟಕ ವಾರ್ತೆ): ನಗರದ ರಾಜೀವಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ (ಓಪೆಕ್) ಗೌರವಾನ್ವಿತ ಹಿರಿಯ ಶ್ರೇಣಿಯ ದಿವಾಣಿ ನ್ಯಾಯಾಧೀಶರು ಆಗಿರುವ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಹೆಚ್.ಎ.ಸಾತ್ವಿಕ್ ಅವರು ಸೆ.10ರ ಬುಧವಾರ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮಧ್ಯಾಹ್ನ 12.45ರ ಸುಮಾರಿಗೆ ಆಸ್ಪತ್ರೆಗೆ ಪ್ರವೇಶಿಸಿದ ನ್ಯಾಯಾಧೀಶರು, ಆಸ್ಪತ್ರೆಯಲ್ಲಿನ ರೋಗಿಗಳು ಮತ್ತು ಅವರ ಕುಟುಂಬದವರ ಜೊತೆ ಮಾತನಾಡಿ ಆಸ್ಪತ್ರೆಯಲ್ಲಿನ ವೈದ್ಯಕೀಯ ಸೌಕರ್ಯಗಳ ಬಗ್ಗೆ ಪರಿಶೀಲಿಸಿದರು. ಆಸ್ಪತ್ರೆಯ ಪ್ರವೇಶದ ವೇಳೆ, ಆಸ್ಪತ್ರೆಯ ಹೊರಾಂಗಣದಲ್ಲಿ ಕುಳಿತಿದ್ದ ರೋಗಿಯೊಬ್ಬರನ್ನು ನ್ಯಾಯಾಧೀಶರು ಮಾತನಾಡಿಸಿದರು. ಆಸ್ಪತ್ರೆಯ ಬಾಗಿಲು ಬಳಿ ಮಲಗಿದ್ದ ಮಹಿಳಾ ರೋಗಿಯೊಬ್ಬರಿಗೆ ವಿಚಾರಿಸಿದಾಗ, ವೈದ್ಯರಿಗಾಗಿ ಕಾಯುತ್ತಿರುವುದು ತಿಳಿಯಿತು. ಈ ರೀತಿ ರೋಗಿಗಳು ವೈದ್ಯರಿಗಾಗಿ ಕಾಯುವುದು ಆಸ್ಪತ್ರೆಯಲ್ಲಿ ತಪ್ಪಬೇಕು. ಸಂಬಂಧಿಸಿದ ವೈದ್ಯಾಧಿಕಾರಿಗಳಿಗೆ ಈ ವಿಷಯ ತಿಳಿಸಿ ಸರಿಪಡಿಸಿಕೊಳ್ಳಲು ನ್ಯಾಯಾಧೀಶರು ಸೂಚನೆ ನೀಡಿದರು.

ಯುರೋಲಾಜಿ ವಿಭಾಗ ಸೇರಿದಂತೆ ಬೇರೆ ಬೇರೆ ಕಡೆಗಳಲ್ಲಿ ಸಂಚರಿಸಿದ ನ್ಯಾಯಾಧೀಶರು, ಅಲ್ಲಿ ದಾಖಲಾಗಿದ್ದ ರೋಗಿಗಳೊಂದಿಗೆ ಮಾತನಾಡಿದರು. ಆಸ್ಪತ್ರೆಯಲ್ಲಿ ಸಿಗುವ ವಿವಿಧ ಚಿಕಿತ್ಸೆ ಹಾಗೂ ಊಟದ ವ್ಯವಸ್ಥೆ ಕುರಿತು ರೋಗಿಗಳಿಂದ ಮಾಹಿತಿ ಪಡೆದರು.

ನ್ಯೂರೋ, ಐಸಿಯು ಹಾಗೂ ನೆಪ್ರಾಲಜಿ ವಿಭಾಗದಲ್ಲಿದ್ದ ರೋಗಿಗಳನ್ನು ಸಹ ನ್ಯಾಯಾಧೀಶರು ಮಾತನಾಡಿಸಿದರು. ಆಸ್ಪತ್ರೆಯಲ್ಲಿ ಉತ್ತಮ ರೀತಿಯ ಚಿಕಿತ್ಸೆ ಸಿಗುತ್ತಿದೆ ಎಂದು ಅಲ್ಲಿದ್ದ ರೋಗಿಗಳು ತಿಳಿಸಿದಾಗ, ಉತ್ತಮವಾಗಿ ಕೆಲಸ ಮಾಡುವ ವೈದ್ಯರ ಕಾರ್ಯವೈಖರಿಯ ಬಗ್ಗೆ ನ್ಯಾಯಾಧೀಶರು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ವೇಳೆ, ಆಸ್ಪತ್ರೆಯಲ್ಲಿನ ವೈದ್ಯರು ಮತ್ತು ವೈದ್ಯಾಧಿಕಾರಿಗಳೊಂದಿಗೆ ಮಾತನಾಡಿದ ನ್ಯಾಯಾಧೀಶರು, ರೋಗಿಗಳಿಗೆ ಹೊರಗಡೆ ಔಷಧಿ ಬರೆಯದೆ, ಆಸ್ಪತ್ರೆಯಲ್ಲಿ ಸಿಗುವ ಉತ್ತಮ ಗುಣಮಟ್ಟದ ಔಷಧಿ ನೀಡಬೇಕು. ಔಷಧಿಗಳ ವಿತರಣೆ ವೇಳೆ ರೋಗಿಗಳಿಂದ ಯಾವುದೇ ಕಾರಣಕ್ಕೂ ಹಣ ಪಡೆಯಬಾರದು. ಆಸ್ಪತ್ರೆಗೆ ಬರುವ ಬಹುತೇಕ ಜನರು ಬಡವರಾಗಿದ್ದು, ಅವರಿಗೆ ಉತ್ತಮ ಚಿಕಿತ್ಸೆ ನೀಡುವುದು ವೈದ್ಯರ ಕರ್ತವ್ಯವಾಗಿದೆ. ಅದನ್ನು ಅರಿತು ಕಾರ್ಯನಿರ್ವಹಿಸಬೇಕೆಂದು ತಿಳಿಸಿದರು.

ಎಲ್ಲಾ ವೈದ್ಯರು ಆಸ್ಪತ್ರೆಗೆ ಸರಿಯಾದ ಸಮಯಕ್ಕೆ ಆಗಮಿಸಬೇಕು. ಸಮಯಕ್ಕೆ ಸರಿಯಾಗಿ ಬಾರದ ವೈದ್ಯರ ವಿರುದ್ಧ ಕ್ರಮಜರುಗಿಸಬೇಕೆಂದು ಆಸ್ಪತ್ರೆಯ ವಿಶೇಷಾಧಿಕಾರಿಗಳಿಗೆ ಸೂಚನೆ ನೀಡಿದರು.

ರೋಗಿಗಳಿಗೆ ಉತ್ತಮ ವೈದ್ಯಕೀಯ ಸೇವೆ, ಉಪಚಾರ ಮತ್ತು ಔಷಧೋಪಚಾರವನ್ನು ಸಮರ್ಪಕವಾಗಿ ನೀಡುವಂತೆ ಸಂಬಂಧಿಸಿದ ವೈದ್ಯರಿಗೆ ನಿರ್ದೇಶನ ನೀಡಲಾಯಿತು.

ಇದೇ ಸಂದರ್ಭದಲ್ಲಿ ಓಪೆಕ್ ಆಸ್ಪತ್ರೆಯ ವಿಶೇಷಾಧಿಕಾರಿ ಡಾ.ರಮೇಶ ಸಾಗರ್, ಆಸ್ಪತ್ರೆಯ ವಿವಿಧ ವಿಭಾಗಗಳ ಮುಖ್ಯಸ್ಥರಾದ ಡಾ.ಪ್ರಸಾದ್, ಡಾ.ವಿನಿತು, ಡಾ.ವಿನಯ್ ಬದ್ರಿ, ಡಾ.ಮಂಜುನಾಥ, ಡಾ.ಶೈಲೇಶ್, ಡಾ.ರಾಘವೇಂದ್ರ, ಡಾ.ವಿಜಯ ಮಹಾಂತೇಶ್, ಡಾ.ಅನಿಲ್ ಗೋಪಿನಾಥ್, ಡಾ.ಸುರೇಶ್ ಸಾಗರ ಸೇರಿದಂತೆ ಇತರರು ಇದ್ದರು.

ಹರಿಹರ ವಚನಾನಂದ ಸ್ವಾಮೀಜಿ ಹೇಳಿಕೆ

# ವೀರಶೈವ ಮಹಾಸಭಾ ನಿರ್ಧಾರಕ್ಕೂ ನಮಗೂ ಸಂಬಂಧವಿಲ್ಲ



**ಮಲ್ಲಮ್ಮ ನುಡಿ ವಾರ್ತೆ**
**ಬಾಗಲಕೋಟೆ:**

ಸೆ.10–ಜಾತಿ ಗಣತಿ ವಿಷಯದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ನಿರ್ಧಾರಕ್ಕೂ ಪಂಚಮಸಾಲಿಗೂ ಯಾವುದೇ ಸಂಬಂಧವಿಲ್ಲವೆಂದು ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಹೇಳಿದರು.

ನಗರದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರ ನಡೆಸಲಿರುವ ಸಾಮಾಜಿಕ, ಆರ್ಥಿಕ ಸಮೀಕ್ಷೆಯ ಗಣತಿ ಸಂದರ್ಭದಲ್ಲಿ ಜಾತಿ ಮತ್ತು ಧರ್ಮದ ಕಾಲಂನಲ್ಲಿ ಏನು ಬರೆಯಿಸಬೇಕು ಎನ್ನುವ ಕುರಿತು ಸಮುದಾಯದ ಸ್ವಾಮೀಜಿಗಳು ಹಾಗೂ ಮುಖಂಡರೊಂದಿಗೆ ಸೆ.16 ರಂದು ಚರ್ಚಿಸಿ ಅಂತಿಮ ನಿರ್ಧಾರ ಪ್ರಕಟಿಸಲಾಗುವುದು ಎಂದು ತಿಳಿಸಿದರು.

ಈ ಸಂಬಂಧವಾಗಿ ರಾಜ್ಯದ ಎಲ್ಲ ಜಿಲ್ಲೆಗಳ ಪ್ರವಾಸ ಕೈಗೊಳ್ಳಲಾಗಿದೆ. ಈಗಾಗಲೇ ಆರು ಜಿಲ್ಲೆಗಳ ಪ್ರವಾಸ ಪೂರ್ಣಗೊಂಡಿದ್ದು, ಮುಂದಿನ ದಿನಗಳಲ್ಲಿ ಉಳಿದ ಜಿಲ್ಲೆಗಳ ಪ್ರವಾಸ ನಡೆಯಲಿದೆ. ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ವೇಳೆ ಜಾತಿ, ಧರ್ಮದ ಕಾಲಂನಲ್ಲಿ ಏನನ್ನು ಬರೆಯಿಸಬೇಕು ಎನ್ನುವ ಹಿನ್ನೆಲೆಯಲ್ಲಿ ಭಕ್ತರ ಸಮಾವೇಶವನ್ನು ನಾನಾ ಜಿಲ್ಲೆಗಳಲ್ಲಿ ನಡೆಸಲಾಗುತ್ತಿದೆ ಎಂದು ವಚನಾನಂದ ಸ್ವಾಮೀಜಿ ಹೇಳಿದರು.

ಸೆ.16 ರಂದು ಹರಿಹರದಲ್ಲಿ ಕೂಡಲಸಂಗಮ, ಜಮಖಂಡಿ ಪೀಠದ ಜಗದ್ಗುರುಗಳು ಸೇರಿದಂತೆ ಪಂಚಮಸಾಲಿ ಸಮುದಾಯದ 35 ಸ್ವಾಮಿಗಳು, ಸಮಾಜದ ಮುಖಂಡರು ಸೇರಿ ಈ ಬಗ್ಗೆ ಚಿಂತನೆ, ಚರ್ಚೆ ನಡೆಸಲಿದ್ದಾರೆ. ಸೆ.17ರಂದು ಅಂತಿಮ ನಿರ್ಧಾರಕ್ಕೆ ಬರಲಾಗುವುದು ಎಂದು ಅವರು ತಿಳಿಸಿದರು.


ವೀರಶೈವ ಮಹಾಸಭಾಕ್ಕೂ ನಮಗೂ ಯಾವುದೇ ಸಂಬಂಧವಿಲ್ಲ. ನಮ್ಮದು ಬಹುದೊಡ್ಡ ಸಮಾಜ. ನಮ್ಮ ಪೀಠಗಳ ಮಾತೇ ಅಂತಿಮ ಎಂದ ಅವರು, ರಾಜ್ಯದಲ್ಲಿ ಪಂಚಮಸಾಲಿ ಸಮುದಾಯದ ಜನಸಂಖ್ಯೆಗೆನುಸಾರ ಇನ್ನೂ ಹೆಚ್ಚಿನ ಮಠಗಳ ಅಗತ್ಯವಿದೆ. ಮಠಗಳು ಹೆಚ್ಚಾದಂತೆ ಭಕ್ತರಿಗೆ ಅನುಕೂಲವಾಗಲಿದೆ. ಮಠಗಳು ಸಮಾಜದ ಹಿತಕ್ಕಾಗಿ ಕೆಲಸ ಮಾಡಲಿವೆ ಎಂದು ಶ್ರೀಗಳು ಹೇಳಿದರು.

ಧರ್ಮಸ್ಥಳ ವಿಷಯ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ವಚನಾನಂದ ಸ್ವಾಮೀಜಿ, ಧರ್ಮಸ್ಥಳದ ಹೆಸರು ಕೆಡಿಸುವ ಕೆಲಸ ನಡೆದಿದೆ. ಇಂಥ ಸನ್ನಿವೇಶದಲ್ಲಿ ಅದರ ರಕ್ಷಣೆಗೆ ನಿಲ್ಲಬೇಕಿದೆ. ಶೀಕ್ಷೇತ್ರದ ಬಗ್ಗೆ ಅಪಪ್ರಚಾರದ ಹಿಂದೆ ವಿದೇಶಿ ಕೈವಾಡವಿದೆ. ಇದು ಮುಂದಿನ ದಿನಗಳಲ್ಲಿ ಎಲ್ಲವೂ ಬಯಲಾಗಲಿದೆ ಎಂದರು.

ಪೂಜ್ಯರ ತಂಡ ಅಮಿತಶಾ ಅವರನ್ನು ಭೇಟಿ ಮಾಡಿರುವ ಕುರಿತು ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಹೇಳಿಕೆಗೆ ಪ್ರತಿಕ್ರಿಯಿಸಿದ ಶ್ರೀಗಳು, ಹಗುರುವಾಗಿ ಮಾತನಾಡುವ ವ್ಯಕ್ತಿಯ ಮಾತನ್ನು ಹಗುರವಾಗಿ ಬಿಟ್ಟುಬಿಡಬೇಕು ಎಂದು ಹೇಳಿದರು.

ಪಂಚಮಸಾಲಿ ಸಮಾಜದ ರಾಜ್ಯಾಧ್ಯಕ್ಷ ಸೋಮಣ್ಣಗೌಡ ಪಾಟೀಲ ಮಾತನಾಡಿದರು. ವೀರಶೈವ ಲಿಂಗಾಯತ ಪಂಚಮಸಾಲಿ ಸಮುದಾಯದ ಬಾಗಲಕೋಟೆ ಜಿಲ್ಲಾಧ್ಯಕ್ಷ ರವಿ ಪಟ್ಟಣದ ಇದ್ದರು.

# ವಿಕಲ ವಿಕಲಚೇತನರ 5% ಅನುದಾನ ಬಳಕೆ ಮತ್ತು 2016 ಕಾಯ್ದೆ ಅರಿವು ಕಾರ್ಯಕ್ರಮ.




**ಮಲ್ಲಮ್ಮ ನುಡಿ ವಾರ್ತೆ**
**ಯಾದಗಿರಿ/ಗುರುಮಠಕಲ್:**

ತಾಲೂಕ ಪಂಚಾಯತ ಸಭಾಂಗಣದಲ್ಲಿ ತಾಲೂಕಿನ

ಎಲ್ಲಾ ಗ್ರಾಮ ಪಂಚಾಯತಿ ಗ್ರಾಮ ಅಭಿವೃದ್ಧಿ ಅಧಿಕಾರಿಗಳಿಗೆ ವಿಕಲಚೇತನರ 5% ಅನುದಾನ ಬಳಕೆ ಮತ್ತು ವಿಕಲಚೇತನರ ಹಕ್ಕುಗಳ 2016 ಕಾಯ್ದೆಯ ಅರಿವು ಮೂಡಿಸುವ ಕಾರ್ಯಕ್ರಮ ಜರುಗಿತು.

ಕಾರ್ಯಕ್ರಮವನ್ನು ಸಸಿಗೆ ನೀರೆರಿಯುವ ಮೂಲಕ ತಾಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಅಂಬರೀಷ ಪಾಟೀಲ ಅವರು ಚಾಲನೆ ನೀಡಿ ವಿಕಲಚೇತನರಿಗೆ ಸರಕಾರದಿಂದ ಬರುವ 5% ಅನುದಾನ ಎಲ್ಲಾ ಗ್ರಾಮ ಪಂಚಾಯತ್ ಕಾರ್ಯಾಲಯದಲ್ಲಿ ಪ್ರಾಮಾಣಿಕವಾಗಿ ಸದ್ಬಳಕೆ ಆಗಲಿ ಮತ್ತು ಜೀವ ವಿಮಾ ಸುರಕ್ಷೆಯ ಕುರಿತು ಅರಿವು ಮೂಡಿಸುವ ಪ್ರಯತ್ನ ಜರುಗಲಿ ಎಂದು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಾರ್ಯಕ್ರಮದ ಪ್ರಸ್ತಾವಿಕನುಡಿ ಎಪಿಡಿ ಸಂಸ್ಥೆಯ ತಾಲೂಕ ಸಂಯೋಜ–ಕರಾದ ವಿರೂಪಾಕ್ಷ ಮಾಲಿ ಪಾಟೀಲ ಅವರು ವಿಕಲಚೇತನರ ಜೀವನ ಚಕ್ರ, ವಿಕಲಚೇತನರ ಗುರುತಿನ ಚೀಟಿ, ಸ್ವ ಸಹಾಯ ಸಂಘಗಳ ನಿರ್ಮಾಣ, 21 ಬಗೆಯ ವಿಕಲಚೇತನರ ಗುರುತಿಸುವ ಕಾರ್ಯ ಕುರಿತು ವಿವರಣೆ ನೀಡಿದರು.


ಕೊನೆಯದಾಗಿ ನೀತಿ ಮತ್ತು ವಕಾಲತ್ತು ಜಿಲ್ಲಾ ಸಂಯೋಜಕರು ನಾಗಪ್ಪ ಅವಂಟಿ ವಿಕಲಚೇತನರ 2016 ಕಾಯ್ದೆ ಮತ್ತು ಅವರು ಸ್ವಯತ್ತತೆ, ಘನತೆ, ಎಲ್ಲೆಡೆ ಸಮಾನ ಅವಕಾಶ, ಸರಕಾರಿ ಸೌಲಭ್ಯಗಳು, ಶೆಕ್ಷಣಿಕ, ವೃತ್ತಿಪರ ಮತ್ತು ಸ್ವ ಉದ್ಯೋಗ, ಕಾಯ್ದೆ ಉಲ್ಲಂಘನೆ, 5% ಅನುದಾನ ಬಳಕೆ ಕುರಿತಾದ ಮಾಹಿತಿ ನೀಡಿದರು.

ತಾಲೂಕ ಅರ್ ಪಿಡಿ ಅಧ್ಯಕ್ಷ ಸಿದ್ದನಗೌಡ, ಎಮ್ ಅರ್ ಡಬ್ಲ್ಯೂ ಭೀಮರಾಯ, ಎಪಿಡಿ ಸಿಬ್ಬಂದಿಗಳಾದ ಶಿಲ್ಪಾ, ಗಂಗಪ್ಪ, ನಾಗರಾಜ, ನಾಗಮಣಿ ಸೇರಿದಂತೆ ಅರ್.ಪಿ.ಡಿ ಟಾಸ್ಕ್ ಫೋರ್ಸ ಸದಸ್ಯರು, ಎಲ್ಲಾ ಗ್ರಾಮ ವಿಅರ್ ಡಬ್ಲ್ಯೂ ಸದಸ್ಯರು, ಗ್ರಾಮ ಪಂಚಾಯತ

ಅಭಿವೃದ್ಧಿ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

# ಗುಂಜಳ್ಳಿ ಪ್ರೌಢಶಾಲೆಯಲ್ಲಿ ಮಿಷನ್ ಶಕ್ತಿ ಯೋಜನೆಯ ಜಾಗೃತಿ ಅಭಿಯಾನ

**ಮಲ್ಲಮ್ಮ ನುಡಿ ವಾರ್ತೆ**
**ರಾಯಚೂರು:**



ಸೆಪ್ಟೆಂಬರ್ 10 (ಕರ್ನಾಟಕ ವಾರ್ತೆ): ರಾಯಚೂರು ತಾಲೂಕಿನ ಗುಂಜಳ್ಳಿ ಪ್ರೌಢಶಾಲೆಯಲ್ಲಿ ಸೆಪ್ಟೆಂಬರ್ 9ರಂದು ಮಿಷನ್ ಶಕ್ತಿ ಯೋಜನೆಯ 10 ದಿನಗಳ ವಿಶೇಷ ಜಾಗೃತಿ ಅಭಿಯಾನ ಕಾರ್ಯಕ್ರಮ ನಡೆಯಿತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ, ಜಿಲ್ಲಾ ಮಹಿಳಾ ಸಬಲೀಕರಣ ಘಟಕದಿಂದ ವಿದ್ಯಾರ್ಥಿನಿಯರಿಗೆ ನಡೆದ ಜಾಗೃತಿ ಕಾರ್ಯಕ್ರಮವನ್ನು ಜಿಲ್ಲಾ ಮಹಿಳಾ ಸಬಲೀಕರಣ ಘಟಕದ ತಜ್ಞ ಗಿರಿಜಾ ಉದ್ಘಾಟಿಸಿದರು.

ಬಾಲಕಿಯರಿಗೆ ವೈಯಕ್ತಿಕ ಶುಚಿತ್ವ, ಸ್ನೇಹ ಕ್ಲಿನಿಕ್, 1098 ಮಕ್ಕಳ ಸಹಾಯವಾಣಿ, ಬಾಲ್ಯವಿವಾಹ ನಿಷೇಧ ಕಾಯ್ದೆ, ಬಾಲ ಕಾರ್ಮಿಕ ನಿಷೇಧ ಕಾಯ್ದೆ ಹಾಗೂ ಮೊಬೈಲ್ ಬಳಕೆಯ ದುಷ್ಪರಿಣಾಮದ ಕುರಿತು ಕಾರ್ಯಕ್ರಮದಲ್ಲಿ ಮಾಹಿತಿ ನೀಡಲಾಯಿತು.

ಬಾಲಕಿಯರು ಗರ್ಭಿಣಿಯರಾಗುತ್ತಿರುವ ವಿಷಯ, ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿನಿಯರಿಗೆ ತಿಳಿಸಲಾಯಿತು.

ಕಾರ್ಯಕ್ರಮದಲ್ಲಿ ಶಾಲಾ ಮುಖ್ಯ ಗುರುಗಳಾದ ಅನುಸೂಯ, ಸಹ ಶಿಕ್ಷಕರಾದ ಎಂ ಶಾರದಾ, ಪೂರ್ಣಿಮಾ, ಮಹಿಳಾ ಸಬಲೀಕರಣ ಘಟಕದ ವಿಜಯಲಕ್ಷ್ಮಿ ಭಾಗವಹಿಸಿದ್ದರು.

# ವಾರದಲ್ಲಿ ಬಾಕಿ 291.92 ಕೋಟಿ ರೂ. ಬೆಳೆ ವಿಮೆ ಪರಿಹಾರ ಬಿಡುಗಡೆ:ಸಚಿವ ಪ್ರಿಯಾಂಕ್ ಖರ್ಗೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಸೆ.10: ಜಿಲ್ಲೆಯಲ್ಲಿ ಕಳೆದ 2024-25ನೇ ಸಾಲಿನ ಬೆಳೆವಿಮೆ ಪರಿಹಾರದಡಿ ಬಾಕಿ ಇದ್ದ 291.92 ಕೋಟಿ ರೂ. ಬೆಳೆ ವಿಮೆ ಪರಿಹಾರ ಒಂದು ವಾರದಲ್ಲಿ ಬಿಡುಗಡೆಯಾಗಿ ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆಯಾಗಲಿದೆ ಎಂದು ರಾಜ್ಯದ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್, ಐ.ಟಿ-ಬಿ.ಟಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಬುಧವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, 2024-25ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಮೊದಲನೇ ಕಂತಾಗಿ 364 ಕೋಟಿ ರೂ. ಬೆಳೆ ವಿಮೆ ಪರಿಹಾರ ಮೊತ್ತ ರೈತರಿಗೆ ಬಿಡುಗಡೆಯಾಗಿದ್ದು, ಬಾಕಿ ಮೊತ್ತ ಬಿಡುಗಡೆಗೆ ಹಣಕಾಸು ಇಲಾಖೆ ಆಕ್ಷೇಪಣೆ ವ್ಯಕ್ತಪಡಿಸಿತ್ತು. ಕಲಬುರಗಿ ಜಿಲ್ಲಾಡಳಿತ ಮತ್ತು ಕೃಷಿ ಇಲಾಖೆಯ ಅಧಿಕಾರಿಗಳು ಸೂಕ್ತ ವಿವರಣೆ ನೀಡಿದ್ದರಿಂದ ಬಾಕಿ 291.92 ಕೋಟಿ ರೂ. ಮೊತ್ತ ಬಿಡುಗಡೆಗೂ ಸಹ ಹಣಕಾಸು ಇಲಾಖೆ ಸಮ್ಮತಿಸಿದ್ದು, ಶೀಘ್ರದಲ್ಲಿ ರೈತರ ಬ್ಯಾಂಕ್ ಖಾತೆ ಒರಿಹಾರ ಹಣ ಜಮೆಯಾಗಲಿದೆ ಎಂದರು.

ಒಂದೇ ಅರ್ಥಿಕ ಸಾಲಿನಲ್ಲಿ 650 ಕೋಟಿ ರೂ. ಬೆಳೆ ವಿಮೆ ಪರಿಹಾರ ಕಲಬುರಗಿಗೆ ಬಂದಿರುವುದು ಜಿಲ್ಲೆಯ ಇತಿಹಾಸದಲ್ಲಿಯೆ ಮೊದಲು ಎಂದ ಅವರು, ಪ್ರತಿವರ್ಷ ಅನಾವೃಷ್ಟಿಯಾದಾಗ ರೈತರು ಪರಿಹಾರ ಕೋರುವುದು ಸಾಮಾನ್ಯ. ಇಲ್ಲಿನ ತೊಗರಿಗೆ ಪರಿಹಾರ ಕೇಳಿದರೆ ದಕ್ಷಿಣದವರು ಅಡಕೆ, ತೆಂಗು ಬೆಳೆಗಳಿಗೆ ಪರಿಹಾರ ಕೋರುತ್ತಾರೆ. ಹೀಗೆ ಪ್ರತಿ ವರ್ಷ ಸರ್ಕಾರ ಪರಿಹಾರ ಕೊಡುವುದು ಕಷ್ಟದಾಯಕ. ಹೀಗಾಗಿ ಬೆಳೆ ವಿಮೆ ನೋಂದಣಿಗೆ ಕಲಬುರಗಿ ಜಿಲ್ಲಾಡಳಿತ ಹೆಚ್ಚು ಒತ್ತು ನೀಡಿದ ಪರಿಣಾಮ ಇಷ್ಟೊಂದು ಬೃಹತ್ ಮೊತ್ತದ ವಿಮೆ ಒರಿಹಾರ ಪಡೆಯಲು ಸಾಧ್ಯವಾಗಿದ್ದು, ಮುಂದೆಯೂ ಸಹ ರೈತರು ಕಡ್ಡಾಯವಾಗಿ ಬೆಳೆ ವಿಮೆ ನೋಂದಣಿ ಮಾಡಿಸಿಕೊಳ್ಳಬೇಕೆಂದು ಅವರು ಮನವಿ ಮಾಡಿದರು.

1.05 ಲಕ್ಷ ಹೆಕ್ಟೇರ್ ಬೆಳೆ ಹಾನಿ: ಜಿಲ್ಲೆಯಾದ್ಯಂತ ಕಳೆದ ಆಗಸ್ಟ್ ಮಾಹೆಯಲ್ಲಿ ಸುರಿದ ಮಳೆಯಿಂದಾಗಿ 1.05 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದ ತೊಗರಿ, ಉದ್ದು, ಹತ್ತಿ ಸೇರಿದಂತೆ ತೋಟಗಾರಿಕೆ ಬೆಳೆ ಹಾನಿಯಾಗಿರುವುದು ಪ್ರಾಥಮಿಕ ಸಮೀಕ್ಷೆಯಲ್ಲಿ ಗೊತ್ತಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಿಖರವಾದ ವರದಿಗೆ ಹೋಬಳಿವಾರು ಕಂದಾಯ, ಕೃಷಿ, ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಜಂಟಿ ಸಮೀಕ್ಷೆ ನಡೆಸಿ ವರದಿ ನೀಡಲು ಈಗಾಗಲೆ ಮುಖ್ಯಮಂತ್ರಿಗಳು ನಿರ್ದೇಶನ ನೀಡಿದ್ದು, ಅದರಂತೆ ಇನ್ನೂ ಹತ್ತು ದಿನದಲ್ಲಿ ತಾಲೂಕು, ಹೋಬಳಿ ಮಟ್ಟದಲ್ಲಿ ಸರಿಯಾದ ಮಾಹಿತಿ ಪಡೆದು ವರದಿ ಸಲ್ಲಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ವರದಿ ಬಂದ ನಂತರ ಕಂದಾಯ ಇಲಾಖೆಯಿಂದ ಪರಿಹಾರ ಪೋರ್ಟಲ್‌ನಲ್ಲಿ ದಾಖಲು ಮಾಡಲಾಗುವುದು. ಹಾಗಾಗಿ ರೈತರು ಬೆಳೆ ಹಾನಿ ಕುರಿತು ಸಮೀಕ್ಷೆಗೆ ಬರುವ ಅಧಿಕಾರಿ-ಸಿಬ್ಬಂದಿಗಳಿಗೆ ಸರಿಯಾದ ಮಾಹಿತಿ ನೀಡುವಂತೆ ತಿಳಿಸಿದ್ದರು.

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಪ್ರತ್ಯೇಕ ಸಚಿವಾಲಯ ಸ್ಥಾಪನೆಯ ಬೇಡಿಕೆ ಪರಿಶೀಲನೆ ಹಂತದಲ್ಲಿದೆ ಎಂದು ಪತ್ರಕರ್ತರ ಪ್ರಶ್ನೆಯೊಂದಿಗೆ ಸಚಿವ ಪ್ರಿಯಾಂಕ್ ಖರ್ಗೆ ಅವರು, ಹಿಂದುಳಿದ ಕಲ್ಯಾಣ ಕರ್ನಾಟಕ ಭಾಗಕ್ಕೆ ರಾಜ್ಯ ಸರ್ಕಾರದಿಂದ ಪ್ರತಿ ವರ್ಷ 5,000 ಕೋಟಿ ರೂ. ಅನುದಾನ ನೀಡುತ್ತಿದ್ದು, ಇದೇ ಪ್ರಮಾಣದ ಅನುದಾನ ಕೇಂದ್ರ ಸರ್ಕಾರದಿಂದಲೂ ಬಿಡುಗಡೆ ಮಾಡಬೇಕೆಂದು ಈಗಾಗಲೆ ಮುಖ್ಯಮಂತ್ರಿಗಳು ಪ್ರಧಾನಮಂತ್ರಿ ಮತ್ತು ಹಣಕಾಸು ಸಚಿವರಿಗೆ ಪತ್ರ ಬರೆಸಿದ್ದಾರೆ. ಸಂಸದ ರಾಧಾಕೃಷ್ಣ ದೊಡ್ಡಮನಿ ಅವರು ಸಗ ಸಂಸತ್ತಿನಲ್ಲಿ ಧ್ವನಿ ಎತ್ತಿದ್ದು, ಕೇಂದ್ರದಿಂದ ಇನ್ನು ಯಾವುದೇ ಉತ್ತರ ಬಂದಿಲ್ಲ ಎಂದರು

ಕಲ್ಯಾಣ ಕರ್ನಾಟಕ ಉತ್ಸವಕ್ಕೆ ಸಿಎಂ ಆಗಮನ: ಕೆ.ಕೆ.ಆರ್.ಡಿ.ಬಿ ಮಂಡಳಿ ಅಧ್ಯಕ್ಷ ಡಾ.ಅಜಯ್ ಸಿಂಗ್ ಅವರು ಮಾತನಾಡಿ, ಕಲ್ಯಾಣ ಕರ್ನಾಟಕ ಉತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೆ.16ರ ಸಂಜೆ ಕಲಬುರಗಿ ನಗರಕ್ಕೆ ಆಗಮಿಸಲಿದ್ದಾರೆ. ಸೆಪ್ಟೆಂಬರ್ 17ರಂದು ಬೆಳಿಗ್ಗೆ ಇಲ್ಲಿನ ತಿಮ್ಮಾಪುರಿ ವೃತ್ತದ ಸರ್ದಾರ ವಲ್ಲಭಭಾಯ್ ಪಟೇಲ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಂತರ 9 ಗಂಟೆಗೆ ಸಿ.ಎಂ ಸಿದ್ದರಾಮಯ್ಯ ಅವರು ಪೊಲೀಸ್ ಪರೇಡ್ ಮೈದಾನದಲ್ಲಿ ರಾಷ್ಟ್ರಧ್ವಜಾರೋಹಣ ಮಾಡಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡುವರು ಎಂದರು.

ಕೆ.ಕೆ.ಆರ್.ಡಿ.ಬಿ. ಮಂಡಳಿಗೆ ಕಳೆದ ಮೂರು ಅರ್ಥಿಕ ಸಾಲಿನಲ್ಲಿ 13,000 ಕೋಟಿ ರೂಮ ಅನುದಾನ ಘೋಷಿಸಿದೆ. ಮಂಡಳಿ ಅನುದಾನ ಖರ್ಚು ಮಾಡುತ್ತಿಲ್ಲ ಎಂಬ ಅಪವಾದವಿತ್ತು. ತಾವು ಅಧಿಕಾರ ವಹಿಸಿದ ನಂತರ ಕಳೆದ 27 ತಿಂಗಳ ಅವಧಿಯಲ್ಲಿ ಬಿಡುಗಡೆಯಾದ 8,000 ಕೋಟಿ ರೂ. ಗಳ ಪೈಕಿ 6,224 ಕೋಟಿ ರೂ. ಅನುದಾನ ಖರ್ಚು ಮಾಡಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜರ್ ಅಲಂ ಖಾನ್, ಕೆ.ಕೆ. ಆರ್.ಡಿ.ಬಿ. ಕಾರ್ಯದರ್ಶಿ ನಲಿನ್ ಅತುಲ್, ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್, ನಗರ ಪೊಲೀಸ್ ಆಯುಕ್ತ ಡಾ. ಎಸ್.ಡಿ.ಶರಣಪ್ಪ ಢಗೆ, ಎಸ್.ಪಿ.ಅಡ್ಡೂರು ಶ್ರೀನಿವಾಸಲು, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಇದ್ದರು.

# ಬಿಜೆಪಿ ವಿರುದ್ಧ ಸಚಿವ ಖರ್ಗೆ ವಾಗ್ದಾಳಿ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಸೆ.10:ಬಿಜೆಪಿಯವರಿಗೆ ಕೆಲಸ ಇಲ್ಲ, ಕೇಂದ್ರ ಸರ್ಕಾರದಿಂದ ಆಗ್ತಿರುವ ಅನ್ಯಾಯದ ಬಗ್ಗೆ ಮಾತಾಡಲ್ಲ.ಅಸ್ತಿತ್ವ , ಕುರ್ಚಿ ಉಳಿಸಿಕೊಳ್ಳಲು , ಆರ್ ಎಸ್ ಎಸ್ ಮನವೊಲಿಸಲು ಅಲ್ಲಿ ಚಲೋ ಇಲ್ಲಿ ಚಲೋ ಮಾಡುತ್ತಾರೆ.ಶಾಂತಿ ಕದಡುತ್ತಾರೆ. .ಮದ್ದೂರ ಶಾಂತಿ ಸಭೆಗೆ ಇವರು ಬಂದಿಲ್ಲ, ಸ್ವಲ್ಪವು ನಾಚಿಕೆ ಇದೇನಾ

ಪೆಹಲ್ಗಾಮ್ ಅಟ್ಯಾಕ್ ಆದ ಮೇಲೂ ಯಾಕೆ ಇಂಡಿಯಾ ಪಾಕಿಸ್ತಾನ್ ಮಾಡ್ತಾರೆ.ಹೊದ ಬಾರಿ ಮಂಡ್ಯ ಚಲೋ ಈ ಬಾರಿ ಮದ್ದೂರು ಚಲೋ ಮಾಡಿದ್ರು ಏನಾಯಿತು .ಧರ್ಮಸ್ಥಳ ಚಲೋ ಮಾಡಿದ್ರು , ಸೌಜನ್ಯ ಮನೆಗೆ ಹೋದ್ರು ಇವರು ಧರ್ಮಸ್ಥಳದ ಪರವಾಗಿ ಇದ್ದಾರ ಸೌಜನ್ಯ ಪರವಾಗಿ ಇದ್ದಾರ ಸ್ಪಷ್ಟ ಪಡಿಸಲಿ ಎಂದು ಸಚಿವ ಪ್ರಿಯಾಂಕ್ ಖರ್ಗೆ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ಅವರಿಂದು ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಿಜೆಪಿಯವರೇ ಅಮಾಯಕರನ್ನ ಮುಂದೆ ಇಟ್ಟು-ಕೊಂಡು ಹೋರಾಟ ಮಾಡೋದು ಬಿಡಿ.ನಿಮ್ಮ ನಿಮ್ಮ ಮಕ್ಕಳನ್ನ ವಿದೇಶಗಳಿಂದ ವಾಪಸ್ ಕರೆಯಿಸಿ, ಅವರನ್ನ ಮುಂದೆ ಬಿಟ್ಟು ಹೋರಾಟ ಮಾಡಿ. ಕೇವಲ ಬಡವರ ಮಕ್ಕಳನ್ನ ಮುಂದಿಟ್ಟುಕೊಂಡು ಹೋರಾಟ ಮಾಡೋದು ಸರಿನಾ. ಸರ್ಕಾರ ಶಾಂತಿ ಸಭೆ ಕರೆದ್ರು ಯಾಕೆ ಬಂದಿಲ್ಲ ನಿಮ್ಮ ಉದ್ದೇಶ ಆದ್ರು ಏನು

ಬಿಜೆಪಿಯವರಿಂದ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕಾಗಿಲ್ಲ ನಾವು ಎಂದರು.

ಕುಕ್ಕರ್ ಬ್ಲಾಸ್ಟ್ ಕೇಸ್ ನಲ್ಲಿ ಅರಗ ಜ್ಞಾನೇಂದ್ರ ಅವರ ಊರಲ್ಲಿ ತರಬೇತಿ ಪಡೆದಿದ್ರು ಎಂದು ಸಂಗಮೇಶ್ ಅವರು ಹೇಳಿಕೆ ನೀಡಿದ್ದಾರೆ.

ನಾನು ಯಾವ ಧರ್ಮ ಬೇಕು ಆ ಧರ್ಮಕ್ಕೆ ಹೋಗೊಕೆ ಅವಕಾಶ ಇದೆ

ಬಿಜೆಪಿಯ ಚಿ ನಾ ರಾಮು ಮತಾಂತರದ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ರು ಅದನ್ನ ಪರಿಶೀಲನೆ ಮಾಡಲಿ ಎಂದರು.

# "ಮಾಸಾಬಿ" ತಾಯಿಯ ಜಾತ್ರಾ ಮಹೋತ್ಸವ ಕಂಗೊಳಿಸಿದ ಕೆಂಭಾವಿ ಪಟ್ಟಣ



ಮಲ್ಲಮ್ಮ ನುಡಿ ವಾರ್ತೆ

ಸುರಪುರ : ಕೆಂಭಾವಿ ಪಟ್ಟಣದಲ್ಲಿ ಪ್ರಸಿದ್ಧ "ಮಾಸಾಬಿ" ತಾಯಿಯ ಜಾತ್ರಾ ಮಹೋತ್ಸವವು ಈ ವರ್ಷವೂ ಅದ್ದೂರಿಯಾಗಿ ಜರುಗಿತು. ಸಾವಿರಾರು ಭಕ್ತರು ಶ್ರದ್ಧಾಭಕ್ತಿಯಿಂದ ಪಾಲ್ಗೊಂಡು, ತಾಯಿಗೆ ತಮ್ಮ ನಂಬಿಕೆಯನ್ನು ವ್ಯಕ್ತಪಡಿಸಿದರು.

ಈ ಜಾತ್ರೆಯ ಪ್ರಮುಖ ಹೈಲೈಟ್ ಎಂದರೆ, ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ಪರಸ್ಪರ ಸಹಭಾಗಿತ್ವ. ಧಾರ್ಮಿಕ ಸೌಹಾರ್ದತೆ ಮತ್ತು ಸಮಾನತೆ ಹೆಸರುವಾಸಿಯಾದ ಕೆಂಭಾವಿಯಲ್ಲಿ, ಜಾತ್ರೆ ಹಬ್ಬದ ರೂಪದಲ್ಲಿ ಎಲ್ಲರಿಗೂ ಒಂದೇ ವೇದಿಕೆಯಾದರು.

ಉತ್ಸವದ ವೇಳೆ ವಿವಿಧ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದ್ದು, ಪೂಜೆ ಹಾಗೂ ಸಾಂಪ್ರದಾಯಿಕ ಕಲೆಗಳು ಜಾತ್ರೆಗೆ ಮೆರಗು ನೀಡಿದವು.

ಜಾತ್ರೆಯ ಯಶಸ್ಸಿಗೆ ಸ್ಥಳೀಯ ನಾಗರಿಕರು, ಧಾರ್ಮಿಕ ಮುಖಂಡರು ಹಾಗೂ ಸಾಮಾಜಿಕ ಸಂಘಟನೆಗಳು ಮಹತ್ವಪೂರ್ಣ ಪಾತ್ರವಹಿಸಿದ್ದು, ಈ ಮಹೋತ್ಸವದ ಮೂಲಕ ಸಮಾನತೆ, ಶ್ರದ್ಧೆ ಮತ್ತು ಭಕ್ತಿಯ ಸಂದೇಶ ಹರಡಿದೆ.

# ಕಾಮನ್ ವೆಲ್ತ್ ಸಂಸದೀಯ ಸಂಘ ಭಾರತ ವಿಭಾಗದ 11ನೇ ಸಮ್ಮೇಳನ ಇಂದಿನಿಂದ:ಯು.ಟಿ.ಖಾದರ್

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು, ಸೆ 10 :ರಾಜ್ಯದಲ್ಲಿ ಪ್ರಪ್ರಥಮ ಬಾರಿಗೆ ಕಾಮನ್‌ವೆಲ್ತ್ ಸಂಸದೀಯ ಸಂಘ ಭಾರತ ವಿಭಾಗದ 11ನೇ ಸಮ್ಮೇಳನವನ್ನು ಸೆಪ್ಟೆಂಬರ್ 11 ರಿಂದ 14ರ ವರೆಗೆ ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದೆ. ಸೆಪ್ಟೆಂಬರ್ 11 ರಂದು ಸಂಜೆ 5.30ಕ್ಕೆ ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮುಂಭಾಗ ಲೋಕಸಭೆಯ ಸಭಾಧ್ಯಕ್ಷರಾದ ಓಂ ಬಿರ್ಲಾ ಅವರು ಉದ್ಘಾಟನೆ ನೆರವೇರಿಸುವರು ಎಂದು ವಿಧಾನಸಭೆಯ ಸಭಾಧ್ಯಕ್ಷರಾದ ಯು.ಟಿ ಖಾದರ್ ಫರೀದ್ ಅವರು ತಿಳಿಸಿದರು.

ಇಂದು ವಿಧಾನಸೌಧದಲ್ಲಿ ಹಮ್ಮಿಕೊಳ್ಳಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಭಾಧ್ಯಕ್ಷರು, ಈ ಸಮ್ಮೇಳನದಲ್ಲಿ ರಾಜ್ಯಸಭೆಯ ಉಪಸಭಾಪತಿಯವರು, ಭಾರತ ದೇಶದ ಎಲ್ಲಾ ರಾಜ್ಯಗಳ ವಿಧಾನಸಭೆಯ ಸಭಾಧ್ಯಕ್ಷರುಗಳು, ಉಪಸಭಾಧ್ಯಕ್ಷರುಗಳು, ವಿಧಾನಪರಿಷತ್ತಿನ ಸಭಾಪತಿಗಳು, ಉಪಸಭಾಪತಿಗಳು, ಲೋಕಸಭಾ ಸದಸ್ಯರು, ವಿದೇಶಿ ಗಣ್ಯರು, ಲೋಕಸಭೆ-ರಾಜ್ಯಸಭೆಯ ಮಹಾಕಾರ್ಯದರ್ಶಿಗಳು ಹಾಗೂ ರಾಜ್ಯ ವಿಧಾನಮಂಡಲದ ಕಾರ್ಯದರ್ಶಿಗಳು ಭಾಗವಹಿಸಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ವಿಧಾನಪರಿಷತ್ ಸಭಾಪತಿಗಳಾದ ಬಸವರಾಜ ಹೊರಟ್ಟಿ, ವಿಧಾನಸಭೆಯ ಕಾರ್ಯದರ್ಶಿ ಶ್ರೀಮತಿ ಎಂ.ಕೆ. ವಿಶಾಲಾಕ್ಷಿ ಹಾಗೂ ಲೋಕಸಭೆಯ ಸಭಾಧ್ಯಕ್ಷರ ಕಾರ್ಯಾಲಯದ ಅಧಿಕಾರಿಗಳು ಉಪಸ್ಥಿತರಿದ್ದರು.

# ಶಾಲಾ ಕಂಪೌಂಡ ನಿರ್ಮಾಣಕ್ಕೆ ದೇಣಿಗೆ ನೀಡಿದ ವಿದ್ಯಾರ್ಥಿನಿ



ವಿದ್ಯಾರ್ಥಿನಿಗೆ ಸನ್ಮಾನ : ಶಾಲಾ ಕೌಂಪೌಂಡ್ ಎತ್ತರ ಮಾಡುವ ಕಾರ್ಯಕ್ಕೆ ದೇಣಿಗೆ ನೀಡಿದ ಪೀಜಾ ಸಣ್ಣಮಸೂತಿ

ಮಲ್ಲಮ್ಮ ನುಡಿವಾರ್ತೆ

ಕೊಪ್ಪಳ :ಸೆ.10: ತಾಲೂಕಿನ ಬಹದ್ದೂರಬಂಡಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 7ನೇ ತರಗತಿ ಅಧ್ಯಾಯನ ಮಾಡುತ್ತಿರುವ ವಿದ್ಯಾರ್ಥಿನಿ ಪೀಜಾ ಸಣ್ಣಮಸೂತಿ ಶಾಲಾ ಕೌಂಪೌಂಡ್ ಎತ್ತರ ಮಾಡಲು ಹಮ್ಮಿಕೊಂಡಿರುವ ಅಭಿಯಾನಕ್ಕೆ ರೂ.5001ಗಳನ್ನು ದೇಣಿಗೆ ನೀಡಿದ್ದಾಳೆ.

ವಿದ್ಯಾರ್ಥಿನಿಯಾದ ಪೀಜಾ ಸಣ್ಣ ಮಸೂತಿ ತಮ್ಮ ತಾಯಿಯು ಸಂಗ್ರಹಿಸಲು ನೀಡುತ್ತಿದ್ದ ಹಣವನ್ನು ಶಾಲೆಗೆ ದೇಣಿಗೆ ನೀಡಿದ್ದಾಳೆ. ಶಾಲಾ ಕೌಂಪೌಂಡ್ ಎತ್ತರ ಕಡಿಮೆಯಾಗಿರುವ ಪ್ರಯುಕ್ತ ಅದನ್ನು ಎತ್ತರ ಮಾಡುವ ನಿಟ್ಟಿನಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು, ಶಾಲೆಯ ಹಳೆಯ ವಿದ್ಯಾರ್ಥಿಗಳ ಹಾಗೂ ದಾನಿಗಳ ಸಭೆಯನ್ನು ಕರೆದಿದ್ದರು. ಈ ಸಭೆಯ ವಿಚಾರ ವಿದ್ಯಾರ್ಥಿಗೆ ಗೊತ್ತಾದ ಪ್ರಯುಕ್ತ ತಾನು ಕಲಿಯುತ್ತಿರುವ ಶಾಲೆಗೆ ಅಳಿಲು ಸೇವೆ ಇರಲಿ ಎಂಬ ಉದ್ದೇಶದಿಂದ ಕೂಡಿಟ್ಟ ರೂ.5001 ಹಣ ದೇಣಿಗೆ ನೀಡಿ ಎಲ್ಲರಿಗೂ ಮಾದರಿಯಾಗಿದ್ದಾಳೆ.

ಅವರನ್ನು ಶಾಲಾ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಮಂಜುನಾಥ ಕುರಿ, ಸದಸ್ಯ ಬಾಬಾ ಕಿಲ್ಲೇದಾರ, ಮಾಜಿ ಅಧ್ಯಕ್ಷ ಪ್ರಭು ಹೊಸಮನಿ, ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ಮೈಬೂಬ ಮಣ್ಣೂರು, ಸಿ.ಆರ್.ಪಿ. ಹನುಮಂತಪ್ಪ ಕುರಿ, ಶಾಲೆಯ ಮುಖ್ಯೋಪಾಧ್ಯಾಯ ಬೀರಪ್ಪ ಅಂಡಗಿ, ಶಿಕ್ಷಕರಾದ ಶರಣಪ್ಪಗೌಡ, ಭಾರತಿ ಉಪಾಧ್ಯಯ, ಜ್ಯೋತಿಲಕ್ಷ್ಮೀ, ಪೂರ್ಣಿಮಾ ತುಪ್ಪದ, ಮಮತಾ, ಗಂಗಮ್ಮ, ಮಾಧವಿ, ಹನುಮಪ್ಪ ಕಬ್ಬೇರ, ರಾಜಾ ಹುಸೇನ, ಗೀತಾ ಕುರಿ, ನಗ್ಮಾ, ಜಲಜಾಕ್ಷಿ, ರುಬೀನಾ, ವೀಣಾ, ಸಲೀಮಾಬೇಗಂ, ಮುಖಂಡರಾದ ಖಲಂದರಪಾಷಾ, ನಭೀಸಾಬ ಮುಂತಾದವರು ಸೇರಿ ಸನ್ಮಾನಿಸಿದ್ದಾರೆ.

# 13 ರಂದು ರಾಜ್ಯ ಲೋಕ ಜನ ಶಕ್ತಿ ಸಭೆ



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಸೆ.10: ಸೆ.13 ರಂದು ಮಧ್ಯಾಹ್ನ 2 :30 ಗಂಟೆಗೆ ಹೋಟೆಲ್ ಕನಿಷ್ಕಾ ಗಾಂಧಿನಗರ ಬೆಂಗಳೂರು ನಲ್ಲಿ ಕರ್ನಾಟಕ ರಾಜ್ಯ ಲೋಕ ಜನ ಶಕ್ತಿ ಪಾರ್ಟಿ( ರಾಮ್ ವಿಲಾಸ್ ) ರಾಜ್ಯಾಧ್ಯಕ್ಷರಾದ ಎಂಎಸ್ ಜಗನ್ನಾಥ್ ಅವರ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಹಾಗೂ ಜಿಲ್ಲಾ ಮಟ್ಟದ ಕಾರ್ಯಕರ್ತರ ಸಭೆ ಹಮ್ಮಿಕೊಳ್ಳಲಾಗಿದೆ. ರಾಜ್ಯ ಲೋಕ ಜನ ಶಕ್ತಿ ಪಾರ್ಟಿ ( ರಾಮ ವಿಲಾಸ್ ) ಇದರ ಜಿಲ್ಲಾ ಅಧ್ಯಕ್ಷರುಗಳು ಹಾಗೂ ತಾಲೂಕಾ ಅಧ್ಯಕ್ಷರುಗಳು, ರಾಜ್ಯದ ಕೃಷಿ ಘಟಕ ,ಕಾರ್ಮಿಕ ಘಟಕ, ನ್ಯಾಯವಾದಿ ಘಟಕ, ಮಹಿಳಾ ಘಟಕ ಸೇರಿದಂತೆ ಎಲ್ಲಾ ಘಟಕಗಳ ಪದಾಧಿಕಾರಿಗಳು ಸಭೆಗೆ ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಕರ್ನಾಟಕ ರಾಜ್ಯ ಲೋಕ ಜನಶಕ್ತಿ ಪಾರ್ಟಿ ಉಪಾಧ್ಯಕ್ಷರಾದ ನಾಗಶೆಟ್ಟಿ ಪಾಟೀಲ್ ಸುಂಕನಾಳ ಮನವಿ ಮಾಡಿದ್ದಾರೆ

# ಅತಿವೃಷ್ಠಿಯಿಂದಾದ ಬೆಳೆ ಹಾನಿ ವೀಕ್ಷಿಸಿದ ಶಾಸಕ ಮೇಟಿ



ಮಲ್ಲಮ್ಮ ನುಡಿ ವಾರ್ತೆ


ಬಾಗಲಕೋಟೆ,ಸೆ.10-ಅತಿವೃಷ್ಠಿಯಿಂದಾಗಿ ತಾಲೂಕಿನಲ್ಲಿ ಹಾನಿಗೊಳಗಾದ ಈರುಳ್ಳಿ, ಹೆಸರು ಸೇರಿದಂತೆ ವಿವಿಧ ಬೆಳೆಗಳನ್ನು ಶಾಸಕ ಎಚ್.ವಾಯ್. ಮೇಟಿ ಬುಧವಾರ ವೀಕ್ಷಿಸಿದರು.

ಬಾಗಲಕೋಟೆ ತಾಲೂಕಿನ ತಿಮ್ಮಾಪೂರ, ಬಿಲ್ ಕೆರೂರ, ಸಂಗಾಪೂರ, ಅಚನೂರ ಹಾಗೂ ಭಗವತಿ ಗ್ರಾಮಗಳ ರೈತರ ಹೊಲಗಳಿಗೆ ಭೇಟಿ ನೀಡಿದ ಮೇಟಿ, ಮಳೆಯಿಂದ ಹಾನಿಗೊಳಗಾದ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಾದ ಈರುಳ್ಳಿ, ಸೂರ್ಯಕಾಂತಿ, ತೆ-ೂಗರಿ, ಮೆಕ್ಕೆಜೋಳ ಬೆಳೆ ವೀಕ್ಷಣೆ ಮಾಡಿದರು. ಆಗಸ್ಟ್ ತಿಂಗಳಲ್ಲಿ ಹೆಚ್ಚುವರಿ ಮಳೆಯಾದ ಕಾರಣ ಈರುಳ್ಳಿ ಹಾಗೂ ಹೆಸರು ಬೆಳೆಗಳು ಕೆಲವೆಡೆ ಬಹುತೇಕ ಹಾನಿಗೊಳಗಾಗಿದ್ದು, ಕೆಲವೆಡೆ ಇಳುವರಿ ಕುಂಟಿತವಾಗಿದೆ ಈ ಸಂದರ್ಭದಲ್ಲಿ ರೈತರು ಹೇಳಿದರು. ಹಾಗೆಯೇ ಹೆಚ್ಚಿನ ತೇವಾಂಶದಿಂದ ತೊಗರಿ, ಸೂರ್ಯಕಾಂತಿ ಮತ್ತು ಮೆಕ್ಕೆಜೋಳದ ಬೆಳೆಗಳು ಹಾಳಾಗಿದ್ದು ಎಲ್ಲವನ್ನೂ ಶಾಸಕರು ವೀಕ್ಷಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಎಚ್.ವಾಯ್.ಮೇಟಿ, ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯಿಂದ ಹಾನಿಯಾದ ರೈತರ ಬೆಳೆಗಳಿಗೆ ಪರಿಹಾರ ಧನವನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುವುದು. ಕಂದಾಯ, ಕೃಷಿ ಹಾಗೂ ತೆ-ೂಟಗಾರಿಕಾ ಇಲಾಖೆ ಅಧಿಕಾರಿಗಳು ನಡೆಸಲಿರುವ ಜಂಟೀ ಸಮೀಕ್ಷೆಯ ಆಧಾರದ ಮೇಲೆ ಪರಿಹಾರ ವಿತರಣೆಗೆ ಕ್ರಮವಹಿಸುವಂತೆ ಸೂಚಿಸಿದರು.

ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕ ಲಕ್ಷ್ಮಣ ಕಳ್ಳೆನ್ನವರ, ಉಪ ಕೃಷಿ ನಿರ್ದೇಶಕ ಎಲ್.ಐ.ರೂಢಗಿ, ತಹಸೀಲ್ದಾರ ವಾಸುದೇವ ಸ್ವಾಮಿ, ಸಹಾಯಕ ಕೃಷಿ ನಿರ್ದೇಶಕ ಮಂಜುನಾಥ ಕೆ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕಿ ಗೀತಾ, ಉಪತಹಸೀಲ್ದಾರ ನೀಲೇಶ ಕರಡಿ, ಕಂದಾಯ ನಿರೀಕ್ಷಕರಾದ ಪ್ರಕಾಶ ನಾಯಕ ಮತ್ತು ವಿಜಯಪ್ರಕಾಶ ಅಳವಂಡಿ, ಗ್ರಾಮ ಆಡಳಿತಾಧಿಕಾರಿಗಳು, ಆಯಾ ಗ್ರಾಮಗಳ ಪ್ರಮುಖರು, ರೈತರು ಪಾಲ್ಗೊಂಡಿದ್ದರು.

# ಸಹಾಯಕ ಆಯುಕ್ತರ ನೇತೃತ್ವದಲ್ಲಿ 11 ಖಾಸಗಿ ಆಸ್ಪತ್ರೆಗಳ ಮೇಲೆ ದಿಢೀರ್ ದಾಳಿ, ಪರಿಶೀಲನೆ




ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಸೆ10:ರಾಯಚೂರಿನ ಎಲ್‌ಬಿಎಸ್ ನಗರ ಸೇರಿದಂತೆ ಇತರೆಡೆ ಇರುವ ಖಾಸಗಿ ಆಸ್ಪತ್ರೆಗಳ ಮೇಲೆ, ರಾಯಚೂರು ಸಹಾಯಕ ಆಯುಕ್ತರಾದ ಗಜಾನನ ಬಾಳೆ ಅವರ ನೇತೃತ್ವದಲ್ಲಿ ಆರೋಗ್ಯ ಇಲಾಖೆಯ ಅಧಿಕಾರಿಗಳು ದಿಢೀರ್ ದಾಳಿ ನಡೆಸಿದರು.

ಈ ವೇಳೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಶಬಾಬು ಅವರು ಮಾತನಾಡಿ, ಸೆಪ್ಟೆಂಬರ್ 10ರಂದು 11 ಖಾಸಗಿ ಆಸ್ಪತ್ರೆಗಳ ಮೇಲೆ ದಾಳಿ ಮಾಡಲಾಗಿದೆ. 11 ಆಸ್ಪತ್ರೆಗಳ ಪೈಕಿ ಕೆಲವು ಆಸ್ಪತ್ರೆಗಳು ಕೆಪಿಎಂಸಿ ಕಾಯಿದೆಯನುಸಾರ ನೋಂದಣಿ ಮಾಡದೇ ಇರುವುದು ಕಂಡು ಬಂದಿದ್ದು, ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಜರುಗಿಸಲಾಗುತ್ತದೆ ಎಂದು ತಿಳಿಸಿದರು.

ಕರ್ನಾಟಕ ಖಾಸಗಿ ನರ್ಸಿಂಗ್ ನಿಯಂತ್ರಣ ಕಾಯಿದೆ (ಕೆಪಿಎಂಇ) ನಿಯಮಗಳು ಉಲ್ಲಂಘಿಸಿದ ಖಾಸಗಿ ವೈದ್ಯಕೀಯ ಸಂಸ್ಥೆ, ಕ್ಲಿನಿಕ್‌ಗಳ ವಿರುದ್ದ ಪ್ರಕರಣ ದಾಖಲಿಸಿ ಕಾನೂನು ಕ್ರಮಕೈಗೊಳ್ಳಲಾಗುವುದು. ಜಿಲ್ಲೆಯಲ್ಲಿ ನಕಲಿ ವೈದ್ಯರ ಜಾಲದ ಮೇಲೆ ನಿಗಾ ಇರಿಸಿದ್ದು, ಈ ಕೆಟ್ಟ ಪದ್ಧತಿಯನ್ನು ಬೇರುಸಮೇತ ಕಿತ್ತೊಗೆಯಲು ಜಿಲ್ಲಾಧಿಕಾರಿಗಳ ಮಾರ್ಗದರ್ಶನದಲ್ಲಿ ಆರೋಗ್ಯ ಇಲಾಖೆಯು ಮುಂದಾಗಿದೆ ಎಂದರು.

ಖಾಸಗಿ ಆಸ್ಪತ್ರೆಗಳು, ಕ್ಲಿನಿಕ್‌ಗಳು ತಮ್ಮ ಕೆಪಿಎಂಇ ನೋಂದಣಿ ಸಂಖ್ಯೆ, ಆಸ್ಪತ್ರೆಯ ಹೆಸರು ಮತ್ತು ಮಾಲೀಕರ ಹೆಸರನ್ನು ಕಟ್ಟಡದ ಮುಂಭಾಗದಲ್ಲಿ ಕಡ್ಡಾಯ ಪ್ರದರ್ಶಿಸಬೇಕು. ಈ ಬಗ್ಗೆ ಭೇಟಿ ವೇಳೆ ಆಯಾ ಆಸ್ಪತ್ರೆಯ ಮಾಲೀಕರು ಮತ್ತು ಸಿಬ್ಬಂದಿಗೆ ಸೂಚಿಸಲಾಗಿದೆ ಎಂದರು.

ಕೆಪಿಎಂಇ ಕಾಯ್ದೆಯನುಸಾರ ಸಾರ್ವಜನಿಕರ ಮಾಹಿತಿಗಾಗಿ ಆಸ್ಪತ್ರೆಯಲ್ಲಿ ಲಭ್ಯವಿರುವ ಸೇವೆಗಳ ವಿವರವನ್ನು ಆಸ್ಪತ್ರೆಯ ಆವರಣದ ಪ್ರಮುಖ ಸ್ಥಳಗಳಲ್ಲಿ ಸ್ಪಷ್ಟವಾಗಿ ಪ್ರದರ್ಶಿಸಬೇಕು. ದಿಢೀರ್ ಭೇಟಿ ವೇಳೆ ಈ ಬಗ್ಗೆ ಪರಿಶೀಲಿಸಲಾಗಿದೆ. ಇಂತಹ ಮಾರ್ಗಸೂಚಿ ಅಂಶಗಳನ್ನು ಕಡ್ಡಾಯ ಪಾಲಿಸುವಂತೆ ಸೂಚಿಸಲಾಗಿದೆ ಎಂದು ಡಿಎಚ್‌ಓ ಅವರು ತಿಳಿಸಿದರು.

ಈ ವೇಳೆ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿ ಡಾ.ಶಿವುಕುಮಾರ್, ಐಎಮ್‌ಎ ಸದಸ್ಯರಾದ ಡಾ.ಹರ್ಷ ಪಾಟೀಲ್, ಆಯುಷ್ ಇಲಾಖೆಯ ಅಧಿಕಾರಿ ಡಾ.ಶಂಕರಗೌಡ ಎಸ್.ಪಾಟೀಲ್ ಸೇರಿದಂತೆ ರಾಯಚೂರು ಮಹಾನಗರ ಪಾಲಿಕೆಯ ವಿವಿಧ ಅಧಿಕಾರಿಗಳು ಇದ್ದರು.

# ಎರಡು ಎಮ್ಮೆ, ಒಂದು ಆಕಳು ಕಳವು:8 ಕಳ್ಳರ ಬಂಧನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಸೆ.10:ಜಿಲ್ಲೆಯ ಆಳಂದ ತಾಲ್ಲೂಕಿನ ತಡಕಲ್ ಗ್ರಾಮದಲ್ಲಿ ನಡೆದ ಎಮ್ಮೆ ಮತ್ತು ಆಕಳು ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ 8 ಜನ ಆರೋಪಿಗಳನ್ನು ಬಂಧಿಸಿರುವ ಆಳಂದ ಪೊಲೀಸರು 4.90 ಲಕ್ಷ ರೂ.ಮೌಲ್ಯದ ಸ್ವತ್ತನ್ನು ಜಪ್ತಿ ಮಾಡಿದ್ದಾರೆ.

ತಡಕಲ್ ಗ್ರಾಮದಲ್ಲಿ ನಡೆದ ಎಮ್ಮೆ ಮತ್ತು ಆಕಳು ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ವಿನಾಯಕ ಮಂತಾಳೆ ಆಳಂದ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರು. ಈ ದೂರಿನ ಅನ್ವಯ ಪ್ರಕರಣ ದಾಖಲಾಗಿತ್ತು. ಈ ಹಿನ್ನೆಲೆಯಲ್ಲಿ ಎಸ್‌ಪಿ ಅಡ್ಡೂರು ಶ್ರೀನಿವಾಸಲು, ಹೆಚ್ಚುವರಿ ಎಸ್‌ಪಿ ಮಹೇಶ ಮೇಘಣ್ಣನವರ್, ಆಳಂದ ಡಿಎಸ್‌ಪಿ ತಮ್ಮಾರಾಯ ಪಾಟೀಲ ಅವರ ಮಾರ್ಗದರ್ಶನದಲ್ಲಿ ಆಳಂದ ಪೊಲೀಸ್ ಠಾಣೆ ಪಿಐ ಶರಣಬಸಪ್ಪ ಕೋಡ್ಲಾ, ಪಿಎಸ್‌ಐ ಸಂಜೀವ, ಸಿಬ್ಬಂದಿಗಳಾದ ಮೆಹಬೂಬ್ ಶೇಖ್, ಚಂದ್ರಶೇಖರ್, ಗಣಪತರಾವ, ಸಚಿನ್, ಜಾಕೀರ್, ವೆಂಕಟರಾವ, ಸಿದ್ದರಾಮ ಮತ್ತು ಮೌಲಾಲಿ ಅವರು ತನಿಖೆ ನಡೆಸಿ 8 ಜನ ಆರೋಪಿಗಳನ್ನು ಬಂಧಿಸಿ 25 ಸಾವಿರ ರೂ.ನಗದು, 1.10 ಲಕ್ಷ ರೂ.ಮೌಲ್ಯದ ಎರಡು ಎಮ್ಮೆಗಳು, 55 ಸಾವಿರ ರೂ. ಮೌಲ್ಯದ ಒಂದು ಆಕಳು, ಕೃತ್ಯಕ್ಕೆ ಬಳಸಿದ 3 ಲಕ್ಷ ರೂ.ಮೌಲ್ಯದ ಗೂಡ್ಸ್ ವಾಹನ ಸೇರಿ 4.90 ಲಕ್ಷ ರೂ.ಮೌಲ್ಯದ ಸ್ವತ್ತನ್ನು ಜಪ್ತಿ ಮಾಡಿ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಆಳಂದ ಪೊಲೀಸರ ಕರ್ತವ್ಯಕ್ಕೆ ಎಸ್‌ಪಿ ಅಡ್ಡೂರು ಶ್ರೀನಿವಾಸಲು ಅವರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.